ಮಾನಸಿ

ಜುಲೈ 2004 ತಿಂಗಳ ಪತ್ರಿಕೆ

ಮಾನಸ ತಿಂಗಳ ಪತ್ರಿಕೆ ಜುಲೈ 2004
ಸಂಪುಟ 19 ಸಂಚಿಕೆ : 6

ವಿಳಾಸ :
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

ಸೂಚನೆ : ಸೂಚನೆ : ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

* ಒಂದು ವಿಶೇಷಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ.....

ಮೈಸೂರು

ಮೈಸೂರಿನಲ್ಲಿ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : 2329, 12ನೇ ಮೇನ್, 2ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ-ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಮಹಿಳಾ ಚಳುವಳಿ ಮಹಿಳೆಯ ಮೇಲಿನ ಹಿಂಸೆಯ ಬಗ್ಗೆ 1960 ರಿಂದಲೂ ಅತ್ಯಂತ ತೀವ್ರ ಗತಿಯಲ್ಲಿ ಹೋರಾಟ ನಡೆಸುತ್ತಲೇ ಬಂದಿದೆ. ಅದು ವರದಕ್ಷಿಣೆ, ಅತ್ಯಾಚಾರ, ಪತ್ನಿಯ ಮೇಲಿನ ಹಿಂಸೆ, ಮನೆಗೆಲಸ, ಉದ್ಯೋಗದ ಸ್ಥಳದಲ್ಲಿನ ಹಿಂಸೆ ಹೀಗೆ ಹಲವಾರು ಸಮಸ್ಯೆಗಳ ಸುತ್ತ ಹೋರಾಟ ನಡೆಸುತ್ತಾ ಬಂದಿದ್ದಾಗ್ಯೂ ಹಿಂಸೆಯ ಪ್ರಮಾಣ ಕಡೆಮೆಯಾದ ವಾತಾವರಣ ನಮ್ಮ ಸುತ್ತಲೂ ಕಂಡು ಬರದಿರುವುದು ಶೋಚನೀಯ : ಜಾಗತೀಕರಣದ ಹಿನ್ನೆಲೆಯಲ್ಲಿ ಅಸಂಘಟಿತ ಹಾಗೂ ಸಂಘಟಿತ ವರ್ಗದ ಮಹಿಳೆಯರು ಇನ್ನಷ್ಟು ಹೆಚ್ಚು ಹೆಚ್ಚು ಮೂಲೆಗುಂಪಾಗುತ್ತಿದ್ದಾರೆ. ಪ್ರತಿಭೆ, ನೈಪುಣ್ಯತೆಗಳು ಕೆಲವೇ ಕೆಲವು ಮಂದಿಗೆ ದಕ್ಕುವ ವಸ್ತುಗಳಾಗುತ್ತಿವೆ.

ಅಂದರೆ ಇಂದು ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ದೌರ್ಜನ್ಯಗಳ ಮರು ವಿಶ್ಲೇಷಣೆ ನಡೆಯಬೇಕಿದೆ. ಹಿಂಸೆಯ ಮುಖಗಳು ಕ್ರೂರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಹಿಂಸೆಯನ್ನು ಕೌಂಟರ್ ಮಾಡುವ ವಿಧಾನಗಳಲ್ಲೂ ನಾವು ವಿಭಿನ್ನವಾದ ತಂತ್ರಗಳನ್ನು ಬಳಸಿಕೊಳ್ಳಬೇಕಾಗಿದೆ. ಕೋರ್ಟು, ಕಛೇರಿ, ಲಾಯರ್, ಪೋಲೀಸರನ್ನೊಳಗೊಂಡ ನಮ್ಮ ವ್ಯವಸ್ಥೆ ಮಹಿಳೆಯರ ಮೇಲಿನ ಹಿಂಸೆಯನ್ನು ತಡೆಗಟ್ಟುವಲ್ಲಿ ವೈಫಲ್ಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಾವು ಬೇರೆಯದೇ ಆದ ರೀತಿಯಲ್ಲಿ ಹಿಂಸೆಯ ಮುಖಗಳನ್ನು ತಡೆಗಟ್ಟುವ ಬಗ್ಗೆ ಮರುಚಿಂತನೆ - ನಡೆಸಬೇಕಾಗಿದೆ.

ಈ ಮೊದಲ ದಶಕದಲ್ಲಿ ವೈಯಕ್ತಿಕವೆನಿಸಿದ್ದ ಕೌಟುಂಬಿಕ ಹಿಂಸೆಯ ಹರವುಗಳು ಹೊರಗಿನ ಸಾಮಾಜೀಕರಣದ ಮೇಲೆ ಒತ್ತಡ ಬೀರಿದ್ದರೆ, ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಆರ್ಥಿಕ ಏರು-ಪೇರುಗಳು ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ಸ್ವರೂಪವನ್ನು ಇನ್ನಷ್ಟು ವಿರೂಪಗೊಳಿಸಿವೆ. ಮಹಿಳೆಯರ ಸಾವಿನ ನಿಗೂಢತೆಯು ಹೆಚ್ಚಾಗ ತೊಡಗಿದೆ. ಎಲ್ಲಾ ವರ್ಗದ ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಮರು ಚಿಂತನೆಯೊಂದಿಗೆ-ಹೊಸ ರೀತಿಯ ಸಾಮರ್ಥ್ಯಗಳನ್ನು ಮಹಿಳೆಯರು ಬೆಳಿಸಿಕೊಳ್ಳುವತ್ತ ನಾವು ಗಮನ ಹರಿಸಬೇಕಾಗಿದೆ.

ಸಂಪಾದಕ ಮಂಡಳಿ

ದುಡಿಮೆ ದಿನಚರಿ

ನಮ್ಮ ಸಮಾಜದಲ್ಲಿ ಮಹಿಳೆಯರ ದುಡಿಮೆಯ ಮೌಲ್ಯವನ್ನು ಕಡೆಗಣಿಸಲಾಗಿದೆ. ಮನೆ ಒಳಗೆ ಹಾಗೂ ಮನೆಯ ಹೊರಗೆ ಆಕೆ ಮಾಡುವ ಕೆಲಸದ ಲೆಕ್ಕವನ್ನು ಯಾರೂ ಇಡುವುದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಆಕೆ ಮಾಡುವ ಕೆಲಸಕ್ಕೆ ಬೆಲೆಯಿಲ್ಲ. ಅದು ಸೇವೆಯ ಸ್ವರೂಪವನ್ನು ಪಡೆಯುತ್ತದೆ. ಆಕೆಯ ಕೆಲಸ ನಿರುತ್ಪಾದಕ. ಆದರೆ ಪುರುಷ ಮಾಡುವ ಕೆಲಸ ಉತ್ಪಾದಕ. ಆತ ಕೆಲಸ ಮಾಡಲಿ, ಬಿಡಲಿ, ಮಾಡದೇ ಇರಲಿ, ಆತನ ಅಸ್ಥಿತ್ವವೇ ಉತ್ಪಾದಕ, ಹಾಗಾಗಿ ಆತ ಸಮಾಜದ ಎಲ್ಲ ಸವಲತ್ತುಗಳ ಸರದಾರ. ಇದು ನಮ್ಮ ಸಮಾಜದಲ್ಲಿ ಎಲ್ಲರೂ ನಂಬಿರುವ ಸುಳ್ಳಿನ ರೂಪದ ಸತ್ಯ, ಗ್ರಾಮೀಣ ಪ್ರಾದೇಶದ ಎರಡು ಕುಟುಂಬದಲ್ಲಿ ಗಂಡ, ಹೆಂಡತಿ ಮಾಡುವ ಕೆಲಸದ ವಾಸ್ತವ ಸತ್ಯ.

ಪ್ರೇಮಾಗೆ ನಾಲ್ಕು ಜನ ಮಕ್ಕಳು. ಮೂವರು ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ಗಂಡ ಚನ್ನೇಗೌಡ. ಪ್ರಮುಖ ಉದ್ಯೋಗ ಹೈನುಗಾರಿಕೆ ಹಾಗೂ ವ್ಯವಸಾಯ.

ಪ್ರೇಮಾ : ಬೆಳಿಗ್ಗೆ 6 ಗಂಟೆಗೆ ಏಳುವುದು. 6 ರಿಂದ 11 ರವರೆಗೆ, ಮುಖ ತೊಳೆದು ಕೊಟ್ಟಿಗೆಗೆ ಹೋಗುವುದು, ಹಸುವಿಗೆ ಹಿಂಡಿ ಹಾಕುವುದು, ಕೊಟ್ಟಿಗೆ ಗುಡಿಸುವುದು, ಹುಲ್ಲು ಹಾಕುವುದು, ಹಾಲು ಕರೆದು ಡೈರಿಗೆ ಹಾಲು ಹಾಕುವುದು, ಒಲೆ ಅಂಟಿಸುವುದು. ಕಾಫಿ ಮಾಡುವುದು ಅನ್ನ, ಸಾರು, ಹಿಟ್ಟು ಮಾಡುವುದು, ನೀರು ಕಾಯಿಸುವುದು. ನೀರು ಹಿಡಿಯುವುದು, ಪಾತ್ರೆ ತೊಳೆಯುವುದು. ಮನೆಗುಡಿಸುವುದು, ಒರೆಸುವುದು, ಬಟ್ಟೆ ಒಗೆಯುವುದು, ಒಣಗಿಸುವುದು. 11ರಿಂದ ಮಧ್ಯಾಹ್ನ 3 ರವರೆಗೆ, ಹೊಲಕ್ಕೆ ಹೋಗುವುದು, ಹುಲ್ಲು ಕೊಯ್ಯುವುದು, ಹಸು ಮೈ ತೊಳೆಯುವುದು, ಮೇಯಿಸುವುದು, ಕಳೆ ಕೀಳುವುದು, ಕೆಲವು ಸಂದರ್ಭದಲ್ಲಿ ಆಳುಗಳನ್ನು ಇಟ್ಟು ಕೊಂಡು ಕೆಲಸ ಮಾಡಿಸುವುದು, 3 ರಿಂದ ರಾತ್ರಿ 9-30 ಹಸುಗೆ ನೀರು ಇಡುವುದು, ಹುಲ್ಲು ಹಾಕುವುದು, ಹಿಂಡಿ ಇಡುವುದು ಹಾಲು ಕರೆಯುವುದ, ಡೈರಿಗೆ ಹಾಲು ಹಾಕಿ ಬರುವುದು, ಅಡಿಗೆ ಮಾಡುವುದು, ಬಡಿಸುವುದು, ಪಾತ್ರೆ ತೊಳೆಯುವುದು, ಊಟ ಮಾಡುವುದು, ರಾತ್ರಿ 9-30ಗೆ ಟಿ.ವಿ.ನೋಡುವುದು 10-30 ನಿದ್ರೆಮಾಡುವುದು.

ಚನ್ನೇಗೌಡು : ಬೆಳಿಗ್ಗೆ 6-9 ಗಂಟೆಗೆ ಏಳುವುದು. ನಿತ್ಯ ಕರ್ಮಗಳನ್ನು ಮುಗಿಸುವುದು. 9-10 ತಿಂಡಿ ತಿನ್ನುವುದು. ಎಲೆಕ್ಟ್ರಿಕಲ್ ಕೆಲಸ ಇದ್ದರೆ ದೊಡ್ಡಬಳ್ಳಾಪುರ ಟೌನ್‌ಗೆ ಹೋಗುವುದು. ಕೆಲಸ ಇರದೇ ಇದ್ದ ದಿನ ಊರಲ್ಲಿ ತಿರುಗಾಡಿಕೊಂಡು ಇರುವುದು. ಮಧ್ಯಾಹ್ನ 2 - 5 ರ ವರೆಗೆ ಊಟ, ನಿದ್ದೆ. ಸಾಯಂಕಾಲ ಊರಲ್ಲಿ ಇದ್ದರೆ ತಿರುಗಾಟ. ಟಿ.ವಿ. ನೋಡುವುದು 9 - 10.30 ಊಟ, ಟಿ.ವಿ ನೋಡುವುದು ನಿದ್ರೆ ಮಾಡುವುದು.

ಸುಜಾತ : ಬೆಳಿಗ್ಗೆ 5 ಗಂಟೆಗೆ ಏಳುವುದು.ಕೊಟ್ಟಿಗೆ ಗುಡಿಸುವುದು, ತಿಪ್ಪೆಗೆ ಕಸ ಹಾಕಿ ಬರುವುದು, ಮೇವು ಹಾಕುವುದು, ಪಾತ್ರೆ ತೊಳೆಯುವುದು, ಕಸ ಗುಡಿಸುವುದು, ಹಸು ಹೊರಗೆ ಕಟ್ಟುವುದು, ಹಾಲು ಕರೆಯುವುದು, ಡೈರಿಗೆ ಹಾಕಿ ಬರುವುದು, ನೀರು ಹಿಡಿಯುವುದು, ಕಾಫಿ ಮಾಡುವುದು, ಮಕ್ಕಳಿಗೆ ತಿಂಡಿ ಮಾಡುವುದು. ಸ್ಕೂಲಿಗೆ ತಯಾರು ಮಾಡುವುದು. ಇತ್ಯಾದಿ. 9 ರಿಂದ 11 ಬಟ್ಟೆ ಒಗೆಯುವುದು, ಒಣಗಿಸುವುದು, ಅನ್ನ ಸಾರು ಮುದ್ದೆ ಮಾಡುವುದು.

11 ರಿಂದ 4 ರವರೆಗೆ, ತೋಟಕ್ಕೆ ಹೋಗುವುದು, ಹಸು ಮೈ ತೊಳೆಯುವುದು, ಮೇಯಿಸುವುದು, ಹುಲ್ಲು ಕೊಯ್ಯುವುದು, ಟೊಮ್ಯಾಟೋ, ರಾಗಿ, ಹುರಳಿ, ಬೆಳೆದರೆ ಕಳೆಕೀಳುವುದು, ಔಷಧಿ ಹೊಡೆಯುವುದು, ನೀರು ಕಟ್ಟುವುದು, ಇತ್ಯಾದಿ. 4 ರಿಂದ ರಾತ್ರಿ 9 ರವರೆಗೆ ಹಸುವಿಗೆ ನೀರು ಕುಡಿಸುವುದು, ಮೇವು ಹಾಕುವುದು, ಹಾಲು ಕರೆಯುವುದು, ಡೈರಿಗೆ ಹಾಲು ತೆಗೆದುಕೊಂಡು ಹೋಗಿ ಹಾಕುವುದು, ಕಾಫಿ ಮಾಡುವುದು, ಅಡಿಗೆ ಮಾಡುವುದು, ಊಟ ಬಡಿಸುವುದು, ಪಾತ್ರೆ ತೊಳೆಯುವುದು, ಊಟ ಮಾಡುವುದು, 9.10 ಟಿ.ವಿ. ನೋಡುವುದು ನಿದ್ರೆ ಮಾಡುವುದು.

ಚಿಕ್ಕ ಮಾಸ್ತಿಯಪ್ಪ : ಬೆಳಿಗ್ಗೆ 7 ಗಂಟೆಗೆ ಏಳುವುದು, 7.30 - 8.00 ತೋಟದ ಹತ್ತಿರ ಹೋಗಿ ನೋಡಿ ಕೊಂಡು ಬರುವುದು. 8 ರಿಂದ 9 ಸ್ನಾನ, ತಿಂಡಿ ತಿನ್ನುವುದು, ದೊಡ್ಡ ಬಳ್ಳಾಪುರಕ್ಕೆ ಸೊಸೈಟಿಯಲ್ಲಿ ಲೆಕ್ಕ ಬರೆಯಲು ಹೋಗುವುದು. 9 ರಿಂದ 1-30 ವರೆಗೆ ಸೊಸೈಟಿಯಲ್ಲಿ ಕೆಲಸ, 1.30 ಯಿಂದ 4.30ವರೆಗೆ ಊಟ, ನಿದ್ದೆ, 4-30 ಯಿಂದ 6 ಟಿ.ವಿ ನೋಡುವುದು. 1 ಗಂಟೆ ಮಕ್ಕಳಿಗೆ ಪಾಠ ಹೇಳಿ ಕೊಡುವುದು. .9.10 ಟಿ.ವಿ. ನೋಡುವುದು ನಿದ್ರೆ ಮಾಡುವುದು.

ಪ್ರೇಮಾ ಸುಮಾರು ದಿನಕ್ಕೆ 15 ಗಂಟೆಗಳ ಕಾಲ ಬಿಡುವಿಲ್ಲದೆ, ದುಡಿಯುತ್ತಾಳೆ. ಸುಜಾತ ದಿನಕ್ಕೆ 17 ಗಂಟೆಗಳು ದುಡಿಯುತ್ತಾಳೆ.

ಚನ್ನೇಗೌಡ ಹಾಗೂ ಚಿಕ್ಕಮಾಸ್ತಿಯಪ್ಪ ಒಂದು ದಿನದಲ್ಲಿ 3 ರಿಂದ 4 ಗಂಟೆಗಳ ಕಾಲ ಕೆಲಸ ಮಾಡಿದ್ರೆ ಹೆಚ್ಚು. ಇವರಿಬ್ರೂ ಮನೆ ಯಜಮಾನ್ರು, ಪ್ರತಿಯೊಂದು ವಿಚಾರದಲ್ಲಿ, ಹಣಕಾಸಿನ ವಿಚಾರದಲ್ಲಿ ಯಜಮಾನಿಕೆ ನಡೆಸುವವರು, ತೀರ್ಮಾನ ತೆಗೆದು ಕೊಳ್ಳುವುದು, ಇವರೆ !

ಪ್ರೇಮಾ ಹಾಗೂ ಸುಜಾತ ಮಾಡುವ ಕೆಲಸ ಪ್ರಮುಖ ಕೆಲಸದ ವಿವರ ಮಾತ್ರ ಇದು. ಇದರ ಜೊತೆಗೆ ಸಾಕಷ್ಟು ಇತರೇ ಕೆಲಸ ಸಹ ಮಾಡ್ತಾರೆ. ಇದರಲ್ಲಿ ಯಾರು ನಿರುತ್ಪಾದಕರು ? ಯಾರು ಉತ್ಪಾದಕರು? ಸುಜಾತ ಹಾಗೂ ಪ್ರೇಮಾರ ಕೆಲಸಕ್ಕೆ ಬೆಲೆ ಇಲ್ಲವೆ? ಅದರ ದುಡಿಮೆಗೆ ಉತ್ಪಾದಕ ಮೌಲ್ಯವನ್ನು ದೊರಕಿಸಿ ಕೊಡುವುದು ಹೇಗೆ ? ಪುರುಷ ಪ್ರಧಾನ ಸಮಾಜ ಅವರ ದುಡಿಮೆಯನ್ನು ಅರ್ಥೈಸುವ ಪರಿಯಲ್ಲಿ ಲಿಂಗ ತಾರತಮ್ಯ ಅಡಗಿದೆಯಲ್ಲಿವೆ ?

ದಮಯಂತಿ

ನಾನು ದಮಯಂತಿ. ನನ್ನ ಕಥೆಯನ್ನು ನೀವು ಕೇಳಿದ್ದೀರಿ. ಏಕೆಂದರೆ ಅದನ್ನು ಅಂದಿನಿಂದಲೂ ಹೇಳುತ್ತಾ ಬಂದಿದ್ದಾರೆ. ನನ್ನನ್ನು ಪತಿವ್ರತೆ, ಪ್ರೇಮಮಯಿ, ತ್ಯಾಗಮಯಿ, ಎಂದೆಲ್ಲಾ ಹಾಡಿ ಹೊಗಳಿದ್ದಾರೆ. ನನಗಾದ ಅನ್ಯಾಯಕ್ಕೆ ವಿಧಿ, ಅದೃಷ್ಟ ಎಂದು ಕರೆದಿದ್ದಾರೆ. ನನ್ನ ಕಥೆಯ ಇನ್ನೊಂದು ಮುಖವನ್ನು ಯಾರೂ ಹೇಳಿಲ್ಲ. ಅದು ನನಗೆ ಮಾತ್ರ ತಿಳಿದಿದೆ. ಅದನ್ನು ಹೇಳದ ಹೊರತು ನಿಮಗದು ತಿಳಿಯುವುದೇ ಇಲ್ಲ. ಅದನ್ನೇ ನಾನೀಗ ಹೇಳಹೊರಟಿದ್ದೇನೆ. ಕೇಳುವಿರಿ ತಾನೇ ?

ನಾನು ವಿದರ್ಭದ ರಾಜಕುಮಾರಿ. ರಾಜನಾದ ಭೀಮನ ಏಕಮಾತ್ರ ಪುತ್ರಿ. ಅಪ್ಪ-ಅಮ್ಮನ ಕಣ್ಮಣಿ. ಸುಖದ ಸುಪ್ಪತ್ತಿಗೆಯಲ್ಲಿ ಎಲ್ಲರ ಪ್ರೀತಿಯ ಮಡಿಲಲ್ಲಿ ಬೆಳೆದೆ. ಯೌವ್ವನದ ದಿನಗಳು ಕಾಲಿಟ್ಟವು. ವಸಂತದ ಚಿಗುರಿನಂತೆ ನನ್ನ ಮೈಮನಗಳು ಅರಳಿದವು. ಬಾಳ ಸಂಗಾತಿಯ ಆಗಮನಕ್ಕಾಗಿ ಕಾದು ನಿಂತವು.

ಒಮ್ಮೆ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿ ರಾಜಾಶ್ರಯವನ್ನು ಪಡೆಯಲೆಂದು ಊರಿಂದೂರಿಗೆ ಪ್ರಯಾಣಿಸುವ ಪಂಡಿತರು ವಿದರ್ಭಕ್ಕೂ ಬಂದಿಳಿದಿದ್ದರು. ಮರು ದಿನವೇ ಅವರ ಪಾಂಡಿತ್ಯ ಪ್ರದರ್ಶನಕ್ಕೆಂದು ಸಕಲ ಏರ್ಪಾಡುಗಳು ನಡೆದಿದ್ದವು. ಅಲ್ಲೇನು ನಡೆಯುವುದೆಂದು ತಿಳಿಯುವ ಕುತೂಹಲದಿಂದ ನಾನೂ ಆಸ್ಥಾನಕ್ಕೆ ಹೋದೆ. ಅವರಲ್ಲೊಬ್ಬ ನಿಷಾಧರಾಜನಾದ ನಳನ ಬಗ್ಗೆ ಹೇಳ ತೊಡಗಿದ.

ಅವನ ಚೆಲುವು, ಧೈರ್ಯ ಸಾಹಸಗಳನ್ನು ಬಣ್ಣಿಸ ತೊಡಗಿದ. ರಥವನ್ನು ಅತ್ಯಂತ ವೇಗದಿಂದ ಓಡಿಸುವ ಅವನ ನೈಪುಣ್ಯದ ಬಗ್ಗೆ ಅಚ್ಚರಿ ವ್ಯಕ್ತ ಪಡಿಸಿದ. ಅವನು ಅದಕ್ಕಾಗಿ ಇಡೀ ಭರತಖಂಡದಲ್ಲೇ ಪ್ರಸಿದ್ಧನೆಂದು ಹಾಡಿ ಹೊಗಳಿದ. ಇದನ್ನೆಲ್ಲಾ ಕೇಳುತ್ತಿದ್ದ ನನಗೆ ? ನಳನ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲವುಂಟಾಯಿತು. ದಿನದಿಂದ ದಿನಕ್ಕೆ ಅದು ಕೇವಲ ಕುತೂಹಲವಾಗುಳಿಯದೆ ಕಾತರವಾಗಿ ಪರಿಣಮಿಸಿತು. ಹಗಲಿರುಳು ನಾನು ಕಾಣದ, ಬರೀ ಕೇಳಿಬಲ್ಲವನ ಬಗ್ಗೆ ಚಿಂತಿಸತೊಡಗಿದೆ. ತಪ್ಪು ನನ್ನದಲ್ಲ, ಆ ವಯಸ್ಸಿನದಾಗಿತ್ತು. ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವ ಮನಸ್ಸಿನದಾಗಿತ್ತು. ಮಿಡಿಯುವ ಮನಕೆ ಸ್ಪಂದಿಸುವ ಬಾಳ ಸಂಗಾತಿಯೊಬ್ಬನ್ನು ಪಡೆಯುವ ಹಂಬಲ ಅದಾಗಿತ್ತು. ಮನದ ಅಚ್ಚ ಬಿಳಿಯ ಹಾಳೆಯ ಮೇಲೆ ನನ್ನ ಕಲ್ಪನೆಯ ನಳನ ಸುಂದರ ರೇಖಾಚಿತ್ರ ಮೂಡಿ ಬಂದಿತ್ತು ; ಅಲ್ಲದು ಅಚ್ಚಳಿಯದೆ ಉಳಿದುಬಿಟ್ಟಿತ್ತು.

ಒಂದು ದಿನ ಅರಮನೆಯ ಉದ್ಯಾನವನದಲ್ಲಿ ನನ್ನ ಸಖಿಯರೊಂದಿಗೆ ವಿಹರಿಸುತ್ತಿದೆ. ಆಗ ಬಂಗಾರದಂತೆ ಹೊಳೆವ ಹಂಸಗಳ ಹಿಂಡೊಂದು ಕಣ್ಣಿಗೆ ಬಿತ್ತು. ಅವುಗಳ ಸೌಂದರ್ಯಕ್ಕೆ ಬೆರಗಾಗಿ ನಾನೂ ಅವುಗಳೊಂದಿಗೆ ಹೆಜ್ಜೆಹಾಕಿದೆ. ನಾನವುಗಳನ್ನು ಸಮೀಪಿಸಿದಂತೆ ಹಂಸವೊಂದು ತಪ್ಪಿಸಿಕೊಂಡು ಉದ್ಯಾನವನದ ತುದಿಯೊಂದಕ್ಕೆ ಬಂದು ನಿಂತಿತು. ಹತ್ತಿರ ಹೋದ ನನ್ನೊಡನೆ ಮನುಷ್ಯರಂತೆ ಮಾತಾಡ ತೊಡಗಿತು : 'ಎಲೈ ಚಲುವೆ ದಮಯಂತಿ; ನಿಷಾಧ ದೇಶದಲ್ಲಿ ನಳನೆಂಬ ರಾಜನಿದ್ದಾನೆ. ಅವನು ಚೆಲುವ, ನೀನು ಚಲುವೆ, ನೀನವನ ಹೆಂಡತಿಯಾದರೆ ನಿನ್ನ ಬದುಕು ಬಂಗಾರವಾಗುತ್ತದೆ. ನೀನು ಮಹಿಳೆಯರ ಆಭರಣದಂತಿದ್ದೀಯೆ. ನಳನೋ ಶ್ರೇಷ್ಠರಲ್ಲಿ ಶ್ರೇಷ್ಠನು ನಿಮ್ಮಿಬ್ಬರದು ಒಂದು ಅಪೂರ್ವ ಸಂಗಮವಾಗುತ್ತದೆ' ಎಂದಿತು.

ಇದನ್ನು ಕೇಳಿ ನನಗೆ ನಾಚಿಕೆಯಾಯಿತು.ಅದುವರೆಗೆ ಅಸ್ಪಷ್ಟವಾಗಿ ನನ್ನೊಳಗೆ ಹುದುಗಿದ್ದ ನಳನ ಮೇಲಿನ ಪ್ರೀತಿ ಸ್ಪಷ್ಟ ರೂಪ ತಳೆಯತೊಡಗಿತು. ನನಗೆ ಸಿಕ್ಕ ಅವಕಾಶದ ಪ್ರಯೋಜನವನ್ನು ಪಡೆಯ ಬೇಕೆಂದುಕೊಂಡೆ. ನಾನು ನಳನನ್ನು ಈಗಾಗಲೇ ಪ್ರೀತಿಸುತ್ತಿರುವುದಾಗಿ ಅದಕ್ಕೆ ತಿಳಿಸಿದೆ. ನನ್ನ ಪ್ರೇಮವನ್ನು ಮರೆಯದೆ ಅವನಿಗೆ ತಿಳಿಸೆಂದು ಅದನ್ನು ಕೇಳಿಕೊಂಡೆ. ಹೀಗೆ ನನ್ನ ಪ್ರೀತಿ ಸಂದೇಶ ನೀಡಿ ಆ ಹಂಸವನ್ನು ನನ್ನ ಪರ ರಾಯಭಾರಕ್ಕೆ ಒಪ್ಪಿಸಿದೆ. ಆಗ ಮತ್ತೊಂದು ಯೋಚನೆ ನನ್ನ ತಲೆಯಲ್ಲಿ ಬರಲಿಲ್ಲ. ಆ ಹಂಸ ನಳನೇ ಕಳುಹಿಸಿದ ಅವನ ಪರ ಸಂದೇಶ ಹೊತ್ತ ದೂತನೆಂಬ ಅನುಮಾನ ಒಂದು

ಗುಲಗಂಜಿಯಷ್ಟೂ ಕಾಡಲಿಲ್ಲ. ಹೀಗೆ ನಳ ಬೀಸಿದ ಪ್ರೇಮದ ಜಾಲದಲ್ಲಿ ನಾನು ಸಂಪೂರ್ಣವಾಗಿ ಸಿಕ್ಕು ಬಿದ್ದಿದ್ದೆ.

ಅನಂತರದ ದಿನಗಳಲ್ಲಿ ನನಗೆ ನಳನ ಪ್ರೇಮದ ಗುಂಗಿನಲ್ಲಿ ಮೈಮರೆಯುವುದನ್ನುಳಿದು ಹಸಿವು ನೀರಡಿಕೆಗಳೂ ಇಲ್ಲವಾದವು. ಅವನಿಲ್ಲದ ಬದುಕು ಬೇಡವಾಯಿತು. ಹಗಲು ಶೂನ್ಯವೆನಿಸಿದರೆ ಇರುಳು ಬಿಸಿಲ ಬೇಸಿಗೆಯಾಗಿ ಕಾಡಿತು. ಇದಕ್ಕೆ ಪರಿಹಾರ ಮಾತ್ರ ನನ್ನ ಬಳಿಯಿರಲಿಲ್ಲ. ಇದಕ್ಕೆ ಪರಿಹಾರ ಮಾತ್ರ ನನ್ನ ಬಳಿಯಿರಲಿಲ್ಲ. ಅಸಹಾಯ ಕತೆಯಿಂದಲೋ ಅಥವಾ ನಾಚಿಕೆಯಿಂದಲೋ ಯಾವುದೇ ಪ್ರಯತ್ನಕ್ಕೆ ಕೈಹಾಕದೆ ನನ್ನೊಳಗೆ ನಾನೇ ನವೆಯುತ್ತಿದ್ದೆ. ನನ್ನಲ್ಲಾದ ಈ ಪರಿವರ್ತನೆ ನನ್ನ ತಂದೆಯ ಕಿವಿಗೆ ಮುಟ್ಟಿತು. ಅವರು ನನ್ನನ್ನು ಕೇಳದೆಯೇ ಅದಕ್ಕೆ ಕಾರಣವನ್ನು ಸರಿಯಾಗಿಯೇ ಊಹಿಸಿದರು. ನನ್ನ ಸ್ವಯಂವರವನ್ನು ಏರ್ಪಡಿಸಲು ನಿರ್ಧರಿಸಿದರು. ಅದಕ್ಕೆ ಅಗತ್ಯವಾದ ಸಕಲ ಸಿದ್ಧತೆಗಳು ತರಾತುರಿಯಲ್ಲಿ ನಡೆದವು.

ನಾನೀಗ ಸಂತಸ - ಸಂಭ್ರಮಗಳಿಂದ ಆ ದಿನಕ್ಕಾಗಿ ಕಾಯತೊಡಗಿದೆ. ನನ್ನನ್ನು ವರಿಸಲು ನಳ ಬಂದೇ ಬರುತ್ತಾನೆಂದು ತಿಳಿದಿತ್ತು. ಸ್ವಯಂವರದ ದಿನ ಹತ್ತಿರವಾದಂತೆ ನಿಂತಲ್ಲಿ ನಿಲ್ಲಲಾಗದೆ ಚಡಪಡಿಸುತ್ತಿದೆ. ಎಲ್ಲಿಲ್ಲದ ಆತಂಕ, ಕಾತರಗಳು ನನ್ನ ಬೆಂಬಿಡದೆ ಕಾಡತೊಡಗಿದವು. ಯಾವ್ಯಾವ ದೇಶಗಳಿಂದ ಯಾರು ಯಾರು ರಾಜಕುಮಾರರು ನನ್ನ ಕೈಹಿಡಿಯ ಬಯಸಿ ವಿದರ್ಭಕ್ಕೆ ಬಂದಿದ್ದಾರೆಂದು ನನ್ನ ಸಖಿಯರಿಂದ ತಿಳಿಯುತ್ತಿತ್ತು. ನರೋತ್ತಮರು ಮಾತ್ರವಲ್ಲ, ದೇವಾನು ದೇವತೆಗಳೂ ನಾಳಿನ ಸ್ವಯಂವರದಲ್ಲಿ ಭಾಗವಹಿಸಲಿದ್ದಾರೆಂದು ಸುದ್ದಿ ನನ್ನವರೆಗೆ ತಲುಪಿತಾದರೂ ನಳನ ಬಗ್ಗೆ ಯಾವುದೇ ಸುದ್ದಿಯಿಲ್ಲದಿರುವುದು ನನ್ನಲ್ಲಿ ಆತಂಕಕ್ಕೆಡೆಮಾಡಿತು. ಅಷ್ಟರಲ್ಲಿ ಅಂತಃಪುರದ ಬಾಗಿಲಲ್ಲಿ ಚೆಲುವನೋರ್ವ ನಿಂತಿದ್ದುದು ನನ್ನ ಹೊರತಾಗಿ ಸಂಭ್ರಮಿಸುತ್ತಿದ್ದ ಸಖಿಯರ ಗಮನಕ್ಕೆ ಬರಲಿಲ್ಲ. ಅರಮನೆಯ ಕಾವಲುಗಾರರ ಕಣ್ತಪ್ಪಿಸಿ ಇವನು ಹೇಗೆ ಒಳಗೆ ಬಂದನೆನ್ನುವ ಅಚ್ಚರಿ, ಸಂಶಯ ಒಂದೆಡೆಯಾದರೆ, ಇವನಾರೆಂದು ತಿಳಿಯುವ ಕಾತರ ಇನ್ನೊಂದೆಡೆ. ನನ್ನನ್ನು ಸುತ್ತುವರಿದಿದ್ದ ಗೆಳತಿಯರಿಂದ ತಪ್ಪಿಸಿಕೊಂಡು ಅವನ ಬಳಿಗೆ ಧಾವಿಸಿದೆ. ಆತನನ್ನು ಸಮೀಪಿಸುತ್ತಲೇ ಅವನು, 'ಎಲೆ ಸೌಭಾಗ್ಯವತಿ, ನಾನು ನಳ' ಎಂದು ಪರಿಚಯಿಸಿಕೊಂಡ. ನನಗೆ ಸ್ವರ್ಗವೇ ಧರೆಗಿಳಿದು ಬಂದಂತಾಯಿತು. ನಾನು ಬಯಸಿದ ದೈವ ನನ್ನೆದುರೇ ಪ್ರತ್ಯಕ್ಷವಾದಾಗ ನನಗೇನು ಮಾಡುವುದೆಂದೇ ತೋಚಲಿಲ್ಲ. ಇವನೀಗ ತನ್ನ ಪ್ರೇಮ ನಿವೇದನೆಗೆ ಬಂದಿರಬಹುದೆ ? ನಾನೇನು ಮಾಡಲಿ ? ಹೇಗೆ ಪ್ರತಿಕ್ರಿಯಿಸಲಿ ? ಎಂದೆಲ್ಲಾ ಯೋಚನೆಗಳು ನನ್ನಲ್ಲಿ ಗೊಂದಲ ಮೂಡಿಸಿದವು. 'ನಮ್ಮನ್ನು ಯಾರಾದರೂ ಕಂಡರೆ?' ಎಂದು ಗಾಬರಿಯೂ ಆಯಿತು. ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡವನಂತೆ ಅವನೇ ತನ್ನ ಮಾತನ್ನು ಮುಂದುವರಿಸಿದ: 'ನಾನು ದೇವದೂತನಾಗಿ ಬಂದಿದ್ದೇನೆ! ಎಲೈ ಮನೋಹರಿ, ಇಂದ್ರ, ಅಗ್ನಿ, ಯಮ ಮತ್ತು ವರುಣರು ನಿನ್ನ ಕೈಹಿಡಿಯಲು ಕಾತರರಾಗಿದ್ದಾರೆ. ಅವರಲ್ಲೊಬ್ಬನನ್ನು ವರಿಸುವಂತೆ ನಿನ್ನನ್ನೊಪ್ಪಿಸಲು ನನ್ನನ್ನಿಲ್ಲಿಗೆ ಕಳುಹಿಸಿದ್ದಾರೆ. ಆದರೆ ಮಾನಿನಿ, ನಿನಗಿಷ್ಟವಿದ್ದಂತೆ ಮಾಡು.

ನನಗೆ ಒಮ್ಮೆಗೇ ಸಿಡಿಲು ಗುಡುಗುಗಳು ಅಪ್ಪಳಿಸಿದಂತಾಯಿತು. ಭೂಮಿಯೇ ಬಾಯ್ತೆರೆದಂತಾಯಿತು. ಇದೇನು ? ನಾನು ಕೇಳುತ್ತಿರುವುದು ನಿಜವೆ ? ಇದೇನು ಹೇಳುತ್ತಿದ್ದಾನಿವ ?! ಇದನ್ನು ಹೇಳಲು ಇಲ್ಲಿಗೇಕೆ ಬರಬೇಕಿತ್ತು? ನಾನಿವನನ್ನು ಪ್ರೀತಿಸುತ್ತಿರುವೆನೆಂದು ಇವನಿಗೆ ತಿಳಿದಿಲ್ಲವೆ ? ಆ ಹಂಸ ನನ್ನ ಸಂದೇಶವನ್ನು ತಲುಪಿಸಲಿಲ್ಲವೆ ? ಒಂದು ವೇಳೆ ಹಾಗೆಂದು ಕೊಂಡರೂ ಇವನು ನನ್ನನ್ನು ಪ್ರೀತಿಸುತ್ತಿರುವನೆಂದು ಆ ಹಂಸ ಹೇಳಿದ ನೆನಪು. ಅಂದರೆ ಅದು ಸುಳ್ಳೆ ? ಇವನೇಕೆ ಈ ರಾಯಭಾರಕ್ಕೆ ಬರಬೇಕಿತ್ತು ? ತಾನು ಪ್ರೀತಿಸುವವಳನ್ನು, ತನ್ನನ್ನು ಪ್ರೀತಿಸುತ್ತಿರುವವಳನ್ನು ತನ್ನನ್ನು ಬಿಟ್ಟು ಬೇರಾರನ್ನೋ ವರಿಸೆಂದು ಹೇಳುವ ಇವನೆಂಥ ಕ್ಷತ್ರಿಯ ವೀರ ? ನಿಜವಾದ ಕ್ಷತ್ರಿಯರು ಅದೆಷ್ಟೇ ಕಷ್ಟವಾದರೂ ತಾವು ಬಯಸುವ ವಸ್ತು ಅಥವಾ ವ್ಯಕ್ತಿಯನ್ನು ಪಡೆದೇ ತೀರುವ ಛಲವುಳ್ಳವರಾಗಿರುತ್ತಾರೆ. ಆದರೆ ವೀರರಿಗೆ ಭೂಷಣವಲ್ಲದ ವಾಮಮಾರ್ಗದಿಂದ ಇಲ್ಲಿಗೆ ಬಂದಿರುವ ಇವನೆಂಥ ವೀರ ? ಅಲ್ಲದೆ ಹಾಗೆ ಬಂದಿರುವುದು ತನ್ನ ಪ್ರೀತಿಗಾಗಿ ಅಲ್ಲ, ಇನ್ನಾರನ್ನೋ ವರಿಸೆಂದು ಕೇಳಿಕೊಳ್ಳಲು ! ಛೇ ಇದೆಂಥ ವಿಪರ್ಯಾಸ ?! ನಾನು ಯಾರನ್ನು ಪೂಜಿಸುತ್ತಿದ್ದೆನೋ, ಯಾರ ಬರವಿಗಾಗಿ ಹಗಲಿರುಳು ಕಾದಿದ್ದೇನೋ, ಅವನಿಂದ ಇಂಥ ಮಾತುಗಳನ್ನು ಕೇಳುವಂತಾಯಿತೆ ? ನಾನೆಲ್ಲಿ ಎಡವಿದೆ ? ಛೇ, ನನ್ನದೆಂಥಾ ಆಲೋಚನೆ ! ತಪ್ಪೋ, ಒಪ್ಪೋ, ಬದುಕಿನಲ್ಲಿ ಒಂದು ಅಡಿ ಮುಂದಿಟ್ಟಾಗಿದೆ. ಇಟ್ಟ ಅಡಿ ಮತ್ತೆ ಹಿಂದೆಗೆಯುವಂತಿಲ್ಲ. ಬದುಕನ್ನು ಬಂದಂತೆ ಸ್ವೀಕರಿಸಬೇಕು. ಮುಂದಾಗುವುದರ ಕಡೆ ಗಮನ ಹರಿಸುವುದೇ ಜಾಣತನ. ಬೇರೆ ಮಾರ್ಗವಿಲ್ಲ ಎಂದು ಕೊಂಡೆ. ನಳನಿಗೆ, ಎಲೈರಾಜನೆ, ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ನನ್ನದೆಲ್ಲವೂ ನಿನ್ನದೇ. ನಾನೇನು ಮಾಡಬೇಕೆಂದು ಹೇಳು, ಅಲ್ಲ ಆಜ್ಞಾಪಿಸು. ಆದರಂತೆಯೇ ಮಾಡುತ್ತೇನೆ ಎಂದೆ.

ನಳನಿಗೆ ಈಗಲೂ ತಾನು ದೇವತೆಗಳಿಗೆ ಕೊಟ್ಟ ಭಾಷೆಯದೇ ಚಿಂತೆಯಿದ್ದಂತೆನಿಸಿತು. ನಾನು ದೇವತೆಗಳನ್ನು ವರಿಸುವಂತೆ ಹೇಗಾದರೂ ನನ್ನ ಮನವೊಲಿಸುವ ಕಡೆ ಗಮನವಿತ್ತು. ಅವನು ಮತ್ತೆ ಹೇಳಿದ: 'ನೀನು ನನ್ನಂಥ ಹುಲುಮಾನವನನ್ನು

ಪ್ರೀತಿಸುವೆಯೇಕೆ ? ದೇವತೆಗಳೇ ನಿನ್ನ ಕೈಹಿಡಿಯಲು ಸಿದ್ಧರಿದ್ದಾರಲ್ಲ!"ನನಗೆ ಹುಚ್ಚಿಯಂತೆ ಗಟ್ಟಿಯಾಗಿ ನಗಬೇಕೆನಿಸಿತು. ಪ್ರೀತಿಯನ್ನು ಇವನು ಅರ್ಥಮಾಡಿಕೊಂಡ ರೀತಿ, ಅದನ್ನೊಂದು ಮನಬಂದಂತೆ ಒಬ್ಬರಿಂದೊಬ್ಬರಿಗೆ ವರ್ಗಾಯಿಸಲು ಸಾಧ್ಯವಾಗುವ ವಸ್ತುವೇನೋ ಎಂಬಂತೆ ಹೇಳುತ್ತಿರುವ ಈ ಪರಿ ಕಂಡು ವಿಷಾದವಾಯಿತು. ತಾನು ದೇವತೆಗಳಿಗಿಂತ ಕಡಿಮೆಯವನೆಂಬ ಕೀಳರಿಮೆ ಇವನನ್ನು ಕಾಡುತ್ತಿರಬಹುದೆ ? ನನ್ನಂಥವಳು ದೇವತೆಗಳನ್ನು ಬಿಟ್ಟು ಇವನ ಕೈಹಿಡಿದರೆ ಮುಂದೆ ಪಶ್ಚಾತ್ತಾಪ ಪಡಬೇಕಾದೀತೆಂಬ ದೂರದೃಷ್ಟಿಯೆ ? ಅಥವಾ ಇದು ನನ್ನ ಬಗೆಗಿನ ನಿಜವಾದ ಕಾಳಜಿಯೆ ? ಆ ಕ್ಷಣದಲ್ಲಿ ನನಗೊಂದೂ ತೋಚಲಿಲ್ಲ. ಬುಳಬುಳನೆ. ಅಳತೊಡಗಿದೆ. 'ಎಲೈರಾಜನೆ, ನಾನೆಂದೋ ನಿನ್ನನ್ನು ಪತಿಯಾಗಿ ಸ್ವೀಕರಿಸಿಬಿಟ್ಟಿದ್ದೇನೆ' ಎಂದು ತಲೆಚಚ್ಚಿಕೊಳ್ಳಲಾರಂಭಿಸಿದೆ. ನಳನಿಗೆ ಗಾಬರಿಯಾಗತೊಡಗಿತು. ಇಷ್ಟಕ್ಕೆಲ್ಲಾ ತನ್ನ ನೇರ ಮಾತುಗಳೇ ಕಾರಣವೆಂದು ತಿಳಿದು 'ಇಷ್ಟರ ಮೇಲೆ ನಿನ್ನಿಷ್ಟ' ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮತ್ತೊಂದು ಮಾತು ಸೇರಿಸಿದ. ನನಗೆ ಇವನೀಗ ಅರ್ಥವಾಗಿದ್ದ. ಆದರೆ ಹೆಜ್ಜೆ ಹಿಂದೆಗೆಯುವಂತಿರಲಿಲ್ಲ ; ಕೊಟ್ಟ ಮನ ಹಿಂದಕ್ಕೆ ಪಡೆಯುವಂತಿರಲಿಲ್ಲ. ಉಳಿದಿದ್ದ ಮಾರ್ಗವೊಂದೇ. ಎಲ್ಲರ ಸಮ್ಮುಖದಲ್ಲಿ ಇವನನ್ನುಗಂಡನನ್ನಾಗಿ ಸ್ವೀಕರಿಸುವುದು. ಇವನ ಕೊನೆಯ ಮಾತು ಸ್ವಲ್ಪ ಸಮಾಧಾನ ತಂದಿತ್ತು. ಇವನಿಗೊಂದು ನನ್ನ ಕೊನೆಯ ಮಾತು ಹೇಳಲೇಬೇಕಿತ್ತು. ಅದನ್ನೇ ಹೇಳಿದೆ : 'ಎಲೈ ರಾಜನೆ, ನನಗೊಂದು ದಾರಿ ಕಾಣುತ್ತಿದೆ. ನಿನ್ನ ಮೇಲೆ ಯಾವುದೇ ಆರೋಪ ಬರುವುದಿಲ್ಲ. ನೀನು ಸ್ವಯಂವರದ ಸಭೆಗೆ ಬರಲೇಬೇಕು. ಇಂದ್ರ ಮತ್ತಿತರ ದೇವತೆಗಳೂ ಬರಲಿ. ಅವರ ಸಮ್ಮುಖದಲ್ಲೇ ನಿನ್ನನ್ನು ವರಿಸುತ್ತೇನೆ. 'ಇದಕ್ಕೆ ಒಪ್ಪಿಕೊಂಡ ನಳ ಮರುಮಾತಾಡದೆ ಅಲ್ಲಿಂದ ಮರೆಯಾದ.

ಇಷ್ಟೆಲ್ಲಾ ಕಣ್ಣುಮುಚ್ಚಿತೆರೆಯುವಷ್ಟರಲ್ಲಿ ನಡೆದುಹೋಗಿತ್ತು. ಇದೆಂಥ ಪರಿಸ್ಥಿತಿ ಸೃಷ್ಟಿಯಾಯಿತು ? ನಾನೆಲ್ಲಿ ತಪ್ಪಿದೆ ? ಇವನಾರೆಂದು ತಿಳಿಯದೆ ನನ್ನ ಮನಸ್ಸನ್ನು ಕೊಟ್ಟಿದ್ದು ತಪ್ಪಲ್ಲವೆ? ಪ್ರೇಮವನ್ನು ಹುಡುಗಾಟವೆಂದು ಬಗೆಯುವ ಇವನೊಂದಿಗೆ ಹೇಗೆ ಬದುಕಬಲ್ಲೆ? ಇದುವರೆಗೆ ನನ್ನಲ್ಲಿದ್ದ ಸಂತಸ ಸಂಭ್ರಮಗಳ ಸೆಲೆ ಬತ್ತಿಹೊಂದಂತನಿಸಿತು. ಆ ಜಾಗದಲ್ಲಿ ದುಃಖದುಮ್ಮಾನಗಳು, ಅಸಾಹಯಕತೆ - ಅತೃಪ್ತಿಗಳು ಮನೆಮಾಡಿದವು. ಕಣ್ಣಿಂದ ನಿದ್ದೆ ದೂರಾಗಿತ್ತು. ಕಟ್ಟಿದ್ದ ಸುಂದರ ಕನಸುಗಳು ಎಲ್ಲೊ ನನ್ನಿಂದ ದೂರ ಹಾರಿಹೋಗಿದ್ದವು.

ಬೆಳಗಾಯಿತು. ಗೊತ್ತಾದ ಸಮಯಕ್ಕೆ ಸರಿಯಾಗಿ ಸ್ವಯಂವರದ ಸಭೆಗೆ ಕಾಲಿಟ್ಟೆ. ಕುಳಿತಿದ್ದ ರಾಜರ ಆಸನಗಳ ಮುಂದೆ ಸಾಗುತ್ತಿರುವಂತೆ ಒಬ್ಬೊಬ್ಬರನ್ನೂ ಪರಿಚಯಿಸಲಾಗುತ್ತಿತ್ತು. ಅಲ್ಲಿಂದ ಮುಂದಕ್ಕೆ ಅಡಿಯಿಡುತ್ತಿದೆ. ಈಗ ನಳನ ಸರದಿ. ಅವನನ್ನು ಪರಿಚಯಿಸಿಯಾದ ನಂತರ ತಲೆಯನ್ನು ಮೇಲಕ್ಕೆತ್ತಿದೆ. ನನಗಾಗಿ ಅಚ್ಚರಿಯೊಂದು ಕಾದಿತ್ತು. ಅಲ್ಲಿ ಅವನಂತೆಯೇ ಕಾಣುತ್ತಿದ್ದ ಐವರಿದ್ದರು. ತಕ್ಷಣ ಗಾಬರಿಯಾದರೂ ಅನಂತರ ಸುಧಾರಿಸಿಕೊಂಡೆ. ಅವರಲ್ಲೊಬ್ಬ ನಿಜವಾದ ನಳನಾದರೆ ಉಳಿದ ನಾಲ್ವರು ದೇವತೆಗಳೆಂದು ತಿಳಿದೆ.

ನನಗೆ ತೋಚಿದ್ದಿಷ್ಟೆ. ದೇವರನ್ನು ಪ್ರಾರ್ಥಿಸುವುದು. ಆಯೋಚನೆ ಬಂದದೇ ದೇವತೆಗಳನ್ನು ಕೈಮುಗಿದು ಪ್ರಾರ್ಥಿಸಿದೆ: 'ದೇವತೆಗಳೆ, ನಾನು ನಿಷಾಧ ರಾಜನಾದ ನಳನನ್ನು ನನ್ನ ಪತಿಯೆಂದು ಸ್ವೀಕರಿಸಿದ್ದೇನೆ. ನನ್ನ ಮನಸ್ಸಾಕ್ಷಿಯಂತೆ ನನಗೆ ಬೇಕಾದವನನ್ನು ಆರಿಸಲು ಅವಕಾಶ ಮಾಡಿಕೊಡಿ. ದೇವತೆಗಳಾದ ನೀವು ನನಗೆ ನಳನು ಗೋಚರಿಸುವಂತೆ ಮಾಡಿ' ದೇವತೆಗಳಿಗೆ ನನ್ನ ಮೇಲೆ ಕರುಣೆಯುಂಟಾಗಿರಬೇಕು. ಆ ಕೂಡಲೆ ನಳನ ಹೊರತಾಗಿ ಉಳಿದ ನಾಲ್ವರು ನೆಲದ ಮಟ್ಟದಿಂದ ಸ್ವಲ್ಪ ಉತ್ತರದಲ್ಲಿ ನಿಂತರು. ನಾನು ನಳನನ್ನು ಸಮೀಪಿಸಿ ಹೂಮಾಲೆ ಹಾಕಿ ವರಿಸಿದೆ. ಹೀಗೆ ನಳನನ್ನು ಬಿಟ್ಟು ಬೇರೊಬ್ಬನನ್ನು ವರಿಸುವ ಮತ್ತೊಂದು ಅವಕಾಶಕ್ಕೆ ಸಂಪೂರ್ಣ ತೆರಯೆನ್ನೆಳೆದೆ.

ಇಷ್ಟೆಲ್ಲಾ ಕಷ್ಟಪಟ್ಟು ಪಡೆದ ನಳನೊಂದಿಗಿನ ನನ್ನ ವೈವಾಹಿಕ ಬದುಕುಸುಖಮಯವಾಗಿತ್ತೆನ್ನಬಹುದು. ಪ್ರೇಮಲೋಕದಲ್ಲಿ ವಿಹರಿಸುತ್ತಿದ್ದ ನಮಗೆ ಇಬ್ಬರು ಮಕ್ಕಳಾದರು. ಪ್ರೇಮದ ಕಣ್ಣಿಂದ ಕಾಣುತ್ತಿದ್ದ ಜಗತ್ತು ಸುಂದರವಾಗಿಯೇ ಇತ್ತು. ಕ್ರಮೇಣ ಪ್ರೇಮದ ಅಮಲು ಇಳಿದಂತೆ ನಳನ ಕೆಲವು ಲೋಪದೋಷಗಳು ನನ್ನ ಗಮನಕ್ಕೆ ಬರತೊಡಗಿದವು. ರಥವನ್ನು ವೇಗವಾಗಿ ಓಡಿಸುವುದರಲ್ಲಿ ಎಷ್ಟು ನಿಪುಣನೋ ಜೂಜಾಟಕ್ಕೆ ಅಷ್ಟೇ ದಾಸನಾಗಿದ್ದ. ಇವನಿಗೊಬ್ಬ ಸೋದರನಿದ್ದ ಅವನ ಹೆಸರು ಪುಷ್ಕರ. ಅವನ ಕೆಟ್ಟ ನೋಟ ನನ್ನನ್ನು ಇರಿದು ಕೊಲ್ಲುತ್ತಿತ್ತು. ಅವನೊಂದಿಗೆ ಸದಾ ಜೂಜಾಟದಲ್ಲಿ ಮಗ್ನನಾಗಿರುತ್ತಿದ್ದ ನಳನಿಗೆ ನಾನಾಗಲೀ, ನನ್ನ ಮುದ್ದು ಮಕ್ಕಳಾಗಲೀ ಬೇಕಾಗಿರಲಿಲ್ಲ. ಅತ್ತ ರಾಜಕಾರ್ಯವೂ ಬೇಡವಾಗಿತ್ತು. ಪ್ರಜೆಗಳು ಬೇಸತ್ತರು. ಇವನನ್ನು ತಿದ್ದುವ ಪ್ರಯತ್ನ ಮಾಡಿದಷ್ಟೂ ನನ್ನ ಮಾತಿಗೆ ಕವಡೆಯ ಕಿಮ್ಮತ್ತೂ ಇಲ್ಲವಾಯಿತು. ಪುಷ್ಕರನ ಅಟ್ಟಹಾಸ ಮೇರೆ ಮೀರಿತ್ತು. ನನಗೆ ನನ್ನ ಮಕ್ಕಳ ಭವಿಷ್ಯ ಮತ್ತು ಭದ್ರತೆಯ ಚಿಂತೆಯಾಗ ತೊಡಗಿತು. ಕೊನೆಗೊಂದು ನಿರ್ಧಾರಕ್ಕೆ ಬಂದೆ, ಮಕ್ಕಳನ್ನು ನನ್ನ ತಂದೆಯ ಬಳಿಗೆ ಕಳುಹಿಸಿದೆ. ನನಗವರ ಭದ್ರತೆ ಮುಖ್ಯವಾಗಿತ್ತು. ಇನ್ನುಳಿದವಳು ನಾನು. ನನ್ನ ರಕ್ಷಣೆಯನ್ನು ಹೇಗೋ ಮಾಡಿಕೊಳ್ಳಬಲ್ಲೆನೆಂಬ ಆತ್ಮವಿಶ್ವಾಸ ನನ್ನಲ್ಲಿತ್ತು.

ಆ ಕೆಟ್ಟ ದಿನ ನಮ್ಮ ಪಾಲಿಗೆ ಬಂದೇ ಬಂದಿತು. ನಳ ಜೂಜಾಟದಲ್ಲಿ ತನ್ನದಾದ ರಾಜ್ಯ ಮತ್ತಿತರ ಎಲ್ಲವನ್ನೂ ಕಳೆದುಕೊಂಡುಬಿಟ್ಟ.

ಪುಷ್ಕರನ ಕೆಟ್ಟ ಮನಸ್ಸು ಕೊನೆಯ ಪ್ರಯತ್ನ ಮಾಡಿತು. ಜೂಜಿನ ಪಂದ್ಯಕ್ಕೆ ನನ್ನನ್ನು ಪಣವಾಗಿಡುವಂತೆ ನಳನನ್ನು ಆಹ್ವಾನಿಸಿದ. ಅದಕ್ಕೆ ನಾನು ಪ್ರತಿಭಟಿಸುವ ಮೊದಲೇ ನಳ ಎಚ್ಚೆತ್ತುಕೊಂಡ ರಾಜ್ಯವನ್ನು ಬಿಟ್ಟು ಹೋಗಲು ಸಿದ್ಧನಾದ. ಇವನನ್ನು ಅನುಸರಿಸುವುದಲ್ಲದೆ ನನಗೆ ಬೇರೆ ಮಾರ್ಗವೇ ಇರಲಿಲ್ಲ. ಉಟ್ಟ ಬಟ್ಟೆಯಲ್ಲದೆ ಬೇರೆಲ್ಲವನ್ನು ತೊರೆದು ಊರ ಹೊರಗೆ ಬಂದೆವು. ರಾಮ ಕಾಡಿಗೆ ಹೊರಟಾಗ ಲಕ್ಷ್ಮಣ-ಸೀತೆಯರೊಂದದಿಗೆ ಊರಿಗೆ ಊರೇ ಕಣ್ಣೀರಿಡುತ್ತಾ ಹೊರಟಿತ್ತಂತೆ ಆದರೆ ಇಲ್ಲಿ ನಾನು ಸೀತೆಯಂತೆ ಪತಿಯನ್ನು ಹಿಂಬಾಲಿಸಿದ್ದೇನೇ ಹೊರತು ಮತ್ತಾರೂ ಬೀಳ್ಕೊಡಲು ನಮ್ಮೊಡನಿರಲಿಲ್ಲ. ರಾಮನೊಂದಿಗೆ ಹೊರಟ ಸೀತೆಗೆ ಆದರ್ಶದ ಬೆನ್ನು ಹತ್ತಿಹೊರಟ ಪತಿಯ ಬಗ್ಗೆ ಅಪಾರವಾದ ಪ್ರೀತ್ಯಾದರಗಳಿದ್ದವು. ಆದರೆ ನಾನು ನಳನನ್ನು ಹಿಂಬಾಲಿಸಿದಾಗ ಕರ್ತವ್ಯಭ್ರಷ್ಟ, ದುರ್ವ್ಯಸನಿಯಾದ ಪತಿಯ ಬಗೆಗೆ ಅಸಮಾಧಾನ ನಾಚಿಕೆಗಳಿಂದ ತಲೆತಗ್ಗಿಸಿ ನಡೆಯಬೇಕಾಯಿತು. ಊರ ಹೊರಗಿದ್ದ ಆ ಮೂರು ದಿನಗಳು ಅನ್ನಾಹಾರಗಳಿಲ್ಲದೆ ನರಳಬೇಕಾಯಿತು. ಜನರ ಪ್ರೀತ್ಯಾದರಗಳನ್ನು ಕಳೆದುಕೊಂಡಿದ್ದರ ಪರಿಣಾಮ ಇದಾಗಿತ್ತು. ಹೆಚ್ಚು ದಿನಗಳು ಇಲ್ಲಿದ್ದರೆ ಬದುಕು ದುರ್ಬರವಾದೀತೆಂದು ಹೆದರಿ ಕಾಡಿನತ್ತ ಹೊರಟವು.

ಅನ್ನಾಹಾರಗಳಿಲ್ಲದೆ ಬಳಲಿ ಬೆಂಡಾಗಿದ್ದ ನಮಗೆ ಏನನ್ನಾದರೂ ತಿನ್ನುವ ಅಗತ್ಯವಿತ್ತು. ಇಂಥ ಪರಿಸ್ಥಿತಿಯಲ್ಲಿ ಬಂಗಾರದ ಬಣ್ಣದ ಹಕ್ಕಿಗಳ ಹಿಂಡೊಂದು ನಳನ ಕಣ್ಣಿಗೆ ಬಿತ್ತು. ಅವನು ಹಿಂದೆಮುಂದೆ ನೋಡದೆ ತಾನುಟ್ಟಿದ್ದ ಪಂಚೆಯನ್ನು ಬಿಚ್ಚಿ ಹಕ್ಕಿಯ ಹಿಂಡಿನ ಮೇಲೆಸೆದ. ಕಣ್ಣು ಮಿಟುಕಿಸುವಷ್ಟರಲ್ಲಿ ಅವು ಗಾಬರಿಯಿಂದ ಪುರ್ರನೆ ಮೇಲಕ್ಕೆ ಹಾರಿಹೋದವು, ಪಂಚೆಯ ಸಹಿತವಾಗಿ . ಏನಾಯಿತೆಂದು ತಿರುಗಿ ನೋಡುವಷ್ಟರಲ್ಲಿ ನಳ ಇದ್ದೊಂದು ಪಂಚೆಯನ್ನು ಕಳೆದುಕೊಂಡು ಬೆತ್ತಲಾಗಿ ನಿಂತಿದ್ದ! ನನಗೆ ನಿಜವಾಗಿಯೂ ಗಾಬರಿ, ಖೇದ, ವಿಷಾದಗಳು ಏಕಕಾಲದಲ್ಲುಂಟಾದವು. ನನಗೆ ನಳನನ್ನು ಆ ಸ್ಥಿತಿಯಲ್ಲಿ ನೋಡಲು ಸಂಕಟವಾಯಿತು. ಯೊಚಿಸಲು ಸಮಯವಿರಲಿಲ್ಲ. ಕೂಡಲೆ ನಾನುಟ್ಟಿದ್ದ ಸೀರೆಯಲ್ಲಿ ಅರ್ಧಕ್ಕೆ ಸರಿಯಾಗಿ ಹರಿದೆ. ಒಂದು ಭಾಗವನ್ನು ನಳನಿಗೆ ಕೊಟ್ಟೆ. ಅವನಿಗೆ ಏನನ್ನಿಸಿತೋ. ನನಗಂತೂ ಮಾನ ಮುಚ್ಚಿಕೊಳ್ಳಲು ಅರ್ಧ ಸೀರೆಯ ಹೊರತಾಗಿ ಮತ್ತೇನೂ ಉಳಿದಿರಲಿಲ್ಲ. ನನ್ನನ್ನು ಆ ಸ್ಥಿತಿಯಲ್ಲಿ ನೋಡಲು ತನಗೆ ಕಷ್ಟವಾದುದರಿಂದಲೋ ಏನೋ, ನಳನು ನನ್ನನ್ನು ವಿದರ್ಭಕ್ಕೆ ಹೋಗೆಂದು ಪೀಡಿಸತೊಡಗಿದ. ಆದರೆ ನಾನು ಆ ಸ್ಥಿತಿಯಲ್ಲಿ ಅಲ್ಲಿಗೆ ಹೇಗಾದರೂ ಹೋಗಲು ಸಾಧ್ಯವಿತ್ತು ? ಎಲ್ಲವನ್ನೂ ಕಳೆದುಕೊಂಡಿದ್ದ ನನ್ನಂಥವರಿಗೆ ಎಲ್ಲಿ ಹೋದರೆ ತಾನೆ ಮರ್ಯಾದೆ ಗೌರವಗಳು ಸಿಕ್ಕುತ್ತವೆ ? ನಾನೇ ಇಷ್ಟಪಟ್ಟು , ಕಷ್ಟಪಟ್ಟು ವರಿಸಿದ್ದ ನಳ ತನ್ನ ರಾಜ್ಯವನ್ನು ಕಳೆದುಕೊಂಡಿದ್ದು ವೀರಾವೇಶದಿಂದ ಶತ್ರುಗಳ ವಿರುದ್ಧ ಹೋರಾಡಿ ಅಲ್ಲ, ದುಶ್ಚಟಗಳಿಂದ, ಅವನು ಕಳೆದುಕೊಂಡಿದ್ದು ತನ್ನ ರಾಜ್ಯ ಮಾತ್ರವಲ್ಲ; ತನ್ನ ಕರ್ತವ್ಯಭ್ರಷ್ಟತೆಯಿಂದ ತನ್ನ ಪ್ರಜೆಗಳ ಪ್ರೀತಿ-ಮನ್ನಣೆಗಳನ್ನು ಕೂಡ. ಇಂಥ ಅವಮಾನಕರ ಪರಿಸ್ಥಿತಿಯಲ್ಲಿ ಯಾವ ಮುಖ ಹೊತ್ತು ನನ್ನ ತವರಿಗೆ ಹೋಗಲಿ ? ಯಾರೂ ದಿಕ್ಕಿಲ್ಲದೆ, ಗಂಡನನ್ನು ಕಳೆದುಕೊಂಡ ಹೆಣ್ಣುಮಕ್ಕಳಿಗೆ ತವರಲ್ಲದೆ ಬೇರೆಲ್ಲೂ ಆಶ್ರಯ ಸಿಗಲಾರದು. ಆದರೆ ನನ್ನ ಸ್ಥಿತಿ ಗಂಡ ಸತ್ತ ಹೆಣ್ಣಿಗಿಂತ ಕಡೆಯಾಗಿತ್ತು. ನನ್ನಗಂಡ ಬದುಕಿದ್ದೂ ಸತ್ತಂತಾಗಿದ್ದ. ಈ ಸಮಾಜದಲ್ಲಿ ಗಂಡನ ಒಳಿತು-ಕೆಡಕುಗಳೆಲ್ಲದರಲ್ಲೂ ಹೆಣ್ಣಿಗೆ ಸಮಪಾಲು ಇದೆ. ಅವಳ ಗಂಡ ಪಡೆಯುವ ಮನ್ನಣೆ - ಗೌರವಗಳನ್ನು, ಕೋಪ ತಿರಸ್ಕಾರಗಳನ್ನು ಅವಳೂ ಸಮನಾಗಿಯೇ ಪಡೆಯುತ್ತಾಳೆ. ನನ್ನೀ ಪರಿಸ್ಥಿತಿಯಲ್ಲಿ ನಳ ಸಮಾಜದಲ್ಲಿ ಸಂಪಾದಿಸಿದುದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚೆಂದ ಮೇಲೆ ನಾನು ಯಾರಿಂದಲೂ ಏನನ್ನೂ ನಿರೀಕ್ಷಿಸುವಂತರಲಿಲ್ಲ. ಅದೆಷ್ಟೇ ಕಷ್ಟವಾದರೂ ವಿದರ್ಭಕ್ಕೆ ಹೋಗುವ ಯೋಚನೆ ಮಾಡಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಆದರೆ ಇದೆಲ್ಲಾ ನಳನಿಗೆ ಅರ್ಥವಾಗುವಂತಿರಲಿಲ್ಲ. ಏಕೆಂದರೆ ಯಾವುದನ್ನೂ ಯೋಚಿಸಿ ಮಾಡುವ ತಾಳ್ಮೆ, ಸಂಯಮಗಳು ಅವನಿಂದ ಎಂದೋ ದೂರವಾಗಿದ್ದವು. ಸಂಪೂರ್ಣ ಹತಾಶೆಯ ಸ್ಥಿತಿಗೆ ತಲುಪಿದ್ದ ಅವನಿಗೆ ನಾನು ಪಡುತ್ತಿದ್ದ ಪಾಡನ್ನು ನೋಡಲಾಗುತ್ತಿರಲಿಲ್ಲವೊ ಅಥವಾ ನಾನವನ ಜೊತೆಯಲ್ಲಿದ್ದಾಗ ತನ್ನ ಜವಾಬ್ದಾರಿ ಹೆಚ್ಚಿದಂತೆ, ನಾನವನಿಗೆ ಹೊರೆಯಾದಂತೆನಿಸುತ್ತಿತ್ತೋ ಒಂದೂ ತಿಳಿಯದು. ಏಕೆಂದರೆ, ಗಂಡನು, ಹೆಂಡತಿಯ ಜವಾಬ್ದಾರಿಯನ್ನು ಹೊರಬೇಕೆನ್ನುವುದು ಲೋಕರೂಢಿಯೇ ಆಗಿದೆಯಲ್ಲ ನಳನೀಗ ಬೇರೆಯವರದಿರಲಿ, ತನ್ನದೇ ಜವಾಬ್ದಾರಿಯನ್ನು ಹೊರುವ ಸ್ಥಿತಿಯಲ್ಲಿರಲಿಲ್ಲ. ಅಂದ ಮೇಲೆ ತಾನು ಒಮ್ಮೆ ಪ್ರೀತಿಸಿದ ವ್ಯಕ್ತಿಯನ್ನು ಎಲ್ಲವನ್ನೂ ಕಳಕೊಂಡ ಸ್ಥಿತಿಯಲ್ಲಿ ಬಿಟ್ಟು ಹೋಗುವುದಾದರೂ ಹೇಗೆ ? ಅದು ಮಾನವೀಯತೆಯಂತೂ ಅಲ್ಲವೇ ಅಲ್ಲ. ಹೀಗೆಲ್ಲಾ ಯೋಚಿಸಿದ ನಾನು ವಿದರ್ಭಕ್ಕೆ ಹೋಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿ ಅವನೂ ನನ್ನನ್ನು ಬಿಟ್ಟು ಹೋಗುವುದಿಲ್ಲವೆಂದು ಮಾತು ಕೊಡುವಂತೆ ಹೇಳಿದೆ. ಅದಕ್ಕೊಪ್ಪಿದ ಅವನು ಹಾಗೇ ಮಾತುಕೊಟ್ಟ.

ಇಷ್ಟಾದರೂ ಅವನ ಮಾತಿನ ಮೇಲೆ ನನಗೆ ನಂಬಿಕೆ ಇರಲಿಲ್ಲ. ಅವನ ಮೇಲೊಂದು ಕಣ್ಣಿಡಲು ನಿರ್ಧರಿಸಿದೆ. ಆದರೆ ನಡೆದದ್ದೇ ಬೇರೆ. ಅಂದು ಅನ್ನಾಹಾರಗಳಿಲ್ಲದೆ ಕಾಡಿನಲ್ಲಿ ಅಲೆದಾಡಿ ಬಳಲಿದ್ದ ನನಗೆ ಮಲಗುತ್ತಲೇ ಕಣ್ಣಿಗೆ ನಿದ್ದೆಯಾವರಿಸಿತು. ಗಾಢ ನಿದ್ದೆಯಿಂದ ನನಗೆ ಎಚ್ಚರವಾದಾಗ ಬೆಳಕು ಹರಿದಿತ್ತು ಪಕ್ಕದಲ್ಲಿ ನಳನಿರಲಿಲ್ಲ. ಎದ್ದು ಅಲ್ಲೇ ಎಲ್ಲೋ ಹೋಗಿರಬೇಕೆಂದು ಕಾದು ನೋಡಿದೆ.

ಬರಲಿಲ್ಲ. ನನ್ನನ್ನು ಪೀಡಿಸಲೆಂದು ಅಲ್ಲೆಲ್ಲೋ ಅಡಗಿ ಕುಳಿತಿರಬೇಕೆಂದು ಹುಡುಕ ತೊಡಗಿದೆ. ಕಾಣಲಿಲ್ಲ. ನನಗೆ ಪ್ರಿಯವಾದ ಹೆಸರುಗಳಿಂದ ಅವನನ್ನು ಕರೆದೆ. ಪ್ರತಿಕ್ರಿಯೆ ಬರಲಿಲ್ಲ. ಈಗ ನನಗೆ ನಿಜವಾಗಿಯೂ ಭಯವಾಯಿತು. ಅವನನ್ನು ಹುಡುಕುತ್ತಾ ಕಾಡಿನಲ್ಲಿ ಅಲೆದೆ. ಅವನು ಕಾಣದಿದ್ದಾಗ ತಡೆಯಲಾಗದ ದುಃಖದಿಂದ ಧರೆಗುರುಳಿದೆ. ಅದೇ ಸ್ಥಿತಿಯಲ್ಲಿ ಎಷ್ಟು ಹೊತ್ತು ಬಿದ್ದಿದ್ದೆನೋ ತಿಳಿಯಲಿಲ್ಲ. ಪ್ರಜ್ಞೆ ಮರಳಿ ಬಂದಾಗ ಮತ್ತೆ ಅವನ ಹುಡುಕಾಟದಲ್ಲಿ ತೊಡಗಿದೆ. ಅವನನ್ನು ಕೋಪದಿಂದ ಬಾಯಿಗೆ ಬಂದಂತೆ ಬಯ್ಯಬೇಕೆನಿಸಿತು. ಆದರೆ ನನ್ನ ಬಳಿ ಬೈಗುಳಗಳ ಭಂಡಾರವಿರಲಿಲ್ಲ. ಆಗಲಂತೂ ನನ್ನ ಸಭ್ಯತೆ, ಸುಸಂಸ್ಕೃತತೆಗಳೇ ನನ್ನ ದೌರ್ಬಲ್ಯವಾಗಿ ಕಂಡಿತು.

ನಳನ ಹುಡುಕಾಟದಲ್ಲಿ ಹಾಗೇ ಬರುತ್ತಿದ್ದಾಗ ದೂರದಲ್ಲೊಂದು ಋಷ್ಯಾಶ್ರಮ ಕಂಡಿತು. ಅಲ್ಲಿದ್ದ ಋಷಿಮುನಿಗಳು ನನ್ನನ್ನು ಕರೆದು ಆದರಿಸಿ ಉಪಚರಿಸಿದರು. ನನ್ನ ವ್ಯಥೆಯ ಕಥೆ ಕೇಳಿ ನನಗಾಗಿ ಮರುಗಿದರು. ತನಗುಳಿದ ಮಾರ್ಗವೆಂದರೆ ಆತ್ಮಹತ್ಯೆಯೊಂದೇ ಎಂದು ಹತಾಶಳಾದ ನನಗೆ ಮುಂದೆ ಒಳ್ಳೆಯ ದಿನಗಳು ಕಾದಿವೆ ಎಂದು ಭವಿಷ್ಯನುಡಿದರು. ಹೀಗೆ ನಾನಿಲ್ಲಿ ಬಹಳ ದಿನಗಳು ಇರುವಂತಿರಲಿಲ್ಲ. ನನ್ನ ಗುರಿ ನಳನನ್ನು ಹುಡುಕುವುದಾಗಿತ್ತೇ ಹೊರತು ಎಲ್ಲೋ ನಿಲ್ಲಲು ನೆಲೆಯನ್ನು ಹುಡುಕುವುದಷ್ಟೇ ಆಗಿರಲಿಲ್ಲ. ಅದು ತುಂಬು ಗರ್ಭಿಣಿ ಸೀತೆಗೆ ಆಶ್ರಯ ಕೊಟ್ಟ ವಾಲ್ಮೀಕಿ ಋಷಿಗಳ ಆಶ್ರಮವೂ ಆಗಿರಲಿಲ್ಲ.

ಹೀಗಾಗಿ ನನ್ನ ಪಯಣ ಮತ್ತೆ ಮುಂದುವರಿಯಿತು. ದಾರಿಯಲ್ಲಿ ವರ್ತಕರ ಗುಂಪೊಂದು ಕಣ್ಣಿಗೆ ಬಿತ್ತು. ತುಂಡು ಸೀರೆಯ, ಕೆದರಿದ ತಲೆಯ ನನ್ನನ್ನು ಕಂಡು ಕುತೂಹಲ ತೋರಿದರು. ತಾವು ಚೇದಿರಾಜ್ಯಕ್ಕೆ ಹೋಗುತ್ತಿರುವುದಾಗಿ ಹೇಳಿದರು. ನಾನೂ ಆ ಗುಂಪಿನೊಂದಿಗೆ ಚೇದಿಗೆ ಹೊರಟೆ. ದಾರಿಯಲ್ಲಿ ಕಾಡಾನೆಯ ಹಿಂಡೊಂದು ಅಟ್ಟಿಸಿಕೊಂಡು ಬಂದು ಕೆಲವರನ್ನು ಕೊಂದಿತು; ಹಲವರಿಗೆ ಗಾಯಗಳಾದವು. ಅಪಾರ ನಷ್ಟಗಳುಂಟಾದವು. ಇದಕ್ಕೆಲ್ಲಾ ಅಭಾಗಿನಿಯಾದ ನಾನೇ ಕಾರಣವೆನ್ನುವಂತೆ ಉಳಿದವರು ನನ್ನನ್ನು ಅಟ್ಟಿಸಿಕೊಂಡು ಬಂದರು. ಅವರಿಂದ ಹೇಗೋ ತಪ್ಪಿಸಿಕೊಂಡು ಕಾಡಿಗೆ ಸೇರಿದೆ. ಹಾಗೇ ಅಲೆದಾಡುತ್ತಾ ಬರುತ್ತಿರುವಾಗ ಚೇದಿಯ ಹೆದ್ದಾರಿ ಕಣ್ಣಿಗೆ ಬಿತ್ತು ಆ ದಾರಿಯಲ್ಲೇ ಮುಂದೆ ನಡೆದೂ ನಡೆದೂ ದಣಿದು ಒಂದೆಡೆ ನಿಂತೆ. ಅದು ಚೇದಿಯ ಅರಮನೆಯ ಹೆಬ್ಬಾಗಿಲೇ ಆಗಿತ್ತು. ಕೆದರಿದ ತಲೆಯ, ಚಿಂದಿ ಬಟ್ಟೆಯ, ಮೈಕೈತರಚಿಕೊಂಡಿದ್ದ ನನ್ನನ್ನು ಕಂಡವರೆಲ್ಲಾ ವಿಚಿತ್ರವಾಗಿ ವರ್ತಿಸುತ್ತಿದ್ದರು. ನನ್ನನ್ನು ಒಬ್ಬ ಹುಚ್ಚಿಯೆಂದು ಭಾವಿಸಿದ್ದಿರ ಬೇಕು. ಅಷ್ಟರಲ್ಲೇ ಅರಮನೆಯ ದಾಸಿಯೊಬ್ಬಳು ತನ್ನೊಡನೆ ಬರುವಂತೆ ಕರೆದಳು. ಬೇರೆ ದಾರಿ ಕಾಣದೆ ನಾನವಳನ್ನು ಹಿಂಬಾಲಿಸಿದೆ. ಮಹಡಿಯ ಮೇಲೆ ಹೋದ ನನಗೆ ಕಂಡವಳು ಬೇರಾರೂ ಆಗಿರಲಿಲ್ಲ, ಚೇದಿಯರಾಣಿ, ನನ್ನ ಚಿಕ್ಕಮ್ಮನೇ ಆಗಿದ್ದಳು. ಆದರವಳು ನನ್ನನ್ನು ಗುರುತಿಸಲಿಲ್ಲ. ಅಷ್ಟರ ಮಟ್ಟಿಗೆ ನಾನು ಬದಲಾಗಿದ್ದೆ. ನನ್ನ ಪೂರ್ವಾಪರಗಳನ್ನು ವಿಚಾರಿಸಿದ, ರಾಣಿ ನನ್ನನ್ನು ತನ್ನ ಮಗಳಿಗೆ ಗೌರವಸಖಿಯಾಗಿರುವಂತೆ ಹೇಳಿದಳು. ಅದಕ್ಕೆ ನಾನೊಪ್ಪದೆ ಬೇರೆ ದಾರಿಯೇ ಇರಲಿಲ್ಲ. ಹೀಗೆ ರಾಜಕುಮಾರಿಯಾಗಿ ಹುಟ್ಟಿ ರಾಜನ ಪತ್ನಿಯಾಗಿ ಮೆರೆದವಳು ಸಖಿಯಾಗಿ ಬದುಕತೊಡಗಿದೆ.

ಅತ್ತ ವಿದರ್ಭದಲ್ಲಿ ನನ್ನ ಸುದ್ದಿಯೊಂದೂ ತಿಳಿಯದೆ ಆತಂಕಗೊಂಡರು. ನನ್ನ ತಂದೆ ಸುದ್ದಿಯನ್ನು ತರುವಂತೆ ಹಲವಾರು ಕಡೆ ತನ್ನದೂತರನ್ನು ಅಟ್ಟಿದ್ದರು. ಹಾಗೆ ಬಂದವರಲ್ಲಿ ಸುದೇವನೂ ಒಬ್ಬ. ಇವನು ಎಲ್ಲೆಲ್ಲೋ ಹುಡುಕಿಕೊಂಡು ಅಲೆದಾಡಿ ಕೊನೆಗೆ ಚೇದಿಗೆ ಬಂದಿದ್ದ, ಒಂದು ದಿನ ಸುನಂದಳ ಜೊತೆಗಿದ್ದ ನನ್ನನ್ನು ಕಂಡು ಹತ್ತಿರ ಬಂದ. ನಾನವನನ್ನು ಗುರುತಿಸಿದೆ. ಅವನು ಬೇರಾರೂಆಗಿರದೆ ನನ್ನ ಸೋದರನ ಗೆಳೆಯನೇ ಆಗಿದ್ದ. ಆದರೆ ಏನೂ ತಿಳಿಯದವಳಂತೆ ನಟಿಸಿದೆ. ಆದರವನು ತನ್ನನ್ನು ಪರಿಚಯಿಸಿಕೊಂಡ. ನನಗೆ ಇನ್ನು ನಿರ್ಲಿಪ್ತಳಾಗಿರಲು ಸಾಧ್ಯವಾಗಲಿಲ್ಲ. ಕಣ್ಣಾಲಿಗಳು ತುಂಬಿಬಂದವು ಕೊನೆಗೆ ಬಿಕ್ಕಿಬಿಕ್ಕಿ ಅಳತೊಡಗಿದೆ. ಸತ್ಯ ತಾನಾಗಿಯೇ ಹೊರಬಂತು, ಎಲ್ಲವನ್ನೂ ಕೇಳಿದ ಚಿಕ್ಕಮ್ಮ ತನ್ನ ಅಕ್ಕನ ಮಗಳಿಗೆ ಆಶ್ರಯ ಕೊಟ್ಟದ್ದಕ್ಕೆ ಸಂತಸಪಟ್ಟರೆ, ನನ್ನ ಪರಿಸ್ಥಿತಿಯನ್ನು ತಿಳಿದು ದುಃಖಿಸಿದಳು.

ನಾನೀಗ ವಿದರ್ಭಕ್ಕೆ ಹೋಗುವುದು ಅನಿವಾರ್ಯವಾಯಿತು. ಮಕ್ಕಳನ್ನು ಮತ್ತು ತಂದೆ ತಾಯಿಗಳನ್ನು ಮತ್ತೆ ನೋಡುವೆನೆಂಬ ಸಂತಸ ಒಂದೆಡೆಯಾದರೆ, ನಳನ ಜೊತೆಯಿಲ್ಲದೆ ಅಲ್ಲಿಗೆ ಹೋಗುವ ಪರಿಸ್ಥಿತಿಗೆ ದುಃಖಿಸುವಂತಾಗಿತ್ತು. ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಅಮ್ಮ ನಳನನ್ನು ಹುಡುಕಿಸುವ ಏರ್ಪಾಡು ಮಾಡಲು ತಂದೆಯನ್ನು ಒತ್ತಾಯಿಸಿದಳು. ನಳನನ್ನು ಹುಡುಕುವ ಹೊಸದೊಂದು ವಿಧಾನವಾಗಿ ನಾನೊಂದು ಪತ್ರ ಬರೆದೆ: ಅದರ ಸಾರಾಂಶವೆಂದರೆ, ನಳನನ್ನೊಬ್ಬ ಮೋಸಗಾರನೆಂದು ಜರಿದಿದ್ದೆ. 'ಅರ್ಧ ಸೀರೆ ಕತ್ತರಿಸಿ ಕೊಟ್ಟು ನಿನ್ನನ್ನೇ ನಂಬಿದ್ದ ಕಾಡಿಗೆ ಬಂದ ಹೆಂಡತಿಯನ್ನು ಕಾಡಿನಲ್ಲಿ ಒಬ್ಬಳನ್ನೇ ಬಿಟ್ಟು ಬಂದೆಯಲ್ಲ. ನಿನಗಿಂತ ಆ ರಾಮನೇ ವಾಸಿ. ಪತ್ನಿಯ ಶೀಲವನ್ನು ಶಂಕಿಸಿದರೂ ಅವಳನ್ನು ಲಕ್ಷ್ಮಣನ ರಕ್ಷೆಯಲ್ಲಿ ಕಾಡಿಗೆ ಕಳುಹಿಸಿದ್ದ. ಅವನೆಷ್ಟೇ ಕಟುಕನೆಂದರೂ ನಿನ್ನಷ್ಟು ಇರಲಾರ. ಅವನಾದರೋ ಸೀತೆಯನ್ನು ಪಂದ್ಯದಲ್ಲಿ ಗೆದ್ದಿದ್ದ. ಆದರೆ ನಿನ್ನ ಚೆಲುವೆಯಾದ ಹೆಂಡತಿ ನಿನ್ನನ್ನು ಪ್ರೀತಿಸಿ, ನಂಬಿ, ನೆಚ್ಚಿ, ತನ್ನನ್ನು ಕೈಹಿಡಿಯಲು ಬಂದ ದೇವತೆಗಳನ್ನೆಲ್ಲಾ ತಿರಸ್ಕರಿಸಿ

ನಿನ್ನನ್ನು ವರಿಸಿದ್ದಳು. ಅಂಥವಳನ್ನು ದಟ್ಟಕಾಡಿನಲ್ಲಿ ಅರ್ಧರಾತ್ರಿಯಲ್ಲಿ ಅವಳನ್ನು ಕ್ರೂರಮೃಗಗಳಿಂದ ರಕ್ಷಿಸಬೇಕಾದವನು ಹೇಳದೆ ಕೇಳದೆ ಹೇಡಿಯಂತೆ ಬೇಜವಾಬ್ದಾರಿಯಿಂದ ಬಿಟ್ಟು ಬಂದೆಯಲ್ಲ. ಅವಳ ನಂಬಿಕೆಯ ಭದ್ರಕೋಟೆಯನ್ನೇ ಒಡೆದು ಚೂರು ಚೂರು ಮಾಡಿದೆಯಲ್ಲ? ಹೋಗಲಿ ಆದದ್ದು ಆಗಿಹೋಯಿತು. ಈಗಲಾದರೂ ನಿನ್ನ ಧ್ಯಾನದಲ್ಲಿ ಸುಖವೈಭೋಗಗಳನ್ನು ತೊರೆದು ಅರ್ಧ ಸೀರೆಯನ್ನುಟ್ಟೇ ಚಾತಕಪಕ್ಷಿಯಂತೆ ನಿನ್ನ ಬರವನ್ನೇ ಕಾದಿರುವ ಅವಳಿಗೆ ಎಲ್ಲಿರುವೆಯೆಂದು ತಿಳಿಸಬಾರದೆ? ಈಗ ಅವಳ ಮೇಲೆ ಕರುಣಿಸು, ಎಲ್ಲಿರುವೆ ಹೇಳು ಈ ಕರಪತ್ರವನ್ನು ತೋರಿಸಿ ಉತ್ತರ ಪಡೆದು ತರುವಂತೆ ದೂತರನ್ನು ಎಲ್ಲೆಡೆಗೆ ಕಳುಹಿಸಲಾಯಿತು. ಆದರೆ ಉತ್ತರ ಮಾತ್ರ ಬಹಳ ಕಾಲದವರೆಗೂ ಸಿಗಲಿಲ್ಲ.

ನನಗೀಗ ಬದುಕಿನಲ್ಲಿ ನಿರಾಶೆಯೆ ಹೊರತು ಮತ್ತೇನೂ ಇರಲಿಲ್ಲ. ನಳನನ್ನು ಮತ್ತೆ ಪಡೆಯುವ ಭರವಸೆ ನನ್ನಿಂದ ದೂರವಾಗಿತ್ತು. ಆದರೊಂದು ದಿನ ಪರ್ಣಾದ ಎಂಬ ವ್ಯಕ್ತಿ ನನ್ನನ್ನು ಭೇಟಿ ಮಾಡಿ, ತಾನು ಅಯೋಧ್ಯೆಯಿಂದ ಬಂದಿರುವುದಾಗಿಯೂ, ಅಲ್ಲಿಯ ರಾಜ ಋತುಪರ್ಣನ ಸಾರಥಿಯಾದ ಬಾಹುಕ ತನ್ನನ್ನು ಖುದ್ದಾಗಿ ಭೇಟಿ ಮಾಡಿ ನನ್ನ ಪತ್ರಕ್ಕೆ ಉತ್ತರಿಸಿದ್ದಾಗಿ ಹೇಳಿದ. ಆ ಉತ್ತರವೇನೆಂದರೆ, ಪತಿವ್ರತೆಯಾದ ಹೆಣ್ಣು ತನ್ನ ಕಷ್ಟಕಾಲದಲ್ಲಿ ಸ್ವಯಂ ರಕ್ಷಣೆ ಮಾಡಿಕೊಳ್ಳಬಲ್ಲಳು. ಸ್ವರ್ಗದ ದಾರಿಯನ್ನು ಕಂಡುಕೊಳ್ಳಬಲ್ಲಳು. ನಿರ್ಗತಿಕನಾಗಿ ತನ್ನನ್ನು ತೊರೆದ ಗಂಡನ ಮೇಲೆ ಕುಪಿತಳಾಗುವುದು ಸರಿಯಲ್ಲ. ಆಹಾರವನ್ನು ಪಡೆಯಲೆತ್ನಿಸಿದಾಗ ಹಕ್ಕಿಗಳು ಬಟ್ಟೆಗಳನ್ನು ಹಾರಿಸಿಕೊಂಡು ಹೋದವು. ಗುಣವತಿಯಾದ ಹೆಂಡತಿ ಅವನ ಮೇಲೆ ಮುನಿಸಿಕೊಳ್ಳಬಾರದು.

ಹೀಗೆ ಸತೀಧರ್ಮವನ್ನು ಉಪದೇಶಿಸುವವನು ನನ್ನ ನಳನಲ್ಲದೆ ಮತ್ತಾರೂ ಆಗಿರಲು ಸಾಧ್ಯವಿಲ್ಲವೆಂದು ನನಗೆ ತಿಳಿದಿತ್ತು. ಅದರೊಂದಿಗೆ ಅನುಮಾನವೊಂದು ಕಾಡಿತು. ನನ್ನ ಪತ್ರವನ್ನೋದಿದ ಮೇಲೂ ನನ್ನನ್ನು ಕಾಣಲು ಅವನೇಕೆ ಪ್ರಯತ್ನಿಸಲಿಲ್ಲ? ಈ ಮೊದಲು ಕೂಡ ನನ್ನನ್ನು ಹುಡುಕಲು ಪ್ರಯತ್ನಿಸಿದ ಕುರುಹುಗಳಿಲ್ಲ. ಆ ಯೋಚನೆ ಅವನಿಗೆ ಬಂದಿತ್ತೆಂದು ನನಗನ್ನಿಸುವುದಿಲ್ಲ. ಏಕೆಂದರೆ, ಅವನೇ ನನ್ನನ್ನು ಬಿಟ್ಟು ಬಂದವನಲ್ಲವೆ? ಅಂದಮೇಲೆ ಅವನೇಕೆ ನನ್ನ ಪತ್ರಕ್ಕೆ ಉತ್ತರಿಸಬೇಕಾಗಿತ್ತು? ಅದರ ಹಿಂದಿನ ಉದ್ದೇಶವಾದರೂ ಏನಿದ್ದಿರಬಹುದು? ತನ್ನ ಹಿಂದಿನ ತಪ್ಪು ಕೆಲಸಗಳಿಗೆ ಸಮಜಾಯಿಷಿ ಕೊಡುವುದುಷ್ಟೇ ಆಗಿರಬಹುದೇ? ತನ್ನದೇನೂ ತಪ್ಪಿಲ್ಲವೆಂದು ಹೇಳುವುದಷ್ಟೇ ಅವನಿಗೆ ಬೇಕಾಗಿದೆ, ನಾನಾಗಲೀ ಅಥವಾ ನನ್ನ ಮಕ್ಕಳಾಗಲೀ ಅಲ್ಲ ಎಂದಿದರ ಅರ್ಥವೆ? ಹಾಗಿದ್ದರೆ ನನ್ನನ್ನು ನೋಡಲು ಅವನೆಂದೂ ಬರಲಾರ! ಅಂದರೆ ಈ ಬಂಧನ ಇಲ್ಲಿಗೆ ಕಳಚಿತೆಂದೆ? ಅದು ಹೇಗಾಗುತ್ತದೆ? ನಾನು ರಾಜಕುಮಾರಿಯಾದರೇನು? ಜನ ನನ್ನ ಬಗ್ಗೆ ಅನುಕಂಪ ತೋರರೆ, ಅಥವಾ ಕುಹಕದ ಮಾತಾಡಲಾರರೆ? ಸೀತೆಯನ್ನೂ ಬಿಟ್ಟಿಲ್ಲವೆಂದ ಮೇಲೆ ನನ್ನನ್ನು ಬಿಡುತ್ತಾರೆಯೇ? ರಾಜ್ಯವನ್ನು ಜೂಜಿನಲ್ಲಿ ಕಳೆದುಕೊಂಡು ಕೊನೆಗೆ ನಡುರಾತ್ರಿಯಲ್ಲಿ ತನ್ನ ಹೆಂಡತಿಯನ್ನು ಅಡವಿಯ ಪಾಲು ಮಾಡಿ ಓಡಿಹೋದವನೇ ಇವಳ ಗಂಡ ಎಂದು ನೋಡಿ ನಗಲಾರರೆ? ಅಪ್ಪ-ಅಮ್ಮ ನನಗೆ ಆಶ್ರಯ ಕೊಟ್ಟಿರಬಹುದು. ಪ್ರೀತಿಯನ್ನೂ ತೋರಿರಬಹುದು. ಅವೆಲ್ಲಾ ಅವರು ಬದುಕಿರುವ ತನಕ. ನನ್ನ ಸೋದರನೂ ನನ್ನನ್ನು ಗೌರವಿಸದಿರಲಾರ. ಆದರೆ ಅತ್ತಿಗೆ ಏನೆಂದುಕೊಂಡಾಳು? ಗಂಡ ಬಿಟ್ಟವಳು ಇಲ್ಲಿ ಬಂದು ಸೇರಿದ್ದಾಳೆನ್ನುವುದಿಲ್ಲವೆ? ಮಕ್ಕಳ ಗತಿ? ಅವರ ಭವಿಷ್ಯವೇನು? ಅಪ್ಪ ಕಳೆದುಕೊಂಡ ರಾಜ್ಯವನ್ನು ಮತ್ತೆ ಪಡೆಯಬಲ್ಲರೆ? ನಾನಾದರೂ ಎಷ್ಟು ಕಾಲ ಹೀಗೇ ಇರಬಲ್ಲೆ? ಇಲ್ಲ. ಇದಕ್ಕೊಂದು ಮಂಗಳ ಹಾಡಲೇಬೇಕು. ಅವನು ನನ್ನ ಬಳಿಗೆ ಬರುವಂತೆ ಮಾಡಬೇಕು. 'ಬಾ' ಎಂದರೆ ಬರುವನೆ? ಹಾಗೆ ಬರುವವನಾಗಿದ್ದರೆ ಈಗವನನ್ನು ಬೇಡವೆಂದು ತಡೆದಿದ್ದವರಾರು? ಅವನನ್ನು ಬರುವಂತೆ ಮಾಡುವುದು ಹೇಗೆ? ಎಂದೆಲ್ಲಾ ಚಿಂತಿಸಿದೆ. ಕೊನೆಗೊಂದು ಯೋಚನೆ ಬಂತು. ಯಾವುದೇ ವ್ಯಕ್ತಿಗೆ ತಾನು ಪ್ರೀತಿಸುವ ವ್ಯಕ್ತಿ। ವಸ್ತುವನ್ನು ದೂರ ತಳ್ಳುವಾಗ ಆ ವ್ಯಕ್ತಿಯ। ವಸ್ತುವಿನ ಬೆಲೆ ಗೊತ್ತಿಲ್ಲದಿರಲೂ ಬಹುದು. ಅದು ತನ್ನದೇ ಆಗಿದ್ದಾಗ ಅದರ ಬಗೆಗೆ ಕಾಳಜಿ ಇಲ್ಲದಿರಲೂ ಬಹುದು. ಆದರೆ ಆ ವ್ಯಕ್ತಿ ಅಥವಾ ವಸ್ತು ತನ್ನಿಂದ ದೂರವಾದಾಗ ಅವನ।ಳ ಬೆಲೆ ತನ್ನ ದೃಷ್ಟಿಯಲ್ಲಿ ಹೆಚ್ಚಾಗಬಹುದು. ಗಂಡಸರ ವಿಷಯದಲ್ಲಿ ಈ ಮಾತು ಸ್ವಲ್ಪಮಟ್ಟಿಗೆ ನಿಜ. ಗಂಡು ತಾನೆಷ್ಟೇ ಹೆಣ್ಣುಗಳೊಂದಿಗೆ ಸಂಪರ್ಕ ಹೊಂದಿರಲಿ, ತನ್ನ ಹೆಂಡತಿಯಾದವಳನ್ನು ಬಿಡಲಾರ ಮರೆಯಲಾರ. ಅವಳು ಮಾತ್ರ ತನ್ನವಳೇ ಆಗಿರಬೇಕೆಂದು ನಿರೀಕ್ಷಿಸುತ್ತಾನೆ. ಅವಳು ಬೇರೆಯವರ ಸ್ವತ್ತಾಗುವುದನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಇದು ಹೌದಾದರೆ ನಳನ ಪರೀಕ್ಷೆ ಆಗಿಯೇಬಿಡಲಿ ಎಂಬ ತೀರ್ಮಾನಕ್ಕೆ ಬಂದೆ.

ಸುದೇವನನ್ನು ಕರೆಯಿಸಿ, 'ಅಯೋಧ್ಯೆಗೆ ಹೋಗಿ ಋತುಪರ್ಣರಾಜನಿಗೆ ದಮಯಂತಿಗೆ ಸ್ವಯಂವರದ ಏರ್ಪಾಡಾಗಿದೆ.ಮರುದಿನವೇ ವಿದರ್ಭಕ್ಕೆ ಬರಬೇಕೆಂದು ಆಮಂತ್ರಣವನ್ನುಕೊಟ್ಟು ಬಾ' ಎಂದೆ. ಇದನ್ನು ಕೇಳಿದ ಸುದೇವ ತಬ್ಬಿಬ್ಬಾದನಾದರೂ ಮರುಮಾತಿಲ್ಲದೆ ವಿದರ್ಭಕ್ಕೆ ಹೊರಟು ನಿಂತ, ಋತುಪರ್ಣನಿಗೆ ಆಮಂತ್ರಣವನ್ನೂ ನೀಡಿ ಬಂದ. ಅಷ್ಟು ಕಡಿಮೆ ಅವಧಿಯಲ್ಲಿ ಋತುಪರ್ಣನು ವಿದರ್ಭ ತಲುಪಬೇಕಾದರೆ ನಳನಲ್ಲದೆ ಮತ್ತಾರಿಗೂ ಅವನನ್ನು ಕರೆತರಲು

ಸಾಧ್ಯವಿಲ್ಲವೆಂದು ನನಗೆ ತಿಳಿದಿತ್ತು. ಎಲ್ಲವೂ ನನ್ನ ಲೆಕ್ಕಾಚಾರದಂತೆಯೇ ನಡೆಯಿತು. ಮರುದಿನವೇ ಋತುಪರ್ಣನು ಅರಮನೆಯ ಮುಂದೆ ಹಾಜರಾಗಿದ್ದ. ಅವನ ಸಾರಥಿ ಬಾಹುಕನೇ ಆಗಿದ್ದ. ಆದರೆ ಅವನು ನಳನಂತೆಕಾಣುತ್ತಿರಲಿಲ್ಲ. ಸ್ವರೂಪ ಬದಲಾಗಿದ್ದರೂ ವರ್ತನೆ ಮಾತ್ರ ನಳನಂತೆಯೇ ಇತ್ತು. ಪರೀಕ್ಷಿಸಲೆಂದು ನನ್ನ ಮಕ್ಕಳನ್ನು ದಾಸಿಯೊಡನೆ ಅವನ ಬಳಿಗೆ ಕಳುಹಿಸಿದೆ. ಅವನ ಅವರನ್ನು ತಬ್ಬಿಕೊಂಡು ಅತ್ತನೆಂದು ದಾಸಿ ವರದಿ ಮಾಡಿದಳು.ಅವನು ವೇಷ ಮರೆಸಿಕೊಂಡ ನಳನೇ ಇರಬೇಕೆಂಬ ನನ್ನ ಅನುಮಾನಕ್ಕೆ ಪುಷ್ಟಿ ದೊರೆಯಿತು. ಈಗವನನ್ನು ನೇರವಾಗಿ ಸಂಧಿಸಲು ನಿರ್ಧರಿಸಿದೆ. ಅವನಿಗೆ ಕರೆ ಕಳುಹಿಸಿದೆ. ಸಂಕೋಚದಿಂದ ಬಂದು ನನ್ನೆದುರು ನಿಂತ ಅವನನ್ನು ಪ್ರಶ್ನಿಸಿದೆ :

'ಎಲೈಬಾಹುಕನೆ, ಗುಣವಂತನಾದರು ತನ್ನ ಹೆಂಡತಿಯನ್ನು ನಡುರಾತ್ರಿಯಲ್ಲಿ ದಟ್ಟಡವಿಯಲ್ಲಿ ಬಿಟ್ಟುಹೋದ ನಳನ ಬಗ್ಗೆ ಕೇಳಿದ್ದೀಯಾ ? ಅವನು ಹೀಗೆ ಮಾಡಿದ್ದು ಸರಿಯೆ?

ನನ್ನ ಪ್ರಶ್ನೆಗೆ ಏನುತ್ತರ ಬರಬಹುದೆಂದು ಕಾತುರದಿಂದ ನಿರೀಕ್ಷಿಸುತ್ತದ್ದ ನನಗೆ ಬಂದದ್ದು ಉತ್ತರವಲ್ಲ, ಮತ್ತೊಂದು ಪ್ರಶ್ನೆ!

'ದಮಯಂತಿ ಎರಡನೆಯ ಗಂಡನನ್ನು ಆರಿಸಿಕೊಳ್ಳುತ್ತಾಳೆಂದು ಮಹಾರಾಜರು ಡಂಗುರ ಹೊಡೆಸಿರುವರಲ್ಲ ?!

ನನ್ನ ಪ್ರಶ್ನೆಗೆ ಇದೆಂಥ ಉತ್ತರ! ನನಗೀಗ ಅವನು ನಳನಲ್ಲದೆ ಮತ್ತಾರೂ ಅಲ್ಲವೆನ್ನುವುದು ದೃಢವಾಯಿತು. ಈ ಸ್ವಯಂವರ ಅವನನ್ನು ಮತ್ತೆ ಪಡೆಯುವ ತಂತ್ರವಾಗಿತ್ತೆಂದು ಹೇಳಿದೆ. ಅವನು ತಾನೇ ನಳನೆನ್ನುವುದನ್ನು ಒಪ್ಪಿಕೊಂಡ.

ಎಲ್ಲವನ್ನೂ ತಿಳಿದುಕೊಂಡು ಋತುಪರ್ಣ ನಳನಿಗೆ ಜೂಜಿನ ಕೆಲವು ತಂತ್ರಗಳನ್ನು ಕಲಿಸಿದ. ಈಗ ನಳ ತನ್ನ ತಮ್ಮನೊಡನೆ ಮತ್ತೆ ಜೂಜಾಡಿ ಸೋಲಿಸಿ ತನ್ನ ಕಳೆದು ಹೋದ ರಾಜ್ಯವನ್ನು ಮತ್ತೆ ಪಡೆದ. ನನ್ನ ತಂದೆ ತಾಯಿಗಳು ತಮ್ಮ ಮಗಳ ಬದುಕು ಮತ್ತೆ ಮೊದಲಿನಂತೆ ಸುಖಮಯವಾಯಿತೆಂದು ಹರ್ಷಗೊಂಡರು. ಪ್ರಜೆಗಳೂ ಹಾಗೇ ನಂಬಿದರು.

ಆದರೆ ನನ್ನ ಕಳೆದು ಹೋದು ಯೌವ್ವನ, ಕಳೆದು ಹೋದ ದಿನಗಳು,ಕಳೆದು ಹೋದ ಪ್ರೀತಿ - ನಂಬಿಕೆಗಳು ಮತ್ತೆ ನನ್ನವಾಗಲು ಸಾಧ್ಯವೆ ? ಅಂದು ನನ್ನ ಸರ್ವಸ್ವವೇ ಆಗಿದ್ದ ಆ ನಳ ಇವನಾದಾನೆ ? ಇಲ್ಲ, ಖಂಡಿತಾ ಇಲ್ಲ. ಇವನು ಅವನಲ್ಲ. ಅಡವಿಯಲ್ಲಿ ನನ್ನೊಬ್ಬಳನ್ನೇ ಬಿಟ್ಟು ಪಲಾಯನ ಮಾಡಿದಾಗಲೇ ಅವನು ನನ್ನ ಪಾಲಿಗೆ ಇಲ್ಲವಾದ. ಈಗ ಅವನಿದ್ದುದು ಲೋಕದ ಕಣ್ಣಿಗೆ ಮಾತ್ರ. ನನ್ನ ಬದುಕು ಒಬ್ಬ ವಿಧವೆಯ ಬದುಕಿಗಿಂತ ಬೇರಾಯಾಗಿರಲಿಲ್ಲ. ಅದರಲ್ಲಿ ಶೂನ್ಯವಲ್ಲದೆ ಮತ್ತೇನಿರಲಿಲ್ಲ. ಹೀಗೆಯೇ ಅದು ಕೊನೆಗೊಂಡಿತು. (ಹೇಳಬೇಕಾದುದೆಲ್ಲಾ ಹೇಳಿಯಾಯಿತು. ಸತ್ಯ ಅನಾವರಣಗೊಂಡಿತು. ನಾನಿನ್ನು ಬರಲೆ)

ವೆಂ.ವನಜ
ಮೈಸೂರು

ಒಂದು ಭಯಾನಕ ಕಥೆ

ನನ್ನ ಹೆಸರು ಮೆನ್‌ಕಿಮ್ ಲೋರ್ಟ್. ನನಗೆ 23 ವರ್ಷ. ನಾನು ಹುಟ್ಟಿದ್ದು ಕಾಮ್‌ಪಾಂಗ್‌ಥಾಮ್ ಪ್ರಾಂತದಲ್ಲಿ. ಮೆನ್‌ಕಿಮ್ ನನ್ನ ತಂದೆ. ಇವರು ಅಧ್ಯಾಪಕರು. ರಾಸ್ ಸೋಫಿಯಾ ನೋರ್ನ್ ನನ್ನ ತಾಯಿ. ಇವಳು ಗೃಹಿಣಿ. ನನಗೆ ಆರು ಮಂದಿ ಸೋದರರಿದ್ದಾರೆ. ಇವರೊಂದಿಗೆ ನಾನು ಹಳ್ಳಿಯ ಶಾಲೆಗೆ ಹೋಗುತ್ತಿದ್ದೆ.

ನಾನು ನನ್ನ ತಂದೆಯಂತೆ ಅಧ್ಯಾಪಕಿಯಾಗುವ ಕನಸು ಕಾಣುತ್ತಿದ್ದೆ. ಆದರೆ ಬಡತನದಿಂದಾಗಿ ಆ ಕನಸು ನನಸಾಗಲೇ ಇಲ್ಲ. ಮಧ್ಯಂತರದಲ್ಲೇ ನಾನು ಶಾಲೆಯನ್ನು ಬಿಡಬೇಕಾಯಿತು. ಕುಟುಂಬದ ನಿರ್ವಹಣೆಗಾಗಿ ದುಡಿಯುತ್ತಿದ್ದ ನನ್ನ ಅಮ್ಮನಿಗೆ ನೆರವಾಗತೊಡಗಿದೆ. ಹೊಲಗದ್ದೆಗಳಲ್ಲಿ ಕೂಲಿಗಾಗಿ ದುಡಿಯುತ್ತಿದ್ದೆ. ಕೆಲವೊಮ್ಮೆ ಬೀದಿಗಳಲ್ಲಿ ಕೇಕುಗಳನ್ನು ಮಾರುತ್ತಿದ್ದೆ.

ಒಂದು ದಿನ ನಮ್ಮ ಪಕ್ಕದ ಹಳ್ಳಿಯ ಹೆಂಗಸೊಬ್ಬಳು ನೋಮ್‌ಪೆನ್(Phnom Penh) ಎಂಬಲ್ಲಿ ಮಗುವನ್ನು ನೋಡಿಕೊಳ್ಳಲು ಹುಡುಗಿಯೊಬ್ಬಳು ಬೇಕೆಂದು, ತಿಂಗಳಿಗೆ 12 ಡಾಲರ್‌ಗಳನ್ನು ಕೊಡುತ್ತಾರೆಂದೂ ತಿಳಿಸಿದಳು. ಅದುಅಲ್ಪ ಮೊತ್ತವಾದರೂ ಮನೆ ಖರ್ಚಿಗೆ ಕೊಡಬಹುದಲ್ಲಾ ಎಂದು ಯೋಚಿಸಿದೆ. ಊಟ, ವಸತಿ ಮತ್ತು ಬಟ್ಟೆಯ ಖರ್ಚನ್ನು ಅವರೇ ನೋಡಿಕೊಳ್ಳುತ್ತಾರೆಂದು ಆ ಹೆಂಗಸು ತಿಳಿಸಿದ್ದಳು. ಅವಳೊಂದಿಗೆ ನೋಮ್‌ಪೆನ್ನಿಗೆ ಹೋದರೆ ನನ್ನನ್ನವರು ಹೋಟೆಲ್ಲೊಂದರ ಇಬ್ಬರು ಗಂಡಸರಿಗೆ ಮಾರಿದರು. ಆ ಗಂಡಸರು ನನ್ನನ್ನು ಬಟ್ಟಂಬ್ಯಾಂಗಿನ ವೇಶ್ಯಾವಾಟಿಕೆಯೊಂದಕ್ಕೆ 260 ಡಾಲರಿಗೆ ಮಾರಿದರು.

ಬಟ್ಟಂಬ್ಯಾಂಗಿನ ವೇಶ್ಯಾವಾಟಿಕೆಯಲ್ಲಿ ಬೆಳಗಿನಿಂದ ಮಧ್ಯರಾತ್ರಿಯವರೆಗೆ, ಹಾಗಾಗದಿದ್ದಲ್ಲಿ ಮರುದಿನ ಮುಂಜಾನೆಯಲ್ಲೇ ಗಿರಾಕಿಗಳನ್ನು ಬರಮಾಡಿಕೊಳ್ಳಲು ನನ್ನನ್ನು ಒತ್ತಾಯಿಸುತ್ತಿದ್ದರು. 'ನಿಜ ಏನೆಂದು ಯಾರಿಗೂ ಹೇಳಬಾರದು; ಅದು ನನ್ನದೇ ಆಯ್ಕೆ' ಎಂದು ಹೇಳಬೇಕೆಂದು ತಾಕೀತು

ಮಾಡಿದ್ದರು. ಒಂದು ಚಿಕ್ಕ ಕತ್ತಲಕೋಣೆ, ಅಲ್ಪಾಹಾರ ಮತ್ತು ವೈದ್ಯಕೀಯ ಆರೈಕೆಗಳ ಕೊರತೆಗಳಿಂದಾಗಿ ನನ್ನ ಆರೋಗ್ಯ ಪದೇ ಪದೇ ಕೆಡುತ್ತಿತ್ತು. ಹಾಗೆ ಕೆಟ್ಟಾಗ ಯಾವುದೇ ಚಿಕಿತ್ಸೆ ದೊರೆಯುತ್ತಿರಲಿಲ್ಲ. ಕೆಲವು ಮಾತ್ರೆಗಳು ಮಾತ್ರ ದೊರಕುತ್ತಿದ್ದವು. ಲೈಂಗಿಕ ರೋಗಗಳ ಚಿಕಿತ್ಸೆಗೆ ಟೂತ್ ಪೇಸ್ಟನ್ನು ಅಥವಾ ಬಿಳಿಲವಣವನ್ನು ಲೇಪಿಸುವಂತೆ ಹೇಳುತ್ತಿದ್ದರು. ಗಿರಾಕಿಗಳನ್ನು ಆಕರ್ಷಿಸಲು ಕಾಮೋತ್ತೇಜಕ ಭಂಗಿಗಳನ್ನು ಕಲಿಸುತ್ತಿದ್ದರು ಗಿರಾಕಿಗಳು ಸಿಗದಿದ್ದರೆ ಗಾರ್ಡುಗಳು ನನ್ನನ್ನು ಹೊಡೆಯುತ್ತಿದ್ದರು ಅಥವಾ ಅತ್ಯಾಚಾರ ಮಾಡುತ್ತಿದ್ದರು. ಮಾಲೀಕರ ಕೋಪಶಮನಕ್ಕೆ ನಾನು ವಸ್ತುವಾಗಿದ್ದೆ. ಅಲ್ಲಿ ನಾನು ಕಳೆದ ಏಳು ತಿಂಗಳು ನನ್ನ ಪಾಲಿಗೆ ನರಕವಾಗಿತ್ತು.

ಒಮ್ಮೆ ನನ್ನ ಹಳ್ಳಿಯ ಪ್ರಾಥಮಿಕ ಶಾಲೆಯ ಗುರುಗಳೊಬ್ಬರು ನನಗೆ ಸಿಕ್ಕಿದರು. ನನ್ನನ್ನವರು ಅಲ್ಲಿಂದ ರಕ್ಷಿಸಿ ಕಾಂಬೋಡಿಯಾದ ವಿಮೆನ್ಸ್ ಡೆವಲಪ್‌ಮೆಂಟ್ ಏಜನ್ಸಿಗೆ (CWDA) ಕರೆತಂದರು. ವೇಶ್ಯಾವಾಟಿಕೆಯನ್ನು ಬಿಡುವಾಗ ನಾನು ಹಲವು ರೋಗಗಳನ್ನು ತಂದಿದ್ದೆ. ಏಜೆನ್ಸಿಯವರು ನನಗೆ ಶುಶ್ರೂಷೆ ಮಾಡಿದರು. ವೈದ್ಯರ ಬಳಿ ಕರೆದೊಯ್ದರು. ನನಗಾಗ ಏಡ್ಸ ರೋಗವಿದೆಯೆಂದು ತಿಳಿಯಿತು. ನಿಜವಾಗಿಯೂ ದಿಗ್ಭ್ರಮೆಯಾಯಿತು, ನಾಚಿಕೆಯಾಯಿತು. ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನಿಸಿತು. ಆದರೆ ಏಜೆನ್ಸಿಯ ಸಿಬ್ಬಂದಿ ನನ್ನಲ್ಲಿ ಉತ್ಸಾಹ ತುಂಬಿದರು ; ಪ್ರೀತಿ ತೋರಿದರು, ಬದುಕಿಗೆ ಬೇಕಾದ ಆತ್ಮವಿಶ್ವಾಸ ತುಂಬಿದರು. ಆದರೆ ನನ್ನ ಮನೆಯವರು ಮತ್ತು ಹಳ್ಳಿಯವರು ನನ್ನನ್ನು ತಿರಸ್ಕರಿಸಿದರು. ನನ್ನ ತಪ್ಪೇನೆಂದು ನನಗಿನ್ನೂ ತಿಳಿದಿಲ್ಲ.

ಏಜೆನ್ಸಿಯ ಸ್ನೇಹಿತರು, ಸೋದರಿಯರು ನನಗೆ ಪ್ರೀತಿ ಕೊಟ್ಟರು; ತಾರತಮ್ಯದಿಂದ ಕಾಣಲಿಲ್ಲ. ನನಗೀಗ ಹೊಸ ಬದುಕು ದೊರೆತಿದೆ. ನಾವೆಲ್ಲರೂ ಬದುಕುತ್ತೇವೆ, ಕಲಿಯುತ್ತೇವೆ. ಒಂದಾಗಿ ದುಡಿಯುತ್ತೇವೆ. ಪರಸ್ಪರರಿಗೆ ನೆರವಾಗುತ್ತೇವೆ. ನನ್ನ ಬದುಕನ್ನೀಗ ಸಮಾಜಕ್ಕೆ ಮುಡಿಪಾಗಿಡಬಹುದು.

ನನ್ನೆಲ್ಲಾ ಸೋದರ-ಸೋದರಿಯರಿಗೆ ನನ್ನದೊಂದು ಕಿವಿಮಾತು:

'ನಿಮ್ಮ ಹಳ್ಳಿಯನ್ನು ಬಿಡಬೇಡಿ. ಹೆಂಗಸರು ಮತ್ತು ಮಕ್ಕಳು ನನ್ನ ಹಾಗೆ ಅಪಹೃತರಾಗಬಹುದು. ಸೋದರರೆ ನಿಮ್ಮ ಬದುಕನ್ನು ಮತ್ತು ಕುಟುಂಬದ ಸಂತಸವನ್ನು ಏಡ್ಸ್‌ನ ಉರುಳು ಚಕ್ರಕ್ಕೊಡ್ಡಬೇಡಿ'.

ವೆಂ.ವನಜ
(ಆಧಾರ : 'ಕ್ವಿಲ್ಟ್' ಮಾರ್ಚ, 2000)

ಅಲೆಕ್ಸಾಂಡ್ರಾ ಕೊಲಾಂಟೆ

- ಒಂದು ಪರಿಚಯ

ಅಲೆಕ್ಸಾಂಡ್ರಾ ಕೊಲಾಂಟೆ - ಆಕೆಯ ರಾಜಕೀಯ ಬರಹಗಳಿಂದ ಬಹುಜನರಿಗೆ ಪರಿಚಯ. ಆದರೆ ಆಕೆ ಕಥೆ, ಕಾದಂಬರಿ ಬರೆದಿರುವುದು ಬಹುಜನರಿಗೆ ತಿಳಿದಿಲ್ಲ. ಆಕೆಯ ಕಥೆ, ಕಾದಂಬರಿಗಳಲ್ಲಿ ಕೊಲಾಂಟೆ ಬೋಲ್‌ಶವಿಕ್ ಕ್ರಾಂತಿಯ ನಂತರದ ಜನರ ದಿನನಿತ್ಯದ ಬದುಕಿನ ಚಿತ್ರಣವನ್ನು ಕೂಲಂಕುಶವಾಗಿ ವಿವರಿಸುತ್ತಾಳೆ. ಆ ಸಂದರ್ಭದಲ್ಲಿ ಸಾಮಾಜಿಕವಾಗಿ ಚರ್ಚಿತವಾಗುತ್ತಿದ್ದ ವೈಯಕ್ತಿಕ ಹಾಗೂ ಅಂತರಂಗದ ಲೈಂಗಿಕ ಸಂಬಂಧಗಳ ಕುರಿತಾದ ಮಹಿಳೆಯರ ಹಾಗೂ ಪುರುಷರ ಭಾವನೆ, ಆತಂಕ, ಭಯ ಎಲ್ಲವನ್ನೂ ಹಿಡಿದಿಡಲು ಕೊಲಾಂಟೆ ತನ್ನ ಕಥೆ, ಕಾದಂಬರಿಗಳಲ್ಲಿ ಪ್ರಯತ್ನಿಸಿದ್ದಾಳೆ.

ಆಕೆ 'ಲವ್ ಆಫ್ ವರ್ಕರ್ ಬೀಸ್'ನ್ನು ಬರೆದದ್ದು ಬಹಳ ಜನರನ್ನು ತಲುಪುವ ಉದ್ದೇಶದಿಂದ. ಇದರಲ್ಲಿ ಮಹಿಳೆಯರು ತಮ್ಮ ಬದುಕು, ಅನುಭವಗಳನ್ನು ಕಂಡುಕೊಳ್ಳಲು ಸಾಧ್ಯವಾದ್ದರಿಂದ ಈ ಕಥೆ ಬಹು ಮಂದಿ ಮಹಿಳೆಯರಿಗೆ ತಲುಪಲು ಸಾಧ್ಯವಾಯಿತು ಕೂಡಾ. ಈಕೆ ಸರಳವಾದ ಸಾಲುಗಳನ್ನು ಬಳಸಿರುವುದಲ್ಲದೇ, ಅಷ್ಟೇ ಸರಳವಾದ ಪದ ಪುಂಜಗಳನ್ನು ಕೂಡಾ ಬಳಸಿದ್ದಾಳೆ.

ಅಲೆಕ್ಸಾಂಡ್ರಾ ಕೊಲಾಂಟೆ ಶ್ರೀಮಂತ ಜನರಲ್‌ರೊಬ್ಬರ ಮಗಳು. ಈತ ತ್ಸಾರ್ ಸೈನ್ಯದಲ್ಲಿ ಜನರಲ್ ಆಗಿದ್ದವರು. ಹೆಚ್ಚು ಓದಿಕೊಂಡಿದ್ದ ಈತ ಉದಾರವಾದೀ ವಿಚಾರಧಾರೆ ಹೊಂದಿದ್ದವರು. ಈಕೆಯ ತಾಯಿ ಮರದ ವ್ಯಾಪಾರಿಯೊಬ್ಬರ ಮಗಳು. ಕೊಲಾಂಟೆ ಬೆಳೆದದ್ದು ಏಕಾಂಗಿ ಮಗುವಾಗಿಯೇ. ತಾಯಿಗೆ ಫಿನ್‌ಲ್ಯಾಂಡ್ ಹಾಗೂ ಸೇಂಟ್ ಪೀಟರ್ಸ್ ಬರ್ಗನಲ್ಲಿದ್ದ ಕುಟುಂಬದ ಎಸ್ಟೇಟ್ ನೋಡಿಕೊಳ್ಳುವ ಕೆಲಸವೇ ಆಗಿ ಹೋಗುತ್ತಿತ್ತು. ತಂದೆಗೆ ಬಾಲ್ಕನ್ಸ್‌ನಲ್ಲಿ ರಷ್ಯಾದ ಸೈನ್ಯದ ಸೋಲಿನ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೇ ಸಮಯ ಹೋಗುತ್ತಿತ್ತು. ಹಾಗಾಗಿ ಅಲೆಕ್ಸಾಂಡ್ರಾ ತನ್ನ ಬಾಲ್ಯದ ಹೆಚ್ಚು

ಸಮಯವನ್ನು ತನ್ನ ತಂದೆ-ತಾಯಿಯರ ಪುಸ್ತಕ ಭಂಡಾರದಲ್ಲಿಯೇ ಕಳೆಯತೊಡಗಿದ್ದಳು.ಕಾದಂಬರಿ, ಸಾಹಿತ್ಯ ಹಾಗೂ ರಾಜಕೀಯ ಪತ್ರಿಕೆಗಳನ್ನು ಓದುತ್ತಲೇ ಆಕೆಯ ಬಾಲ್ಯ ಕಳೆಯಿತು.

ಆಕೆ ಹದಿನಾರು ವರುಷದವಳಾದಾಗ ಆಕೆಯ ತಂದೆ-ತಾಯಿ ಕೊಲಾಂಟೆಯ ವಿವಾಹ ಮಾಡುವ ಯೋಚನೆ ಮಾಡತೊಡಗಿದರು. ಇದನ್ನು ವಿರೋಧಿಸಿದ ಕೊಲಾಂಟೆ ಕಥೆಗಳನ್ನು ಬರೆಯುವುದಕ್ಕೆ ಪ್ರಾರಂಭಿಸಿದ್ದಲ್ಲದೇ, ಹೆಚ್ಚು ಶಿಸ್ತಿನಿಂದ ಓದುವುದಕ್ಕೆ ಪ್ರಾರಂಭಿಸಿದಳು.

ನಂತರದಲ್ಲಿ ಈಕೆ ವ್ಲಾಡಿಮಿರ್ ಎಂಬ ಕಾರ್ಖಾನೆಯ ಇನ್ಸ್‌ಪೆಕ್ಟರ್ ಒಬ್ಬನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಈತ ತನ್ನ 'ಅಂಕುಶಾಧಿಕಾರಿ' ಎಂದು ಕೊಲಾಂಟೆ ವೈಯಕ್ತಿಕವಾಗಿ ತನ್ನ ಗಂಡನನ್ನು ಆಪಾದಿಸುತ್ತಿದ್ದಳು. ಆತನ ಆರಾಧನೆಯ ಪ್ರೀತಿಯೇ ಆಕೆಗೆ ಬಂಧನವಾಗಿತ್ತು. ಗಂಡನ ಹಾಗೂ ಮಗನ ಆರಾಧನೆಯ ಪ್ರೀತಿಯ ವಿರುದ್ಧ ಬಂಡೆದ್ದ ಈಕೆ ಕಥೆಗಳನ್ನು ಬರೆಯತೊಡಗಿದಳು. ಆಕೆಯನ್ನು ಜೀವಂತವಾಗಿಟ್ಟು ಕೊಳ್ಳುವುದಷ್ಟೇ ಆಕೆಯ ಬರಹದ ಉದ್ದೇಶವಾಗಿರಲಿಲ್ಲ. ಸಂಪ್ರದಾಯಬದ್ಧ ಪ್ರೀತಿ ಹಾಗೂ ಮದುವೆಯ ಬೇಡಿಕೆಗಳ ವಿರುದ್ಧ ಪ್ರತಿಭಟಿಸಲು, ಹೆಂಗಸರ ವಿಧೇಯತೆಯನ್ನು ಬೆಚ್ಚಿಸಿ ಅಲುಗಾಡಿಸಲು, ಹಾಗೂ ಅವರು ಸ್ವಂತಿಕೆಯನ್ನು ಬೆಳೆಸಿಕೊಳ್ಳುವಂತೆ ಪ್ರಚೋದಿಸಿ ಕೊಲಾಂಟೆ ಬರೆಯುತ್ತಿದ್ದಳು.

ಆಕೆಯ ಕಥೆಗಳು ಪ್ರಕಟಗೊಂಡಿರಲಿಲ್ಲ. ತನ್ನ ವಿಚಾರಧಾರೆಯನ್ನು ತಾನು ಸಾಹಿತ್ಯಕ ಪರಿಭಾಷೆಯಲ್ಲಿ ಮಾತ್ರ ಹಿಡಿದಿಡುತ್ತಿದ್ದೇನೆಂಬ ಅರಿವು ಆಕೆಗಿತ್ತು. ಪುರುಷ ಹಾಗೂ ಮಹಿಳೆಯರ ನಡುವಿನ ಶೋಷಣೆ ಹಾಗೂ ಅವಲಂಬನೆಯನ್ನು ವಿವಾಹದ ಚೌಕಟ್ಟಿನ ಒಳಗೇ ಪರಿವರ್ತಿಸಲು ಸಾಧ್ಯವೇ ? ಎಂಬ ಪ್ರಶ್ನೆಯನ್ನು ಆಕೆ ಅತ್ಯಂತ ನೋವಿನಿಂದ ವ್ಯಕ್ತಪಡಿಸ ತೊಡಗಿದ್ದಳು.

1896 ಆಕೆಯ ಬದುಕಿನ ಒಂದು ಮಹತ್ವದ ಘಟ್ಟ ಎಂದು, ತಿರುವಿನ ಒಂದು ಘಟ್ಟ ಎಂದು ಆಕೆ ವಿವರಿಸುತ್ತಾಳೆ. ಈ ವರುಷದಲ್ಲಿ ಮೊದಲ ಬಾರಿಗೆ ವ್ಲಾಡಿಮಿರ್ ಜೊತೆಗೆ ಆಕೆಗೆ ಬಹುಮುಖ್ಯ ರಾಜಕೀಯ ಭಿನ್ನಾಭಿಪ್ರಾಯ ಮೂಡಿಬಂದದ್ದು. ಒಂದು ದೊಡ್ಡ ಬಟ್ಟೆ ಗಿರಣಿಯಲ್ಲಿ ಕಾರ್ಮಿಕರ ಬದುಕಿನ ಕಠಿಣ ವಾಸ್ತವಗಳನ್ನು ವ್ಲಾಡಿಮಿರ್ ಜೊತೆಗೆ ಈಕೆ ನೋಡಿದ್ದಳು. ಇನ್ಸ್‌ಪೆಕ್ಟರ್ ವ್ಲಾಡಿಮಿರ್ ಕಾರ್ಮಿಕರ ಸಣ್ಣ ಪುಟ್ಟ ಬದಲಾವಣೆಗಳ ಬಗ್ಗೆ ಮಾತಾಡಿ, ಅವರ ದುಡಿಯುವ ಸ್ಥಿತಿ-ಗತಿಗಳಲ್ಲಿ ಸುಧಾರಣೆ ಮಾಡುವುದಾಗಿ ಆಶ್ವಾಸನೆ ಇತ್ತಿದ್ದು ಆಕೆಯಲ್ಲಿ ಕೋಪ ಹುಟ್ಟಿಸಿತ್ತು. ಆ ಕೋಪದಲ್ಲಿಯೇ ಆಕೆ 'ಮಾರ್ಕ್ಸಿಸ್ಟ್ ಯೂನಿಯನ್ ಆಫ್ ಸ್ಟ್ರಗಲ್ ಫಾರ್ ದಿ ವರ್ಕಿಂಗ್ ಕ್ಲಾಸ್' ನ ಸದಸ್ಯರನ್ನು ಭೇಟಿಯಾಗಲು ಮುಂದಾದಳು. ಈ ಸಂಘಟನೆಯ ನೇತಾರ ಲೆನಿನ್.

ಮಾರ್ಕ್ಸಿಸಂ ಆಕೆಗೆ ಬರಿಯ ಭಾವನಾತ್ಮಕ ಸಂಬಂಧವಾಗಿರಲಿಲ್ಲ. ಈಕೆ ಕ್ರಮೇಣ ಸೇಂಟ್ ಪೀಟರ್ಸ್ ಬರ್ಗ್‌ನ ಕ್ರಾಂತಿಕಾರಿ ಬುದ್ಧಿ ಜೀವಿಗಳತ್ತ ಸೆಳೆಯಲ್ಪಟ್ಟಿದಳು. ಈ ಕ್ರಾಂತಿಕಾರಿ ಬುದ್ಧಿ ಜೀವಿಗಳಿಗೆ 1896 ಒಂದು ಮಹತ್ವದ ವರ್ಷವಾಗಿತ್ತು. ಏಕೆಂದರೆ ಆ ಸಂದರ್ಭದಲ್ಲಿ ಆ ಪಟ್ಟಣದ ತುಂಬ ಅನೇಕ ಚಳುವಳಿಗಳು ನಡೆಯುತ್ತಿದ್ದವು. ಹಾಗಾಗಿ ಯೂನಿಯನ್‌ಗೆ ಪ್ರಭಲವಾದ ಹಿಡಿತ ಹೊಂದಲು ಸಾಧ್ಯವಾಗಿತ್ತು. ಮಾರ್ಕ್ಸವಾದಿ ಯೂನಿಯನ್‌ನ ಪ್ರಚಾರಕ್ಕೆ ಹೆಚ್ಚು ಪ್ರತಿಕ್ರಿಯೆ ; ಜಯ ಕೂಡಾ ದೊರಕ ತೊಡಗಿತ್ತು. ಅನೇಕ ಬಟ್ಟೆ ಗಿರಣಿಗಳಲ್ಲಿ ಪುರುಷ ಕಾರ್ಮಿಕರ ಜೊತೆಗೆ ಮಹಿಳಾ ಕಾರ್ಮಿಕರೂ ಜೊತೆಗೂಡಿ ತಮ್ಮ ಸಾಧನೆ ಸಲಕರಣೆಗಳನ್ನು ಕೆಳಗಿಟ್ಟು ಪ್ರತಿಭಟನೆ ನಡೆಸಿದರು. ಈ ಕಾರ್ಮಿಕ ಮಹಿಳೆಯರ ಜೊತೆಗಿನ ಸಂಪರ್ಕದಿಂದಾಗಿ ಅಲೆಕ್ಸಾಂಡ್ರಾ ಕೊಲಾಂಟೆ ತನ್ನ ಮಗು ಮಿಶಾನನ್ನು ಎತ್ತಿಕೊಂಡು, ಗಂಡನನ್ನು ತೊರೆದು ನಡೆಯುವ ಒಂದು ಬಲವಾದ ನಿರ್ಧಾರ ಕೈಗೆತ್ತಿಕೊಳ್ಳಲು ಸಾಧ್ಯವಾಯಿತು. ರಷ್ಯಾದ ಪರಿಸ್ಥಿತಿಯನ್ನು ಅಧ್ಯಯನ ನಡೆಸಲು ಹಾಗೂ ಅಂದಿನ ರಾಜಕೀಯ ಘಟನೆಗಳಲ್ಲಿ ಪಾಲ್ಗೊಳ್ಳಲು ಕೊಲಾಂಟೆ ತನ್ನ ಗಂಡನನ್ನು ತೊರೆದು, ಮಗುವನ್ನು ಎತ್ತಿಕೊಂಡು ನಡೆದುದು ಆಕೆಯ ಜೀವನದ ಮಹತ್ವದ ಘಟ್ಟವಾಗಿತ್ತು.

ಅನೇಕ ವರ್ಷಗಳ ನಂತರ ಆಕೆ ತನ್ನ ಪುಸ್ತಕ 'ಆಟೋಬಯಾಗ್ರಫಿ ಆಫ್ ಎ ಸೆಕ್ಸುಯಲಿ ಇಮಾನ್ಸಿಯೇಟೆಡ್ ವುಮನ್' ನಲ್ಲಿ ತನ್ನ ದುಃಖದಾಯಕವಾದ ಆಯ್ಕೆಯ ಬಗ್ಗೆ ಬರೆಯುತ್ತಾಳೆ. ಈ ದುಃಖದಾಯಕ ಆಯ್ಕೆ ನಮ್ಮ ಸ್ವಾತಂತ್ರ್ಯ, ವೈಯಕ್ತಿಕತೆ, ಮೇಲೆ ಪುರುಷ ನಡೆಸಿದ ಆಕ್ರಮಣದ ವಿರುದ್ಧದ ರಕ್ಷಣೆಯ ಯುದ್ಧ ಎಂದು ವಿವರಿಸುತ್ತಾಳೆ. ಇಪ್ಪತ್ತು ವರುಷದ ನಂತರ ಆಕೆ 'ಲವ್ ಆಫ್ ವರ್ಕರ್ ಬೀಸ್' ಬರೆದಾಗಲೂ ಆ ಕಥೆಯ ನಾಯಕಿಯೋರ್ವಳಿಗೆ ಈ ರೀತಿಯ ಆಯ್ಕೆ ನೋವಿನ ಆಯ್ಕೆಯಾಗಿಯೇ ಉಳಿಯುತ್ತದೆ. ಆಕೆಯ ಕಾದಂಬರಿ ಹಾಗೂ ಕಥೆಗಳು ಆಕೆಯ ಅನುಭವಗಳ ಹರವಿನಿಂದಾಗಿ ಅತ್ಯಂತ ಪ್ರಾಮಾಣಿಕವಾಗಿಯೇ ಉಳಿದಿವೆ. ಜೊತೆಗೆ ಇತರೇ ಮಹಿಳೆಯರಿಗೂ ಸಹ ಈ ಅನುಭವಗಳು ಗಟ್ಟಿತನ ಪಡೆಯುವಂತೆ ಒತ್ತಾಯಿಸುತ್ತವೆ. ಈ ಗಟ್ಟಿತನ, ನಿರ್ಧಾರ - ಪ್ರೀತಿಸುವ ಗಂಡ, ಕುಟುಂಬದ ವಿರುದ್ಧವಾಗಿ ನಿಲ್ಲುವ ಹಂತದ್ದಾದರೂ ಸರಿ ಎಂದು ಆಕೆ ಪ್ರತಿಪಾದಿಸುತ್ತಾಳೆ. ಆದರೂ

ವ್ಲಾಡಿಮಿರ್ ಜೊತೆಗಿನ ಬದುಕು ಅವನ ಪ್ರೀತಿಯ ಬಗ್ಗೆ ಕೊಲಂಟೆ ಯಾವಾಗಲೂ ಸೌಹಾರ್ದದ ನೆನಪುಗಳನ್ನೇ ದಾಖಲಿಸುತ್ತಾಳೆ.

ಕೊಲಂಟೆ ತನ್ನ ಮಾರ್ಕ್ಸ್‌ವಾದಿ ಅಧ್ಯಯನದಿಂದಾಗಿ ಹಾಗೂ ಕಾರ್ಖಾನೆಯ ಮಹಿಳಾ ಕಾರ್ಮಿಕರ ಜೊತೆಗಿನ ಸಂಪರ್ಕದಿಂದಾಗಿ ಮಹಿಳೆಯರನ್ನು ಮೊದಲು ಅವರ ವರ್ಗದಲ್ಲಿ ಗುರುತಿಸುತ್ತಾಳೆ. ನಂತರ ಅವರ ನಿರ್ಧಿಷ್ಟ ಸಮಸ್ಯೆಗಳು ಸುತ್ತ ಹೋರಾಟ ನಡೆಸಬೇಕಾದುದನ್ನು ಗುರುತಿಸುತ್ತಾಳೆ.

1898ರಲ್ಲಿ ವ್ಲಾಡಿಮಿರ್‌ನನ್ನು ಬಿಟ್ಟ ನಂತರ ಕೊಲಾಂಟೆ ತನ್ನ ತಂದೆ - ತಾಯಿಯವರ ಹತ್ತಿರ ತನ್ನ ಮಗುವನ್ನು ಬಿಟ್ಟು, ಆತ್ಮೀಯ ಗೆಳತಿಯೊಂದಿಗೆ ಜ್ಯೂರಿಚ್‌ಗೆ ಹೋಗುತ್ತಾಳೆ. ಅಲ್ಲಿ ಅತ್ಯಂತ ಉತ್ತಮ ಮಟ್ಟದ ಮಾರ್ಕ್ಸ್‌ವಾದಿ ಆರ್ಥಿಕ ತಜ್ಞರು ಬರೆದ ಪುಸ್ತಕಗಳನ್ನು ಅಧ್ಯಯನ ನಡೆಸುತ್ತಾಳೆ. 1870 ರಲ್ಲಿ ರಷ್ಯಾದ ವಿದ್ಯಾರ್ಥಿನಿಯರು ಸೃಷ್ಟಿಸಿದ್ದ ರಾಜಕೀಯ ಆಶಾವಾದದ ವಾತಾವರಣವನ್ನು ಮರಳಿ ಸೃಷ್ಟಿಸುವ ಸಾಧ್ಯತೆಗಳ ಬಗ್ಗೆ, ಯೋಚಿಸತೊಡಗುತ್ತಾಳೆ. ಆದರೆ ಇದು ನಿರಾಶಾದಾಯಕ ಪ್ರಯಾಣವಾಗುತ್ತದೆ. ಆಕೆಯ ಪ್ರೊಫೆಸರ್ ಜೊತೆಗೆ ಭಿನ್ನಾಭಿಪ್ರಾಯ ಮೂಡಿ ಕೊಲಾಂಟೆ ಕಾರ್ಲ್ ಗೌಟಸ್ಕಿ ಹಾಗೂ ರೋಸಾ ಲಕ್ಸಂಬರ್ಗ್‌ರವರ ಬರಹಗಳಿಗೆ ಮೊರೆ ಹೋಗುತ್ತಾಳೆ.

ರಷ್ಯಾಕ್ಕೆ ಮರಳುವ ಈಕೆ ಮಗನ ಜೊತೆಗಿರತೊಡಗುತ್ತಾಳೆ. ರಷ್ಯಾದಲ್ಲಿ ಆಗ ಸಮಾಜವಾದಿ ಡೆಮಾಕ್ರೆಟ್ಸ್ ಮಧ್ಯೆ ಭಿನ್ನಾಭಿಪ್ರಾಯಗಳು ತಲೆದೋರಿದ್ದವು. ಕೇಂದ್ರೀಕೃತ ಪಕ್ಷವೊಂದು ಕಾರ್ಮಿಕರ ಕ್ರಾಂತಿ ಮುನ್ನಡೆಸಲು ಅಗತ್ಯ ಎಂಬುದು ಒಂದು ನಿಲುವಾದರೆ, ಕಾರ್ಮಿಕರೇ ಕಾಲಕ್ರಮೇಣ ಕಾರ್ಮಿಕ ಸಂಘಟನೆಗಳ ಮೂಲಕ ತಮ್ಮಗುರಿಗಳನ್ನು ತಲುಪಬಲ್ಲರು ಎಂಬುದು ಇನ್ನೊಂದು ನಿಲುವಾಗಿತ್ತು. ಈ ರೀತಿಯ ತಾಕಲಾಟ, ತಳಮಳಗಳನ್ನು ನಾವು ಕೊಲಾಂಟೆಯ 'ತ್ರೀ ಜನರೇಶನ್ಸ್' ಕಥೆಯಲ್ಲಿ ಕಾಣಬಹುದಾಗಿದೆ. ಈ ಭಿನ್ನಾಭಿಪ್ರಾಯಗಳಿಂದಾಗಿ ಬೋಲ್‌ಶವಿಕ್ ಹಾಗೂ ಮೆನ್‌ಶವಿಕ್ ಎಂದು ಎರೆಡು ಭಾಗಗಳಾಗಿ ಮಾರ್ಕ್ಸವಾದಿ ಗುಂಪುಗಳು ಒಡೆದು ಹೋಗಿದ್ದವು.

ಈ ಸಂದರ್ಭದಲ್ಲಿ ಕಾರ್ಖಾನೆಯ ಮಹಿಳೆಯರು ಕೈಗಾರಿಕಾ ಸಂಬಂಧಿತ ಮಾತು-ಕತೆಗಳಲ್ಲಿ ಬಹು ಮುಖ್ಯವಾದ ಪಾತ್ರ ವಹಿಸುತ್ತಿರುವುದನ್ನು ಕೊಲಾಂಟೆ ಗಮನಿಸತೊಡಗಿದ್ದಳು. ಮಹಿಳೆಯರು ಸಮಾನ ವೇತನ ಹಾಗೂ ಹೆರಿಗೆಯ ರಜೆಗಾಗಿ ಸ್ವತಂತ್ರವಾಗಿ ಬೇಡಿಕೆಗಳನ್ನು ಮಂಡಿಸತೊಡಗಿದ್ದರು. ಆದರೆ ಈ ಕಾರ್ಖಾನೆಯ ಮಹಿಳೆಯರಿಗೆ ಕಾರ್ಖಾನೆಯ ಹೊರಗೆ ಸಂಘಟಿತ ಗುಂಪುಗಳ ಬೆಂಬಲವಿರಲಿಲ್ಲ. ಇದೇ ಸಂದರ್ಭದಲ್ಲಿ ಹುಟ್ಟಿಕೊಂಡ ಸ್ತ್ರೀವಾದಿ ಸಂಘಟನೆಗಳು ಓಟಿನ ಹಕ್ಕಿಗಾಗಿ, ಉದ್ಯೋಗದ ಹಕ್ಕಿಗಾಗಿ ಹೋರಾಡತೊಡಗಿದ್ದರು. 1905 ರ ಕ್ರಾಂತಿಯಲ್ಲಿ ಸ್ತ್ರೀವಾದಿ ಗುಂಪುಗಳೊಡನೆ ವೈಚಾರಿಕ ಭಿನ್ನಾಭಿಪ್ರಾಯ ಹೊಂದಿದ ಕೊಲಾಂಟೆ ಬೋಲ್‌ಶವಿಕ್ಸ್ ಪಂಗಡದ ಮೇಲೆ ಇನ್ನಷ್ಟು ಕೋಪಗೊಂಡಿದ್ದಳು.

1905, ಜನವರಿ 5 ರಂದು ಒಂದು ದೊಡ್ಡ ಕಾರ್ಮಿಕರ ಗುಂಪು ತ್ಯಾರ್‌ಗೆ ತಮ್ಮ ಅಹವಾಲನ್ನು ತಲುಪಿಸಲು ಒಂದು ದೊಡ್ಡ ಪ್ರತಿಭಟನಾ ಮೆರವಣಿಗೆ ಮಾಡಿದರು. ಇದರ ನೇತಾರ ಒಬ್ಬ ಪಾದ್ರಿ ಸಂವಿಧಾನಾತ್ಮಕ ಸರ್ಕಾರಕ್ಕಾಗಿ ಈ ಪ್ರತಿಭಟನಾ ಮೆರವಣಿಗೆ ಬೇಡಿಕೆ ಇತ್ತಿತ್ತು. ಬೋಲ್‌ಶವಿಕ್ಸ್ ಹಾಗೂ ಮೆನ್‌ಶವಿಕ್ ಪಂಗಡದವರೀರ್ವರಿಗೂ ಮಧ್ಯೆ ಪ್ರವೇಶ ಮಾಡಲಾಗದೇ ಅಸಹಾಯಕರಾಗಿ ವೀಕ್ಷಿಸತೊಡಗಿದ್ದರು. ಈ ಶಾಂತಿಯುತ ಮೆರವಣಿಗೆಯನ್ನು ಸೈನಿಕರು ಎಗ್ಗಿಲ್ಲದೇ ಕ್ರೂರ ರೀತಿಯಲ್ಲಿ ದಂಡಿಸಲು ಪ್ರಯತ್ನಿಸಿದರು. ಇದು 'ಬ್ಲಡಿ ಸಂಡೆ' ಎಂದೇ ಚರಿತ್ರೆಯಲ್ಲಿ ದಾಖಲಾಗಿದೆ. 1905 ನನ್ನನ್ನು ಬೀದಿಗಿಳಿಸಿತು' ಎಂದು ಬರೆಯುವ ಕೊಲಾಂಟೆ ಈ ಸಂದರ್ಭದಲ್ಲಿ ಕಾರ್ಮಿಕರ ಮೆರವಣಿಗೆ, ಧರಣಿ ಹಕ್ಕನ್ನು ಸಮರ್ಥಿಸುತ್ತಾ ಬೋಲ್‌ಶವಿಕ್ಸ್ ಹಾಗೂ ಮೆನ್‌ಶವಿಕ್ಸ್ ಎರೆಡೂ ಪಂಗಡದವರೊಡನೆ ಮಾತು ಕತೆಗೆ ಇಳಿಯುತ್ತಾಳೆ.

'ಬ್ಲಡಿ ಸಂಡೆ' ಯ ಘಟನೆಯ ನಂತರದಲ್ಲಿ ರಷ್ಯಾದ ಉದ್ದಗಲಕ್ಕೂ ಕಾರ್ಮಿಕರ ಧರಣಿ, ಮುಷ್ಕರಗಳನ್ನು ಕೊಲಾಂಟೆ ಗಮನಿಸುತ್ತಾಳೆ. ಇಷ್ಟರಲ್ಲಿ ಮಹಿಳಾ ಕಾರ್ಮಿಕರು ಕೈಗಾರಿಕಾ ಕ್ರಾಂತಿಯಲ್ಲಿ ಭಾಗವಹಿಸುವ ಅಗತ್ಯದ ಬಗ್ಗೆ ಆಕೆಗೆ ಸ್ಪಷ್ಟವಾಗುತ್ತದೆ. ಕಾರ್ಖಾನೆಯ ಮಹಿಳೆಯರು ಕೆಲಸದ ಸಂದರ್ಭದಲ್ಲಿ ಹಾಗೂ ಮನೆಯಲ್ಲಿ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಆಕೆ ಒಂದು ದೊಡ್ಡ ಮಹಿಳಾ ಕ್ಲಬ್ ಒಂದನ್ನು ಸ್ಥಾಪಿಸಿದಳು. ಈ ಕ್ಲಬ್‌ಗೆ ಸಹಕಾರ, ಬೆಂಬಲ ನೀಡದಿದ್ದರೆ ಬಹಳಷ್ಟು ಕ್ರಿಯಾಶೀಲ ಮಹಿಳೆಯರು ಮೆನ್‌ಶವಿಕ್ ಬೆಂಬಲಿತ ಮಹಿಳಾ ಗುಂಪುಗಳಿಗೆ ಹೋಗುತ್ತಾರೆಂದು ಬೋಲ್‌ಶವಿಕ್ಸ್ ಈ ಕ್ಲಬ್‌ಗೆ ಬೆಂಬಲ ನೀಡುತ್ತಾರೆ.

1908 ರಲ್ಲಿ ಸ್ತ್ರೀವಾದಿ ಗುಂಪುಗಳು ಕಾರ್ಖಾನೆಯ ಮಹಿಳಾ ಕಾರ್ಮಿಕರ ಬಗ್ಗೆ ಕಾಳಜಿ ತೋರಿಸತೊಡಗಿದಾಗ, ಕೊಲಾಂಟೆ ಈ ಸಂದರ್ಭವನ್ನು ಮಹಿಳಾ ಕಾರ್ಮಿಕರನ್ನು ಸಂಘಟಿಸಲು

ಬಳಸಿಕೊಳ್ಳಲು ನಿರ್ಧಸುತ್ತಾಳೆ. ಮಹಿಳಾ ಕಾರ್ಮಿಕರು ಆರ್ಥಿಕ ಹಾಗೂ ಲೈಂಗಿಕ ಸಮಾನತೆಯ ಬೇಡಿಕೆಗಳನ್ನು ಇಡಬೇಕೆಂಬುದು ಆಕೆಯ ಇಚ್ಛೆಯಾಗಿತ್ತು. ಹಾಗಾಗಿ ಅವರಿಗಾಗಿ ಆಕೆ ಕರಪತ್ರಿಕೆಗಳನ್ನು ಬರೆಯುತ್ತಾಳೆ, ಕಾರ್ಖಾನೆಯ ಮಹಿಳಾ ಕಾರ್ಮಿಕರ ಜೊತೆ ಹಗಲಿರಳೂ ಸಮಯ ಕಳೆಯುತ್ತಾಳೆ. ಆಕೆಯ ಈ ಅನುಭವಗಳೆಲ್ಲ 'ದಿ ಸೋಷಿಯಲ್ ಬೇಸಿಸ್ ಆಫ್ ದಿ ವಿಮೆನ್ಸ್' ನಲ್ಲಿ ಪ್ರತಿಬಿಂಬಿಸಲ್ಪಟ್ಟಿವೆ.

ಈ ವೇಳೆಗಾಗಲೇ ಆಕೆಯ ರಾಜಕೀಯ ಚಟುವಟಿಕೆಗಳ ಮೇಲೆ ಪೋಲಿಸರ ಕಣ್ಣು ಬೀಳುತ್ತದೆ. ತನ್ನ ತಂದೆ-ತಾಯಿ ಹಾಗೂ ಮಗನ ಬದುಕನ್ನು ಛಿದ್ರಗೊಳಿಸದೇ ಇರುವುದಕ್ಕಾಗಿ ಆಕೆ ತಂದೆ-ತಾಯಿಯ ಮನೆಯನ್ನು ತೊರೆಯುತ್ತಾಳೆ. ಮಗನನ್ನು ಅಲ್ಲಿಯೇ ಬಿಟ್ಟು ಆಕೆ ಜರ್ಮನಿಗೆ ಓಡಿಹೋಗುತ್ತಾಳೆ.

9 ವರ್ಷಗಳು ತಲೆಮರೆಸಿಕೊಂಡ ಸಂದರ್ಭದಲ್ಲಿ ಯುರೋಪ್ ಹಾಗೂ ಅಮೇರಿಕಾದಲ್ಲಿ ಕೊಲಾಂಟೆ ಸುಧಾರಣಾವಾದಿ ಯೋಜನೆಗಳ ಬಗ್ಗೆ ಬಲವಾದ ಅವಿಶ್ವಾಸ ಬೆಳೆಸಿಕೊಳ್ಳುತ್ತಾಳೆ. ಯೂರೋಪ್‌ನಲ್ಲಿ ಯುದ್ಧ ಪ್ರಾರಂಭವಾದಾಗ, ಅಂದರೆ ಮೊದಲನೇ ಪ್ರಪಂಚದ ಯುದ್ಧ ಪ್ರಾರಂಭವಾದಾಗ ಆಕೆ ಬೋಲ್‌ಶವಿಕ್ಸ್ ಜೊತೆಗೂಡಿ ಯೂದ್ಧ ನಿಲ್ಲಿಸುವುದಕ್ಕೆ ಹಾಗೂ ಅಂತರ್ ರಾಷ್ಟ್ರೀಯತೆ ಸ್ಥಾಪಿಸುವುದಕ್ಕೆ ಹೋರಾಡತೊಡಗುತ್ತಾಳೆ. 1917 ರ ಫೆಬ್ರವರಿ ಕ್ರಾಂತಿಯಿಂದಾಗಿ ಆಕೆಯ ತಲೆ ಮರೆಸಿಕೊಳ್ಳುವ ಜೀವನಕ್ಕೆ ತೆರೆ ಬೀಳುತ್ತದೆ. ಒಂದೆರೆಡು ತಿಂಗಳಲ್ಲಿಯೇ ಆಕೆ ಲೆನಿನ್ ಹಾಗೂ ಇತರ ಮೂವತ್ತು ರಾಜಕೀಯ ವಲಸೆಗಾರರನ್ನು ಭೇಟಿಯಾಗುತ್ತಾಳೆ. ಲೆನಿನ 800 ಜನರಿಗೆ ಮಾಡಿದ ಪ್ರಸಿದ್ಧ ಭಾಷಣವನ್ನುಕೇಳುತ್ತಾಳೆ. ನಂತರ ಲೆನಿನ್ ಹಾಗೂ ಇತರ ಬೋಲ್‌ಶವಿಕ್ಸ್ ಜೊತೆಗೂಡಿ ಪಕ್ಷದ ಕೇಂದ್ರ ಸ್ಥಳಗಳಿಗೆ ಹೋಗುತ್ತಾಳೆ. ಇಲ್ಲಿ ಸದಸ್ಯರಿಗೆ ಪ್ರಚಾರ ಹಾಗೂ ಧರಣಿ, ಮುಷ್ಕರಗಳ ಕೆಲಸಗಳನ್ನು ಕೊಡಲಾಗುತ್ತದೆ.

ಯೂರೋಪ್‌ನಲ್ಲಿದ್ದಾಗ ಅಲೆಕ್ಸಾಂಡ್ರ ಕೊಲಾಂಟೆ ಒಬ್ಬ ಉತ್ತಮ ವಾಗ್ಮಿಯಾಗಿ ರೂಪುಗೊಂಡಿದ್ದಳು. ಈಗ ಆಕೆಗೆ ಯುದ್ಧದ ನೌಕೆಯಲ್ಲಿರುವ ನೂರಾರು ಸಮುದ್ರಯಾನಿಗಳಿಗೆ ಮಾತನಾಡುವ ಅತೀ ಮುಖ್ಯವಾದ ಕೆಲಸವನ್ನು ವಹಿಸಿಕೊಡಲಾಯಿತು. ಬಾಲ್‌ಟಿಕ್ ಫ್ಲೀಟ್ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾದ ಪಾವೆಲ್ ಡೈ ಬೆನ್‌ಕೋ ಇದರಲ್ಲಿ ಒಬ್ಬರಾಗಿದ್ದರು. ಅಲೆಕ್ಸಾಂಡ್ರಾ ಕೊಲಾಂಟೆ ಹಾಗೂ ಪಾವೆಲ್ ಡೈ ಬೆನ್‌ಕೋ ಮಧ್ಯ ಸಂಬಂಧ ಬೆಳೆಯುತ್ತದೆ. ಈಕೆ ಮಾಡಿದ ಭಾಷಣಗಳಿಂದಾಗಿ ಕೆರೆನಸ್ಕಿ ಸಮುದ್ರಯಾನಿಗಳ ನಡುವೆ ತಮ್ಮ ಬೆಂಬಲವನ್ನು ಕಳೆದುಕೊಳ್ಳುವಂತಾಯಿತು.

ಸೈನ್ಯದಲ್ಲಿ ಕೂಡಾ ಈ ಹಂತದಲ್ಲಿ ಅವನತಿ ಕಾಣತೊಡಗಿತ್ತು. ಅನೇಕ ಸೈನಿಕರು ತಮ್ಮ ಸ್ಥಾನಗಳನ್ನು ತೊರೆದು ಬೋಲ್‌ಶವಿಕ್ಸ್ ಜೊತೆಗೆ ಸೇರಿ ಯುದ್ಧ ನಿಲ್ಲಿಸಬೇಕೆಂದು ಬೇಡಿಕೆಯನ್ನು ಇತ್ತರು. ಅಕ್ಟೋಬರ್‌ನಲ್ಲಿ ಸೈನಿಕ ಪಡೆಯ ಒಂದು ಗುಂಪು ಕೆರೆನೆಸ್ಕಿ ಅಸೆಂಬ್ಲಿಗೆ ವಿಧೇಯತೆ ತೋರಿಸುವುದಕ್ಕೆ ನಿರಾಕರಿಸಿತು. ಹೀಗಾಗಿ ಕೆರೆನೆಸ್ಕಿ ಪಟ್ಟಣವನ್ನು ಬಿಡಬೇಕಾಗುತ್ತದೆ. ಅಕ್ಟೋಬರ್ 25ರಂದು ಬೋಲ್‌ಶವಿಕ್ ಸೈನಿಕರ ಕೆರೆನೆಸ್ಕಿಯ ಗೈರು ಹಾಜರಿಯಲ್ಲಿ ವಿಂಟರ್ ಪ್ಯಾಲೇಸ್‌ನ್ನು ವಶಪಡಿಸಿಕೊಂಡು ಬೋಲ್‌ಶವಿಕ್ ಸರ್ಕಾರವನ್ನು ಸ್ಥಾಪಿಸಿದರು. ಕೊಲಾಂಟೆ ಈ ಸರ್ಕಾರದಲ್ಲಿ ಪಬ್ಲಿಕ್ ವೆಲ್‌ಫೇರ್ ಕಮಿಶನರ್ ಆಗಿ ನೇಮಕ ಗೊಂಡರು. ಯುದ್ಧದಿಂದ ಹರಿದು ಹಂಚಿ ಹೋಗಿದ್ದ ರಷ್ಯದಲ್ಲಿ ಈಕೆಯ ಸವಾಲುಗಳನ್ನೆದುರಿಸಿ ಕಾರ್ಯ ಚಟುವಟಿಕೆಗಳನ್ನು ನಡೆಸಬೇಕಿತ್ತು.

ಬೋಲ್‌ಶವಿಕ್ಸ್ ನಂತರದಲ್ಲಿ ರಷ್ಯದಲ್ಲಿ ಆಂತರಿಕ ಯುದ್ಧಗಳನ್ನು ಎದುರಿಸಬೇಕಾಯಿತು. ಈ ಯುದ್ಧಗಳು ಬೋಲ್‌ಶವಿಕ್ಸ್ ಸರ್ಕಾರಕ್ಕೆ ಒಂದು ರೀತಿಯ ಬೆದರಿಕೆಯನ್ನು ಒಡ್ಡ ತೊಡಗಿದ್ದವು. ಹಾಗಾಗಿ ಮುಂದಿನ ಕ್ರಾಂತಿಗೆ ಬಲವಾಗಿ ಅಪಾಯ ಒಡ್ಡುವ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳು ಈ ಸಂದರ್ಭದಲ್ಲಿ ತಲೆದೋರಿದವು. ಕಾಳ ಸಂತೆ, ಹಣದುಬ್ಬರ, ಇಂತಹ ಸಮಸ್ಯೆಗಳನ್ನು ಬಗೆಹರಿಸಿ ಕಮ್ಯುನಿಸಂನ ಆರ್ಥಿಕತೆಗೆ ಇವರು ಭದ್ರವಾದ ಬುನಾದಿಯನ್ನು ಹಾಕಬೇಕಾಗಿತ್ತು.

ಇಲ್ಲಿ ಇನ್ನಿತರ ಯುವತಿಯರೂ ಇದ್ದರು. ಇವರಿಗೆ ಕ್ವಾಟರ್ಸ್‌ಗಳಲ್ಲಿ ಒಟ್ಟಿಗೇ ಬದುಕುವುದು, ಸಮುದಾಯದ ಕ್ರಶ್‌ಗಳು ಕ್ಯಾಂಟೀನ್ ವ್ಯವಸ್ಥೆಗಳು ಒಂದು ಮಟ್ಟಿಗೆ ಕಮ್ಯುನಿಸ್ಟ್ ಸಮಾಜದ ಕಲ್ಪನೆಯನ್ನು ನನಸು ಮಾಡಿದ್ದವು. ಬಹಳಷ್ಟು ಜನ ಮಹಿಳೆಯರು ಪಕ್ಷದ ಕಾರ್ಯಕರ್ತರಾಗಿ ಈ ಸಮಯದಲ್ಲಿ ರೂಪುಗೊಂಡರು. ಒಟ್ಟಾಗಿ ಬದುಕುವುದು, ಸಾಮಾನ್ಯವಾದ ಅಡಿಗೆ ಮನೆ, ಇಂತಹ ಕಲ್ಪನೆಗಳನ್ನು ಅನೇಕ ಮಹಿಳೆಯರು ವಾಸ್ತವ್ಯಕ್ಕೆ ತರಲು ಪ್ರಯತ್ನಿಸಿದರು.

ಆಂತರಿಕ ಯುದ್ಧ ಮುಗಿಯುವವರೆಗೂ ಮಹಿಳೆಯರನ್ನು ಸಾಮಾಜಿಕರಣಗೊಂಡ ಮನೆಗೆಲಸ ಹಾಗೂ ನೈಪುಣ್ಯತೆಯನ್ನುಳ್ಳ ಕೆಲಸಕ್ಕೆ ಒಳಗೊಳ್ಳುವ ಪಕ್ಷದ ಉದ್ದೇಶಗಳ ಬಗ್ಗೆ-ಮಹಿಳೆಯರು ನಂಬಿಕೆಯನ್ನಿಟ್ಟಿದ್ದರು. ಆದರೆ ಮಹಿಳೆಯರ ಈ ನಂಬಿಕೆಗಳ ಹುಸಿಯಾದವು. ಹೊಸದಾಗಿ ಹುಟ್ಟಿಕೊಂಡ ಸೋಷಲಿಸ್ಟ್ ಕುಟುಂಬಗಳಲ್ಲಿ ಕೂಡಾ ಹಳೆಯ ವಿಚಾರಗಳನ್ನೇ ಹೆಚ್ಚು ಹೆಚ್ಚಾಗಿ ಪ್ರತಿಪಾದಿಸಲಾಗುತ್ತಿತ್ತು. 'ಮಹಿಳೆಯರ ಕೆಲಸ' ಹಾಗೂ ಆರ್ಥಿಕತೆಯಲ್ಲಿ ಮಹಿಳೆಯರ ಹೊಸದಾದ ಪಾತ್ರಗಳ ಬಗ್ಗೆ

ಹೊಸದಾದ ಆಲೋಚನೆಗಳಿಗೆ ಇಂಬುಗೊಡಲೇ ಇಲ್ಲ. ಹಾಗಾಗಿ ಮಹಿಳೆಯರ ಬಗ್ಗೆ ಪೂರ್ವಗ್ರಹ ಪೀಡಿತ ಭಾವನೆಗಳೇ ಮುಂದುವರೆದವು. ಕಾನೂನುಗಳೂ ಕುಟುಂಬ ಹಾಗೂ ಲೈಂಗಿಕತೆಯನ್ನು ಮರು ವ್ಯಾಖ್ಯಾನಿಸಿದರೂ ಸಹ ಅವು ಪೂರ್ವಗ್ರಹ ಪೀಡಿತ ಭಾವನೆಗಳನ್ನು ಅಳಿಸಿಹಾಕುವಲ್ಲಿ ವಿಫಲವಾದವು.

ಕ್ರಾಂತಿಯ ನಂತರದ ಮೊದಲ ದಿನಗಳಲ್ಲಿ ಲೆನಿನ್ ಸಾಂಸ್ಕೃತಿಕ, ಆರ್ಥಿಕ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೂ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಉತ್ತರಿಸಲು ಪ್ರಯತ್ನಿಸಿದ. ಈ ಸಂದರ್ಭದಲ್ಲಿಯೇ ಕ್ರಾಂತಿಕಾರಕ ಹೊಸದ ವಿವಾಹ ಕಾನೂನನ್ನು ಜಾರಿಗೊಳಿಸಲಾಯಿತು. ಆದರೆ ಇದು ಒಂದು 'ಪ್ರೋಗ್ರಾಂ' ಆಗಿ ಮಾತ್ರ ಉಳಿದುದನ್ನು ಕೊಲಾಂಟೆ ಗಮನಿಸುತ್ತಾಳೆ.

ಉತ್ಪಾದನೆಯಲ್ಲಿ ಕಾರ್ಮಿಕರ ಬೇಡಿಕೆಗಳು ಅಂತರ್ಗತವಾಗದ ಹೊರತು, ಹಾಗೂ ಕಾರ್ಖಾನೆಗಳ ಮೇಲೆ ಕಾರ್ಮಿಕ ಸಂಘಟನೆಗಳ ನಿಯಂತ್ರಣ ಅಂತರ್ಗತವಾಗದ ಹೊರತು ಕುಟುಂಬ ಹಾಗೂ ಲೈಂಗಿಕ ಸಂಬಂಧಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಅಸಾಧ್ಯ ಎಂಬುದು ಕೊಲಾಂಟೆಗೆ ಮನವರಿಕೆಯಾಗಿತ್ತು. 1905ರ ಮಿಲಿಟೆಂಟ್ ಮಹಿಳಾ ಕಾರ್ಮಿಕರು ಹೊಂದಿದ್ದ ಶಿಸ್ತಿನ ಕಾರ್ಮಿಕ ಸಂಘಟನೆಯ ಕ್ರಿಯೆಗಳು ಕಾರ್ಮಿಕರ ಅಗತ್ಯಗಳ ಬಗ್ಗೆ ಅವರಲ್ಲಿ ಭರವಸೆ, ತಿಳುವಳಿಕೆಯನ್ನು ಹುಟ್ಟು ಹಾಕಿದವು. ಅವರಲ್ಲಿಯೇ ಕ್ರಾಂತಿಕಾರಕ ಹೋರಾಟಗಾರರು ಹುಟ್ಟಿಕೊಳ್ಳುವಂತಾಯಿತು. ಅವರು ತಮಗಾಗಿ ಬೋಲ್‌ಶವಿಕ್ ಪಕ್ಷದಲ್ಲಿ ಸ್ಥಳ ನೀಡಬೇಕೆಂಬ ಬೇಡಿಕೆ ಇಡುವಂತಾಗುವುದರ ಜೊತೆಗೆ ಆ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿಯೂ ಸಹ ಮುಖ್ಯ ಪಾತ್ರ ವಹಿಸಿದರು.

ಕಾರ್ಮಿಕ ವರ್ಗದ ಶಕ್ತಿ ಕಾರ್ಮಿಕ ಸಂಘಟನೆಗಳಲ್ಲಿಯೇ ಬಲವಾಗಿ ಬೇರೂರಿರಬೇಕು. ಇಲ್ಲದಿದ್ದರೆ ಪಕ್ಷದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವವರು ನವ ಸಮಾಜ ಕಟ್ಟುವ ಕೆಲಸವನ್ನು ಸುಮ್ಮನೇ ಮಾಡುತ್ತಿರುತ್ತಾರೆ ಅಷ್ಟೇ ಎಂದು ನಂಬಿದ ಕೊಲಾಂಟೆ ಲೆನಿನ್ ಹಾಗೂ ಪಕ್ಷದ ಇತರ ವಕ್ತಾರರ ಹತ್ತಿರ ಹೊಸದಾಗಿ ಜಾರಿಗೆ ತಂದ ಆರ್ಥಿಕ ನೀತಿಯ ಬಗ್ಗೆ ತನ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದುಂಟು.

1918ರಲ್ಲಿ ಲೆನಿನ್‌ರಿಂದ ಅನುಮೋದಿಸಲ್ಪಟ್ಟ ಟ್ರಾಟ್‌ಸ್ಕಿ ಆಧುನಿಕ ತಾಂತ್ರಿಕತೆ ಹಾಗೂ ಕೈಗಾರಿಕಾ ಹಂತದಲ್ಲಿ ತಾಂತ್ರಿಕ ವರ್ಗದವರಿಗೂ ಹಾಗೂ ವಿಶೇಷ ಪರಿಣಿತರಿಗೆ ಸ್ವಾಯತ್ತತೆ ನೀಡಲು ಸೂಚಿಸಿದನು. ಇದು ಬಹಳಷ್ಟು ಕಾರ್ಮಿಕ ವರ್ಗದ ಜನರಿಗೆ ವೈರುಧ್ಯವಾಗಿ ಕಂಡಿತ್ತು. ಏಕೆಂದರೆ ಬೋಲ್‌ಶವಿಕ್ ಪಕ್ಷದವರು ಕಾರ್ಮಿಕ ವರ್ಗದ ನಿಯಂತ್ರಣದ ಬಗ್ಗೆ ಮಾತನಾಡಿದ್ದರು. ಈ ಹಂತದಲ್ಲಿ ಕಾರ್ಮಿಕ ಸಂಘಟನೆಯಿಂದ ಅಲೆಕ್ಸಾಂಡ್ರಾ ಶ್ಲಿಯಾಪ್‌ನಿಕೋವ್ ಕಾರ್ಮಿಕರು ಇದನ್ನು ವಿರೋಧಿಸಿ ನಡೆಸ ಬೇಕಾದ ಚಟುವಟಿಕೆಗಳ ಸಂಘಟನೆಗೆ ಚಾಲನೆ ನೀಡಿದರು. ಅಲೆಕ್ಸಾಂಡ್ರಾ ಶ್ಲಿಯಾಪ್‌ನಿಕೋವ್ ಜೊತೆ ಪ್ರೀತಿಯ ಮಧುರ ಬಾಂಧವ್ಯ ಬೆಳೆಸಿಕೊಂಡಿದ್ದ ಕೊಲಾಂಟೆ ಈ ಸಂಘಟನೆಯಲ್ಲಿ ಕ್ರಿಯಾಶೀಲಳಾಗಿದ್ದಳು.

ಆಂತರಿಕ ಯುದ್ಧದ ಜಯದ ನಂತರ ಟ್ರಾಟ್‌ಸ್ಕಿ ಸಲಹೆ ನೀಡಿದ ಕಾಳುಗಳ ಮೇಲಿನ ತೆರಿಗೆ, ಮಾರ್ಕೆಟ್‌ಗಳನ್ನು ವಿತರಣೆಗಾಗಿ ನಿಯಂತ್ರಿಸುವ ಎರಡೂ ಅಂಶಗಳು 'ಹೊಸ ಆರ್ಥಿಕ ನೀತಿ' ಯಾಗಿ ಜಾರಿಗೆ ಬಂದವು.

ಈ 'ಹೊಸ ಆರ್ಥಿಕ ನೀತಿ' ಬಹಳ ದೃಷ್ಟಿಯಿಂದ ಕ್ರಾಂತಿಯ ತತ್ವಗಳಿಂದ ದೂರ ಸರಿದಿದ್ದವು ಎಂಬುದನ್ನು ಲೆನಿನ್ ಕೂಡಾ ಒಪ್ಪಿಕೊಂಡಿದ್ದರು. ಹಾಗೂ ಇದು ಆರ್ಥಿಕತೆಯ ವೈರುಧ್ಯಗಳನ್ನು ಸರಳಗೊಳಿಸಲು ಬಳಸಿದ ತಂತ್ರವಾಗಿತ್ತು ಎಂಬುದನ್ನು ಕೂಡಾ ಲೆನಿನ್ ಒಪ್ಪಿಕೊಂಡಿದ್ದರು. ಆರ್ಥಿಕ ವೈರುಧ್ಯದ ನಿಜವಾದ ಉತ್ತರ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘರ್ಷದಲ್ಲಿತ್ತು ಎಂಬುದು ಆತನಿಗೆ ತಿಳಿದಿತ್ತು. ಬೆಲೆಗಳು ಗಗನಕ್ಕೇರಿದಾಗ ಇದನ್ನು ನಿಭಾಯಿಸುವುದೆಂದರೆ ನಿರುದ್ಯೋಗದ ಸಮಸ್ಯೆ ಬೃಹದಾಕಾರವಾಗಿ ಬೆಳೆಯುವುದು ಅನಿವಾರ್ಯವಾಗಿತ್ತು. 20 ದಶಕಗಳಲ್ಲಿ 1 ಮಿಲಿಯನ್‌ಷ್ಟು ನಿರುದ್ಯೋಗಿಗಳಿದ್ದರು.

ಹೊಸದಾಗಿ ನಗರಕ್ಕೆ ಬಂದು ನೈಪುಣ್ಯವಿರದ ಕೆಲಸಗಳಲ್ಲಿದ್ದ ಕೆಲಸಗಾರರೂ ಮತ್ತೆ ತಮ್ಮ ಕೆಲಸ ಕಳೆದುಕೊಳ್ಳುವಂತಾಯಿತು. ರೈತರು ಹಳ್ಳಿಗಳಿಗೆ ಹಿಂತಿರುಗುವಂತಾಯಿತು ಬಹಳಷ್ಟು ಮಹಿಳೆಯರು ಕೆಲಸ ಕಳೆದುಕೊಳ್ಳುವಂತಾಯಿತು. ಒಗ್ಗೂಡಿದ ಮನೆಗೆಲಸದ ಕಲ್ಪನೆ, ಕ್ರಶಗಳು ಎಲ್ಲ ಮಾಯವಾದವು. ಬರಿಯ ಆರ್ಥಿಕ ಅಂಶಗಳಿಂದಷ್ಟೇ ಅಲ್ಲದೇ, ಮಾನಸಿಕ ಒತ್ತಡಗಳಿಂದಾಗಿ ಮಹಿಳೆಯರು ಮತ್ತೆ ಮನೆಗೆಲಸದ ನಾಲ್ಕು ಗೋಡೆಗೆ ಹಿಂತಿರುಗುವಂತಹ ಪರಿಸ್ಥಿತಿ ಬಂದಿತ್ತು . ಇದನ್ನು ಕೊಲಾಂಟೆ 'ಲವ್ ಆಫ್ ವರ್ಕರ್‌ಸ್ ಬೀಸ್' ನಲ್ಲಿ ವಿವರಿಸುತ್ತಾಳೆ. ಕುಟುಂಬ, ಗಂಡ ಇಂತಹವರ ಬೆಂಬಲವಿರದ ಬಹಳಷ್ಟು ಮಹಿಳೆಯರು ಬೀದಿಗಳಲ್ಲಿ ಸೂಳೆಯರಾಗುವಂತಹ ಪರಿಸ್ಥಿತಿ ಕೂಡಾ ಒದಗಿ ಬಂದಿತ್ತು.

ಕಾರ್ಮಿಕರು ವಿರೋಧಿಸಿ ಕಟ್ಟಿದ ಸಂಘಟನೆಗಳು ಈ ಹೊಸ ಆರ್ಥಿಕ ನೀತಿಯಿಂದ ಉಂಟಾದ ವಿನಾಶಗಳನ್ನು ಮನಗಂಡಿದ್ದರು. 1921ರಲ್ಲಿ ಅವರ ಸಲಹೆ, ಸೂಚನೆ ನೀಡಲು

ಮುಂದಾದಾಗ, ಅವರು ಅಲ್ಲಿ ಸೋತದಷ್ಟೇ ಅಲ್ಲ, ಅವರ ಸಂಘುಟನೆಯನ್ನು ಪಕ್ಷದಿಂದ ಹೊರ ಹಾಕಲಾಯಿತು. ನಂತರದ ವರ್ಷದಲ್ಲಿ ಸ್ಟ್ಯಾಲಿನ್ ಸಮಯದಲ್ಲಿ ರಷ್ಯಾದಲ್ಲಿ ಒಂದು ಹುದ್ದೆಗೆ ಕೊಲಾಂಟೆ ಅರ್ಜಿ ಸಲ್ಲಿಸಿದ್ದರು. ಆಕೆಯು ಓಸ್ಲೋರಿ ಸೋವಿಯಟ್ ಟ್ರೇಡ್‌ನ ರಾಯಭಾರಗಳಲ್ಲಿ ಒಬ್ಬ ಸದಸ್ಯಳಾಗಿ ನೇಮಕಗೊಂಡಳು. 1922 ರಿಂದ ಆಕೆಯ ಸಾವಿನವರೆಗೆ ಅಂದರೆ 1952 ರ ವರೆಗೆ ಈ ಡಿಪ್ಲೊಮ್ಯಾಟಿಕ ಜಗತ್ತು ಆಕೆ ಪ್ರಶ್ನೆ ಕೇಳದ ಹಾಗೆ ನಿರ್ಭಂಧಿಸಿತ್ತು.

ಆಕೆಯ 'ಲವ್ ಆಫ್ ವರ್ಕರ್ಸ್ ಬೀಸ್' ನಲ್ಲಿ ಕ್ರಾಂತಿಗೆ ಅದರ ಎಲ್ಲಾ ವೈರುಧ್ಯಗಳ ನಡುವೆಯೂ ರಕ್ತ ಮಾಂಸ ತುಂಬಿಸಿ ನೋಡಲಾಗಿದೆ ! ಮಹಿಳೆಯರ ಲೈಂಗಿಕತೆಯ ಭಾವನೆಗಳಲ್ಲಿ ಅವರ ಹೋರಾಟ, ಅವರ ಮಿತಿಗಳು, ಪ್ರೀತಿಸಲು ಅವರಿಗಿರುವ ಸಾಮರ್ಥ್ಯ, ಅವರಿಗೆ ದೊರೆತ ಹೊಸ ಸ್ವಾತಂತ್ರ್ಯದ ಬಗೆಗಿನ ಗೊಂದಲ ಎಲ್ಲವನ್ನೂ ಕೂಡಾ ವಿವರಿಸಲಾಗಿದೆ. ಕೊಲಾಂಟೆ ಮಹಿಳೆಯರ ಬದುಕನ್ನು ಬದಲಾಯಿಸುವಲ್ಲಿ ಇದ್ದಂತಹ ಕನಸುಗಳು, ಹೆದರಿಕೆಗಳು, ಗೊಂದಲಗಳು, ಆತಂಕಗಳು ಎಲ್ಲವನ್ನೂ ಇಲ್ಲಿ ವಿವರಿಸುತ್ತಾಳೆ.

1923ರಲ್ಲಿ ಈ ಪುಸ್ತಕ ಪ್ರಕಟಗೊಂಡಾಗ, ಇದರ ತುಂಬ ಲೈಂಗಿಕ ವಿಚಾರಗಳೇ ತುಂಬಿರುವುದಾಗಿ ಆರೋಪಿಸಲಾಗಿತ್ತು. 9 ವರ್ಷಗಳ ನಂತರ ಇದನ್ನು 'ಪೆಟಿ ಬೂಜ್ವಾ ಡಿಜಾವ್‌ಚರಿ' ಎಂದು ನಿರ್ಣಯ ನೀಡಲಾಯಿತು. ಇದು ಯಾವ ವರ್ಗವನ್ನು ತಲುಪಬೇಕಿತ್ತೋ ಅವರನ್ನು ತಲುಪಿಲ್ಲ ಎಂದು ಈ ನಿರ್ಣಯ ಸ್ಪಷ್ಟೀಕರಿಸಿತು. ಈ ಕತೆಗಳಲ್ಲಿದ್ದ ನೋವುಂಟು ಮಾಡಬಹುದಾದ ವಿಚಾರ ಯಾವುದು ಎಂಬುದು ಇಂದಿಗೂ ಆಶ್ಚರ್ಯಕರವಾಗಿಯೇ ಉಳಿದಿದೆ. ಈ ಕತೆಗಳಲ್ಲಿ ಈಕೆ ಆನಂದದಾಯಕವಾಗಿರುವ ಲೈಂಗಿಕತೆಯ ಬಗ್ಗೆ ವಿವರಿಸುತ್ತಾಳೆ. ಜನರು ಲೈಂಗಿಕತೆಗೆ ನೀಡಿರುವ ಪ್ರಾಮುಖ್ಯತೆ ಕುರಿತು ವಿವರಿಸುತ್ತಾಳೆ. ಆಕೆಯ ಮಹಿಳಾ ಪಾತ್ರಗಳ ಚಿತ್ರಣದಲ್ಲಿ ತೀವ್ರ ಭಾವನೆಗಳ ಘರ್ಷಣೆ, ಕ್ರೈಸಿಸ್‌ಗಳ ವಿವರಗಳಿವೆ. ಇದರಿಂದ ಕೊಲಾಂಟೆ ಬಿಡಿಸಿಕೊಳ್ಳಲಾಗದಿದ್ದ. ಭಾವನಾತ್ಮಕ ಸಮಸ್ಯೆಗಳ ಬಗ್ಗೆ ಬರೆಯುತ್ತಿದ್ದಳು ಎಂಬುದು ನಮಗೆ ವಿಧಿತವಾಗುತ್ತದೆ.

ತಮ್ಮ ಗಂಡಂದಿರು ಅಥವಾ ಪ್ರಿಯಕರರೊಡನೆಯ ಸಂತೋಷವನ್ನು ಹಾಳು ಮಾಡಿಕೊಳ್ಳುವಂತಹುದನ್ನು ಮಹಿಳೆಯರು ಒಪ್ಪಿಕೊಳ್ಳಲಾರದೇ ಇದ್ದುದು ನಂತರದ ನಾಯಕರಲ್ಲಿ ಒಂದು ರೀತಿಯ ನೋವು ಹುಟ್ಟು ಹಾಕಿರಬಹುದು. ದೈಹಿಕ ಆಸಕ್ತಿ, ಭಾವನೆಗಳನ್ನು - ಕ್ರೂರ ವೈಚಾರಿಕ. ಸ್ವತಂತ್ರ್ಯದ ಬೇಡಿಕೆಗಳ ವಿರುದ್ಧದ ರಕ್ಷಣೆಗಾಗಿ ಕೊಲಾಂಟೆ ಯಾವಾಗಲೂ ತನ್ನ ಕತೆಗಳಲ್ಲಿ ವಿವರಿಸುತ್ತಾಳೆ. ಅವರ ಪ್ರಿಯಕರರೊಂದಿಗಿನ, ಲೈಂಗಿಕ ಬದ್ಧತೆಯೇ ಕೊನೆಯದಾಗಿ ಈ ಹೆಂಗಸರನ್ನು ಪ್ರತ್ಯೇಕ ಗೊಳಿಸಿದಾಗ, ತುಮುಲಾತ್ಮಕ ಕ್ರಿಯಾ ಹೀನತೆಗೆ ತಳ್ಳಿದಾಗಲೇ, ಈಹೆಂಗಸರು ತಮ್ಮ ನಿಜವಾದ ಬೇಡಿಕೆಗಳನ್ನು ವ್ಯಾಖ್ಯಾನಿಸಲು ಧೈರ್ಯ ಮಾಡುತ್ತಾರೆ. ಈ ರೀತಿಯ ಘರ್ಷಣೆಗಳನ್ನು ಕೊಲಾಂಟೆ ತನ್ನ ಮಹಿಳಾ ಪಾತ್ರಗಳಲ್ಲಿ ವಿವರಿಸುತ್ತಾಳೆ.

ಓಲ್ಗಾ ಸರ್‌ಗೀವನಾ, ವ್ಯಾಸಿಲಿಸಾ ಮಾಲಿಜಿನಾ ಮತ್ತು 'ಸಿಸ್ಟರ್ಸ್'ನ ನಿರೂಪಕಿ ಇವರೆಲ್ಲ ಒಟ್ಟಾಗಿ ಭೇಟಿಯಾಗುತ್ತಾರೆ. ಕ್ರಾಂತಿಯ ಮೊದಲು ತಮ್ಮ ಮಹತ್ವದ ಆಕಾಂಕ್ಷೆ ಈಡೇರುವ ಸಂದರ್ಭದಲ್ಲಿ ಇವರು ತಮ್ಮ ಪ್ರಿಯಕರರನ್ನು ಪ್ರೀತಿಸುವ ಮಟ್ಟಕ್ಕೆ ಬೆಳೆದವರು. ತಾವು ರಾಜಕೀಯವಾಗಿ ಒಟ್ಟಿಗೆ ಈ ಕೆಲಸ ಮುಂದುವರೆಸು-ವವರೆಗೆ ಈ ಸಂಬಂಧಗಳು ಮುಂದುವರಿಯುತ್ತವೆ ಎಂಬುದು ಅವರ ಬಲವಾದ ನಂಬಿಕೆ. ಆಂತರಿಕ ಯುದ್ಧದ ಕಾಲದಲ್ಲಿನ ಧೀರ್ಘಕಾಲದ ಒಂಟಿತನ ಹಾಗೂ ಪ್ರತ್ಯೇಕತೆ ಸ್ವಲ್ಪ ಕಾಲದಲ್ಲಿಯೇ ಮುಗಿದು, ತಾವು ತಮ್ಮ ಪ್ರಿಯಕರರೊಡನೆ ಒಂದು ಗೂಡುತ್ತೇವೆಂದು ನಂಬಿಕೊಂಡರು.

ವ್ಯಾಸಿಲಿಸಾ ಮಾಲಿಜಿನಾಳ ಪಾತ್ರದಲ್ಲಿ ಈ ರೀತಿಯ ಘರ್ಷಣೆಗಳನ್ನು ಕೊಲಾಂಟೆ ಅತ್ಯಂತ ಆಳವಾಗಿ ವಿವರಿಸುತ್ತಾಳೆ ವ್ಯಾಸಿಲಿಸಾ ತನ್ನ ಪ್ರಿಯಕರ ವಲೋದ್ಯನಿಂದ ಪ್ರತ್ಯೇಕ ಗೊಂಡಿರುತ್ತಾಳೆ. ಆಕೆ ಆಕೆಗೋಸ್ಕರ ಒಂದು ಕಲೆಕ್ಟೀವ್ ಕುಟುಂಬ ಹುಟ್ಟುಹಾಕಿಕೊಳ್ಳುತ್ತಾಳೆ. ಆಕೆಯ ನೆರೆ-ಹೊರೆಯವರೊಡನೆ ಒಂದು ಸಮುದಾಯದ ಮನೆ ಸೃಷ್ಟಿಸಿಕೊಳ್ಳುತ್ತಾಳೆ. ಆದರೆ ಈ ಪ್ರಯತ್ನಗಳು ಆಕೆಯ ಲೈಂಗಿಕತೆಯ ಒಂಟಿತನ ಹಾಗೂ ಪ್ರತ್ಯೇಕತೆಯ ಭಾವನೆಗಳನ್ನು ತೊಡೆದು ಹಾಕುವುದಿಲ್ಲ. ಈ ಭಾವನೆಗಳಿಂದಾಗಿಯೇ ಆಕೆಗೆ 'ವ್ಲಾಡಿಮೀರ' ನ ಹಂಡತಿಯಾಗಿ ಪ್ರಾಮಾಣಿಕವಾಗಿ ಜೀವನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆಕೆ ಆತನೊಡನೆ ಮತ್ತೆ ಒಂದಾದಾಗ ಅವನ ಇಷ್ಟ - ಅನಿಷ್ಟಗಳ ಪ್ರಕಾರವೇ ಆತನ ಮನೆಯಲ್ಲಿ ಜೀವನ ಸಾಗಿಸಬೇಕಾಗುತ್ತದೆ. ಆತ ಆಕೆಗಾಗಿ ಕೊಂಡ ಉಡುಗೆ-ತೊಡುಗೆಗಳನ್ನೇ ಧರಿಸಬೇಕಾಗುತ್ತದೆ.

ವ್ಲಾಡಿಮಿರ್‌ನ ತಣ್ಣನೆಯ ಮನೆ ಆಕೆಯನ್ನು ಆಕೆಯ ಸ್ವಂತ ಮನೆಯಿಂದ ದೂರ ಸರಿಸುತ್ತದೆ. ಅವಳ ಸಮುದಾಯದ ಬೆಚ್ಚನೆಯ ಮನೆಯಿಂದ ದೂರ ಸರಿಸುತ್ತದೆ. ಆ ಮನೆಯಲ್ಲಿನ ಲಕ್ಸುರಿ ಸೌಲಭ್ಯಗಳು ಆಕೆಯ ಗಂಡ - ಆಕೆಯಲ್ಲಿ ಪರಕೀಯ ಭಾವನೆಯನ್ನು ಹುಟ್ಟು ಹಾಕುತ್ತವೆ. ಆತ ಆಕೆಗಾಗಿ ಈ ಮನೆ ಮಾಡಿದ್ದ. ಸೌಲಭ್ಯಯುತವಾಗಿದ್ದ ಆ ಮನೆಯಲ್ಲಿ ಸುಲಲಿತವಾಗಿ ಆಕೆ ಮನೆಯೊಡತಿಯಾಗಿ ಕಾರ್ಯನಿರ್ವಹಿಸಬಹುದಾಗಿತ್ತು. ಆತ ಹೊರಗೆ ತನ್ನ ಸೇವಕರನ್ನು ಮ್ಯಾನೇಜ್ ಮಾಡಿದ ಹಾಗೆ ಈಕೆ ಮನೆಯಲ್ಲಿದ್ದು ಕೆಲಸ ನಿರ್ವಹಿಸಬೇಕಾಗಿತ್ತು. ಹೊಸ ಆರ್ಥಿಕ ನೀತಿ ಉಂಟು ಮಾಡಿದ ವ್ಯಾವಹಾರಿಕ ಪ್ರಪಂಚದಲ್ಲಿ

ಆತ ಕಾರ್ಯ ನಿರ್ವಹಿಸುವುದಕ್ಕೆ, ಆತನ ಹೊರಗಿನ ಪ್ರಪಂಚದ ಅಸ್ತಿತ್ವಕ್ಕೆ ಅರ್ಥಪೂರ್ಣವಾಗುವಂತೆ ಆಕೆ ಮನೆಯೊಳಗೇ ಕೆಲಸ ನಿರ್ವಹಿಸಬೇಕಾಗಿತ್ತು.

ಈ ಮನೆ ಆತನಿಗೆ ಪಕ್ಷಿಧಾಮವಾಗಿದ್ದರೆ, ಆಕೆಗೆ ಜೈಲಾಗಿತ್ತು. ಆಕೆಯ ಕ್ರಿಯಾಹೀನ ಹಾಗೂ ಅವಲಂಬಿತ ಬದುಕಿನ ಬಗ್ಗೆ ಆಕೆಯೊಳಗೇ ಒಂದು ರೀತಿಯ ತುಮುಲ, ಆಂತರಿಕ ಒತ್ತಡ ಪ್ರಾರಂಭವಾಗಿತ್ತು. ಪಕ್ಷದ ಎಲ್ಲಾ ಕೆಲಸಗಳಿಂದ ದೂರ ಸರಿದ ಹಾಗೆ, ಪಕ್ಷದ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದ ಗಂಡನನ್ನು ಬೆಂಬಲಿಸುವ ಆಂತರಿಕ ಒತ್ತಡ ಹಾಗೂ ಪಕ್ಷಕ್ಕೆ ವಿಧೇಯಳಾಗಿ ನಿಲ್ಲಬೇಕೆನ್ನುವ ಆಕೆಯ ಸ್ವಂತ ಭಾವನೆಗಳ ಸಂಘರ್ಷದಲ್ಲಿಯೇ ಆಕೆಯ ಶ್ರಮವೆಲ್ಲವೂ ವ್ಯರ್ಥವಾಗುತ್ತಿತ್ತು.

ವ್ಯಾಸಿಲಿಸಾ ಉಸಿರುಗಟ್ಟಿಸುವ ಈ ಸಂದರ್ಭದಲ್ಲಿ ಹೆಚ್ಚಾಗಿ ಕಾಯಿಲೆ ಬೀಳತೊಡಗಿದ್ದಳು. ಉಪಯೋಗವಿಲ್ಲದ ವಸ್ತುವಿನ ಹಾಗೆ ವ್ಲಾಡಿಮಿರ್‌ಗೆ ತನ್ನನ್ನು ಮುದ್ದಿಸಲು ಬಿಡುವಳು. ಆಕೆಯ ಅಸಹಾಯಕತೆ ಆಕೆಗೆ ಅರ್ಥವಾಗಿತ್ತು. ಈ ರೀತಿಯ ಮನೆಯ ಹೆಣಭಾರ, ಲಕ್ವ ಹೊಡೆದ ಬದುಕು ಇವುಗಳಿಂದಾಗಿ ಆಕೆಯ ಹೊರಗಿನ ಪ್ರಪಂಚದ ಸಾಹಸಗಳನ್ನು ವಿವರಣಾತ್ಮಕವಾಗಿ ನೀಡಲಾಗಿದೆ. ಆಕೆಯ ಮನೆಯ ಹೊರಗಿನ ತೋಟ, ಅಲ್ಲಿನ ಮರಗಳೂ,ಪಕ್ಷಿಗಳು ಆಕೆಯ ಸಂತೋಷದ ಸಾಧನಗಳಾಗುತ್ತವೆ.

ಅದೇ ಪ್ರದೇಶದ ಪಕ್ಷದ ಕಾರ್ಯಕರ್ತರೊಡನೆಯ ವ್ಯಾಸಿಲಿಸಾಳ ಸಂಪರ್ಕಗಳನ್ನು ಕೊಲಾಂಟೆ ಬಹಳ ಚೆನ್ನಾಗಿ ವಿವರಿಸುತ್ತಾಳೆ. 20ನೇ ಶತಮಾನದ ರಷ್ಯಾದ ಪಟ್ಟಣವೊಂದರ ಬದುಕನ್ನು ಕೊಲಾಂಟೆ ಇಲ್ಲಿ ಚೆನ್ನಾಗಿ ಚಿತ್ರಿಸುತ್ತಾಳೆ. ಇಲ್ಲಿ ವ್ಯಾಸಿಲಿಸಾಗೆ ಸ್ನೇಹಿತನೊಬ್ಬ ದೊರಕುತ್ತಾನೆ. ಪಕ್ಷವನ್ನು ಸುಧಾರಿಸಬೇಕೆನ್ನುವ ಆಕೆಯ ಮನೋಭಾವವನ್ನೇ ಹೊಂದಿದವನು. ಹೀಗೆ ವ್ಯಾಸಿಲಿಸಾ ಹೊರಗಿನ ಪ್ರಪಂಚದ ಸಂಪರ್ಕ ಹೊಂದುತ್ತಾಳೆ. ಮನೆಯಲ್ಲಿನ ಒಬ್ಬ ಮುದಿ ರೈತ ಮಹಿಳೆಯೊಂದಿಗೆ ವಿಚಿತ್ರ ಸಂಬಂಧ ರೂಢಿಸಿಕೊಳ್ಳುತ್ತಾಳೆ. ಹೀಗೆ ಕೊಲಾಂಟೆ ವ್ಯಾಸಿಲಿಸಾಳ ಅಸ್ತಿತ್ವವನ್ನು ವ್ಲಾಡಿಮೀರ್‌ನ ಪ್ರಪಂಚದಿಂದ ಆಚೆಗೆ ನಿರೂಪಿಸುತ್ತಾಳೆ. ಇದು ವ್ಯಾಸಿಲಿಸಾಳ ವಿಮೋಚನೆಯನ್ನೂ ಹಾಗೂ ಸಮಾಜವನ್ನು ಆಕೆಯೇ ಅರ್ಥಮಾಡಿಕೊಳ್ಳಲು ಆಕೆಗಿರುವ ಸಾಮರ್ಥ್ಯವನ್ನೂ ನಿರೂಪಿಸುತ್ತದೆ.

'ತ್ರಿ ಜನರೇಶನ್ಸ್'- ವ್ಯಾಸಿಲಿಸಾ ಅನುಭವಿಸುವ ಸಮಸ್ಯೆಗಳಿಗೆ ಒಂದು ಚಾರಿತ್ರಿಕ ದೃಷ್ಟಿಕೋನ ನೀಡುತ್ತದೆ. ಮೂರು ತಲೆಮಾರಿನ ಹೆಂಗಸರ ನಡತೆ, ದೃಷ್ಟಿಕೋನ, ನಿರೀಕ್ಷಣೆಗಳಲ್ಲಿ ವ್ಯತ್ಯಾಸವಿದ್ದರೂ ಕೊಲಾಂಟೆ ಆಕೆಯ ಸೂಕ್ಷ್ಮ ಗ್ರಹಿಕೆಯಿಂದಾಗಿ ಅಜ್ಜಿ, ತಾಯಿ ಹಾಗೂ ಮಗಳ ಮಧ್ಯೆ ಎಷ್ಟೊಂದು ಸಮಾನ ಅಂಶಗಳಿವೆ ಎಂಬುದನ್ನೂ ಗುರುತಿಸುತ್ತಾಳೆ. ಓಲ್ಗಾ ಸರಗೀವ್‌ನಾ ತನ್ನ ತಾಯಿಯಿಂದ ಹಳೆಯ ಪಾಪ್ಯುಲಿಸ್ಟರ ಸ್ವಾಯತ್ತತೆಯ ಹೋರಾಟದ ಜೊತೆಗೆ ಪ್ರೀತಿಯಲ್ಲಿ ಹಾಗೂ ಮದುವೆಯಲ್ಲಿ ಇರಬೇಕಾದ ಜವಾಬ್ದಾರಿಯ ವಿಚಾರಗಳನ್ನೂ ಕಲಿಯುತ್ತಾಳೆ. ಆಕೆ 1905ರ ಕ್ರಾಂತಿಯ ಮೊದಲು ಬೋಲ್‌ಶವಿಕ್ಸ್ ಪಕ್ಷ ಸೇರಲು ಆಕೆಯು ತಾಯಿಯಿಂದ ಕಲಿತ ಅನೇಕ ವಿಚಾರಗಳನ್ನು ಮುರಿಯುತ್ತಾಳೆ. ಆದರೆ ಆಕೆಯು ಸೇರಿದ ಪಕ್ಷದ ರಾಜಕೀಯ ಕೆಲಸ ಆಕೆಯ ಮೇಲೆ ಅನಿವಾರ್ಯವಾಗಿ ಒತ್ತಡಗಳನ್ನು ಹಾಕುತ್ತದೆ. ಇದರಿಂದಾಗಿ ಪುರುಷರೊಂದಿಗಿನ ಆಕೆಯ ಸಂಪರ್ಕ ಹಾಳಾಗುವುದಲ್ಲದೇ ಆಕೆಯ ಮಗಳು ಜೆನ್ಯಾ ಜೊತೆಗಿನ ಸಂಬಂಧ ಕೂಡಾ ಕುಂಠಿತವಾಗುತ್ತದೆ. ಆಕೆಯ ಮಗಳು ಜೆನ್ಯಾಳನ್ನು ಆಕೆಯ ಅಜ್ಜಿಯೇ ಬೆಳೆಸುತ್ತಾರೆ. ಕ್ರಾಂತಿಯ ನಂತರವಷ್ಟೇ ಓಲ್ಗಾಸರ್‌ಗೀವನಾ ಮಗಳು 21 ವರ್ಷವಾದಾಗ ಆಕೆಯ ಜೊತೆಗೆ ತನ್ನ ಮಧುರ ಬಾಂಧವ್ಯ ಸ್ಥಾಪಿಸಲು ಪ್ರಯತ್ನಿಸುತ್ತಾಳೆ. ಆದರೆ ಓಲ್ಗಾ ಸರ್‌ಗೀವ್‌ನಾಳು ಪಡೆದುಕೊಂಡಿದ್ದ ಆಕೆಯ ಭರವಸೆ ಆಕೆಯ ಮಗಳ ಬದುಕನ್ನು ಕಂಡಾಗ ನುಚ್ಚು ನೂರಾಗುತ್ತದೆ. ಜೆನ್ಯಾ ಆಕೆಯ ಗಂಡನೊಡನೆ ಮಾತ್ರವಲ್ಲ, ಇತರ ಅನೇಕ ಪುರುಷರೊಂದಿಗೆ ಸಹ ಸಂಬಂಧವಿಟ್ಟು ಕೊಂಡಿರುತ್ತಾಳೆ. ಆಕೆಯ ಲೈಂಗಿಕ ಸಂತೋಷ ಆಕೆಯ ಪಕ್ಷದ ಕೆಲಸಕ್ಕೆ ಯಾವುದೇ ರೀತಿಯ ಅಡ್ಡಿ ತರುವುದಿಲ್ಲ ಎಂದೂ ಕೂಡಾ ಆಕೆ ಹೇಳುತ್ತಾಳೆ. ಇದು ಸರ್‌ಗೀವನಾಳಲ್ಲಿ ಒಂದು ರೀತಿಯ ಆತಂಕ ಹುಟ್ಟಿಸುತ್ತದೆ.

ಜೆನ್ಯಾಳ ಯೌವ್ವನದ ಸ್ವಾತಂತ್ರ್ಯ, ಆಕೆಯ ಲೈಂಗಿಕ ಸ್ವಾತಂತ್ರ್ಯ ನಿಜವಾದ ಲೈಂಗಿಕ ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತದೆಯೇ ಎಂಬುದನ್ನಾಗಲೀ, ಕ್ರಾಂತಿಯ ನಂತರದ ಅರಾಜಕತೆ ದೀರ್ಘ ಕಾಲದ ಸಂಬಂಧವನ್ನು ಇಟ್ಟುಕೊಳ್ಳಲು ಅಸಾಧ್ಯವಾದ ಜನಾಂಗವನ್ನು ಹುಟ್ಟು ಹಾಕಿದೆಯೇ ಎಂಬುದನ್ನಾಗಲೀ ಅಥವಾ ಓಲ್ಗಾ ಸರ್‌ಗೀವನಾ ಸಮಾಜವಾದಿ ದೃಷ್ಟಿಕೋನ ಸಮಾಜದ ವಿಮೋಚನೆಗಾಗಿ ಬರೆದ ಕಾರ್ಯಕ್ರಮಗಳಿಗಿಂತ ಬೇರೆ ಭಿನ್ನವಾದ ಲೈಂಗಿಕ ಸ್ವಾತಂತ್ರ್ಯದ ಪ್ರಶ್ನೆಗಳನ್ನು ಹೊಂದಿದ್ದಾಳೆಯೇ ಎಂಬುದನ್ನಾಗಲೀ ಕೊಲಾಂಟೆ ತನಗೆ ಗೊತ್ತಿದೆ ಎಂಬ ರೀತಿಯಲ್ಲಿ ಚಿತ್ರಿಸುವುದಿಲ್ಲ.ಇವು ಪ್ರಶ್ನೆಗಳಾಗಿ ಓದುಗರ ತೀರ್ಮಾನಕ್ಕೆ ಬಿಡಲಾಗಿದೆ.

'ಸಿಸ್ಟರ್ಸ್' ಕಥೆಯಲ್ಲಿ ನಿರೂಪಕಿ ವ್ಯಾಸಿಲಿನ ಮಾಲಿಜಿನಾ ಮೇಲೆ ಹೇಳಿದ ಸಮಸ್ಯೆಗಳನ್ನೇ ಪ್ರತಿಬಿಂಬಿಸುತ್ತಾಳೆ. ಈಕೆಯ ಗಂಡ ಅನುಭವಿಸುವ ಲೈಂಗಿಕ ಸ್ವಚ್ಛಂಧದ ಚಿತ್ರಣ ಅವರ ಮಗು ಸತ್ತಾಗ ಬೆಳಕಿಗೆ ಬರುತ್ತದೆ. ಇದಾದ ನಂತರ ಆಕೆ ತನ್ನ ಕೆಲಸ ಕಳೆದುಕೊಳ್ಳುತ್ತಾಳೆ. ಈಗ ಆಕೆಯ ಬದುಕು ಕುಡಿದು ಬರುವ ಗಂಡನ ಬರುವಿಕೆಗಾಗಿ ಕಾಯುತ್ತಾ ಕೂರುವುದಾಗಿರುತ್ತದೆ. ಆತನಿಗೆ ತನ್ನ ಕರುಣಾಜನಕ ಕಥೆ ಹೇಳುವುದೋ, ಅಥವಾ ಅವನ ಪ್ರೀತಿಯಲ್ಲಿ ಸ್ವಲ್ಪ ಸಮಾಧಾನ ಕಾಣುವ ವ್ಯರ್ಥ ಪ್ರಯತ್ನವಾಗಿರುತ್ತದೆ.

ಆತ ಸೂಳೆಯೋರ್ವಳನ್ನು ಮನೆಗೆ ಕರೆದು ತಂದಾಗ ಆ ನಿರೂಪಕಿಗೆ ಹೀಗೆ ಪ್ರತಿಕ್ರಯಿಸುವುದೆಂಬುದು ತಿಳಿಯದೇ ಲಕ್ವ ಹೊಡೆದ ಹಾಗೆ ಆಗುತ್ತದೆ. ಆದರೆ ಆ ಹೆಂಗಸಿನೊಡನೆ ಮಾತನಾಡಲು ಸಾಧ್ಯವಾದಾಗ ತಮ್ಮಿಬ್ಬರ ಜೀವನದಲ್ಲಿ ಎಷ್ಟೊಂದು ಸಮಾನ ಅಂಶಗಳಿವೆ ಎಂಬುದು ಆಕೆಗೆ ಅರ್ಥವಾಗುತ್ತದೆ. ತನ್ನ ಗಂಡನನ್ನು ಬಿಟ್ಟು ಹೊರನಡೆದರೆ ತನ್ನ ಜೀವನ ಕೂಡಾ ಆ ಹೆಂಗಸಿನ ಹಾಗೇ ಇರುತ್ತದೆ ಎಂಬುದೂ ಕೂಡಾ ಆಕೆಗೆ ಅರ್ಥವಾಗುತ್ತದೆ. ಒಂದಷ್ಟು ಹೊಸತನ, ಬೇಸರ ಕಳೆಯಲು ಗಂಡಸರು ಸೂಳೆಯರೊಡನೆ ಓಡಾಡುವ ಸ್ವಾತಂತ್ರ್ಯ - ಈ ರೀತಿಯಲ್ಲಿ ಈ ನಿರೂಪಕಿ ಸ್ವಾತಂತ್ರ್ಯ ಬಯಸಿ ಹೊರ ಹೋದದ್ದಲ್ಲ. ತನ್ನ ಅಸ್ತಿತ್ವದ ಪ್ರಶ್ನೆಯಲ್ಲಿ ಹೊರ ನಡೆಯುತ್ತಾಳೆ. ಕ್ರಾಂತಿ - ಪುರುಷರಿಗೆ ತಮ್ಮ ಶ್ರಮವನ್ನು ದುಬಾರಿಗೆ ಮಾರಲು, ತನ್ನ ಹೆಂಡತಿಯ ಮೇಲೆ ಅಧಿಕಾರ ಚಲಾಯಿಸುವ ದ್ವಂದ್ವಾತ್ಮಕ ಸ್ವಾತಂತ್ರ್ಯ ನೀಡಿದೆ. ಆದರೆ ಈ ನಿರೂಪಕಿಗೆ ಹೊರಗೆ ನಡೆಯುವ ಸ್ವಾತಂತ್ರ್ಯ ಪ್ರಾಮಾಣಿಕವಾದದ್ದು ಹಾಗೂ ಆಶಾದಾಯಕ-ವಾದದ್ದಾಗಿ ಕಾಣುತ್ತದೆ.

ಕುಟುಂಬದ ಬದಲಾವಣೆ, ಕೆಲಸ ಹಾಗೂ ಭಾವನೆಗಳ ಮದ್ಯದ ಘರ್ಷಣೆಗಳ ಬಗೆಗಿನ ಅಲೆಕ್ಸಾಂಡರ್ ಕೊಲಾಂಟೆಯ ಬರಹಗಳು ಅತ್ಯದ್ಭುತವಾದ ಸ್ಫೂರ್ತಿಯನ್ನು ನೀಡಬಲ್ಲಂತ-ಹುವು. ಹಾಗೂ ಇಂದಿನ ಮಹಿಳೆಯರಿಗೆ ಚಾರಿತ್ರಿಕ ಮೌಲ್ಯ ಹೊಂದಿರುವಂತಹವು. ಈಕೆಯ ಬರಹಗಳಲ್ಲಿ ರಷ್ಯಾದ ಮಹಿಳೆಯರ ವಿಮೋಚನೆಗೆ ಇದ್ದ ರಾಜಕೀಯ ಬೇಡಿಕೆಗಳ ಜೊತೆಗೆ, ಸಮತಾವಾದದಲ್ಲಿ ಇರಬೇಕಾದ ಮಾನಸಿಕ ರಚನೆಯ ಮೂಲಭೂತ ಬದಲಾವಣೆಯ ದೃಷ್ಟಿಕೋನಗಳೂ ಪ್ರತಿಬಿಂಬಿತವಾಗಿವೆ.

ಈ ರೀತಿಯ ತುಮುಲಗಳು ಜೀವನಪೂರ್ತಿ 'ಸಿನ್‌ಥಿಸಿಸ್' ಗಾಗಿ ಹುಡುಕಾಡುವಂತೆ ಕೊಲಾಂಟೆಗೆ ಸ್ಫೂರ್ತಿಯನ್ನು ನೀಡಿತ್ತು. ಆಕೆಯ ಕನಸಿನ ಭವಿಷ್ಯದಲ್ಲಿ ಕಲೆಕ್ಟೀವ್ ಕುಟುಂಬಕ್ಕೆ ಪ್ರಾಮುಖ್ಯತೆ ಇದೆಯೇ ಹೊರತು ನಶಿಸಿ ಹೋಗುತ್ತಿರುವ ನ್ಯೂಕ್ಲಿಯರ್ ಕುಟುಂಬಕ್ಕೆ ಅಲ್ಲ. ಇಲ್ಲಿ ಮದುವೆಯಂತಹ ಬಂಧನದಿಂದ ಪುರುಷರು ಹಾಗೂ ಮಹಿಳೆಯರು ಮುಕ್ತರಾಗಿರುತ್ತಾರೆ. ಅವರು ಸ್ವತಂತ್ರ್ಯವಾಗಿ ಪರಸ್ಪರ ಆಕರ್ಷಣೆ, ಪ್ರೀತಿ, ಭಾವನೆಗಳಿಂದ ಹತ್ತಿರವಾಗಿರುತ್ತಾರೆ.

ಶತಮಾನಗಳಿಂದ ತಮ್ಮ ಪಾತ್ರಗಳಿಗೇ ಹೆಣೆದುಕೊಂಡ ಫ್ಯೂಡಲ್ ರಷ್ಯಾದ ಮಹಿಳೆಯರ ಬಂಧನಗಳನ್ನು ಸಾಮಾಜಿಕ ಕ್ರಾಂತಿ ಇದ್ದಕ್ಕಿದ್ದ ಹಾಗೆ ಬದಲಿಸುವುದೇನು ಸಾಧ್ಯವಿರಲಿಲ್ಲ. ಕೊಲಾಂಟೆಯ ಪ್ರಕಾರ ಮಹಿಳೆಯರು ಮನೆಯಲ್ಲಿ ಹಾಗೂ ದುಡಿಯುವ ಸ್ಥಳದಲ್ಲಿ ಎದುರಿಸುವ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಕ್ರಾಂತಿಯ ಪ್ರೋತ್ಸಾಹ ನೀಡಿದೆ. ಕೊಲಾಂಟೆ ಆಕೆಯ ಬದುಕಿನುದ್ದಕ್ಕೂ ಮೂರು ಕ್ರಾಂತಿಗಳ ಅನುಭವಗಳ ಹಿನ್ನಲೆಯಲ್ಲಿ ಕುಟುಂಬ ಹಳೆಯ ಸಂಸ್ಕೃತಿಗೆ ಅಂಟಿಕೊಳ್ಳುವುದನ್ನು, ಕ್ರಾಂತಿಯ ಗೊಂದಲ, ಸವಾಲುಗಳ ವಿರುದ್ಧ ಕೋಟೆ ಕಟ್ಟಿಕೊಳ್ಳುವುದನ್ನು ಗಮನಿಸಿದ್ದಾಳೆ. ಕ್ರಾಂತಿಯ ಸ್ಥಳದಲ್ಲಿ ಬರ, ಆಂತರಿಕ ಯುದ್ಧಗಳು 20 ನೆಯ ಶತಮಾನದಲ್ಲಿ ಪ್ರಾರಂಭವಾದದ್ದನ್ನೂ ಈಕೆ ಕಂಡಿದ್ದಾಳೆ.

ಇಂದು ಮುಂದುವರೆದ ತಾಂತ್ರಿಕತೆ ನಮಗೆ ಸಾಕಷ್ಟು ಸಾಧ್ಯತೆಗಳನ್ನು ಒದಗಿಸಿದೆ. ಮಕ್ಕಳು ಬೇಕೋ, ಬೇಡವೋ, ನಮಗೆ ಯಾವ ರೀತಿಯ ಕೆಲಸಬೇಕು ? ನಾವು ಯಾರ ಯಾರ ಜೊತೆ ಬೆರೆಯಬೇಕು ? ಯಾರನ್ನು ಪ್ರೀತಿಸಬೇಕು ? ಈ ರೀತಿಯ ಅನೇಕ ಸಾಧ್ಯತೆಗಳು ಇದ್ದಾಗ್ಯೂ ಆಕೆ ನುಡಿದ, ಕಂಡ ಅನೇಕ ಸತ್ಯಗಳು ಇಂದಿಗೂ ನಮಗೆ ಪ್ರಸ್ತುತವಾಗಿವೆ. ಶತಮಾನಗಳಿಂದ ಶೋಷಿತವಾದ ಮಹಿಳೆಯರು ಲೆಕ್ಕವಿಲ್ಲದಷ್ಟು ರೀತಿಯಲ್ಲಿ ಬಂಧಿಸಲ್ಪಟ್ಟಿದ್ದಾರೆ. ಅವರಿಗೆ ಕೊಲಾಂಟೆಯ ಬರಹಗಳು ಪ್ರಸ್ತುತವೆನಿಸುತ್ತವೆ.

ಕುಟುಂಬದ ಬದುಕಿನ ಸಂಕೀರ್ಣತೆಯಲ್ಲಿ ಮಹಿಳೆಯರು ತಮ್ಮನ್ನು ಮರುಶೋಧನೆ ನಡೆಸುವ ಹಂತದಲ್ಲಿ ನಾವು ಎಷ್ಟು ಸಮಾನ ಅಂಶ ಹೊಂದಿದ್ದೇವೆ. ಎಲ್ಲಿ ಬೇರೆ, ಬೇರೆಯಾಗಿದ್ದೇವೆ, ಎಂಬುದನ್ನು ಕಲಿಯಬೇಕಿದೆ. ನಾವು ಬಂಧಿತರಾಗಿರುವ ಬಗ್ಗೆ ಕಲಿಯಬೇಕಿದೆ. ಆಕೆಯ ಕಥೆ, ಕಾದಂಬರಿಗಳು ನಾವು ಭಾವಿಸುವ ಅಗತ್ಯಗಳನ್ನೂ, ಹಾಗೂ ನಮಗಿರುವ ಸಾಧ್ಯತೆಗಳನ್ನೂ ಪ್ರತಿಬಿಂಬಿಸುತ್ತವೆ. ಮಹಿಳಾ ಪಾತ್ರಗಳಿಂದ ತುಂಬಿದ ಕೊಲಾಂಟೆಯ ಬರಹ ಒಂದು ಉತ್ತಮ ಜಗತ್ತನ್ನು ಕಟ್ಟಿಕೊಡುತ್ತದೆ. ಪ್ರಪಂಚವನ್ನು ಉತ್ತಮವಾಗಿ ಕಟ್ಟುವ ಹಂತದಲ್ಲಿ ಈ ಮಹಿಳಾ ಪಾತ್ರಗಳೂ ತೊಡಗಿರುವುದನ್ನು ನಾವು ಕಾಣುತ್ತೇವೆ.

From
Love of worker Bees
Alexandra Kollantai
Introduction by Cathy Porter

ಹೀಗೊಂದು ಆಟ

ಪ್ರಶಾಂತ ಕಡಲ ಒಡಲು
ಒಳಗೆ ಸಳಸಳ ಹರಿವ ಮೀನು
ಹೊರಗೆ ಬೆಸ್ತ ಬಸವಳಿದಿದ್ದಾನೆ
ನಾಜೂಕಿನ ಬಲೆಯ ಹಿಡಿದು.

ಹರಿವ ನೀರಿನ ಬರಿಯ ಸೆಳೆತವಿದಲ್ಲ
ಎಲ್ಲ ನಾಜೂಕು ನಡವಳಿಕೆಗಳ
ಮುರಿವ ಹವಣಿಕೆ ಒಳಗೊಳಗೇ
ಸಾಗುತಿದೆ, 'ಸರಿಯೋ ತಪ್ಪೋ'
ಜಿಜ್ಞಾಸೆ ಇರಲಿ ತನ್ನ ಪಾಡಿಗೆ ತಾನು.

ಕಟ್ಟು ಪಾಡೊಳಗೇ ಕದಲುತ್ತಿವೆ ಎಲ್ಲ
ರೀತಿ ರಿವಾಜುಗಳು, ತಳದಲ್ಲಿನ ಬೇರ
ಸಡಿಲಗೊಳಿಸುತ್ತಾ ಹೊರಗೆ ಕಾಣಿಸಿಕೊಳ್ಳದಂತೆ
ಎಷ್ಟೊಂದು ವಿಸ್ಮಯದ ಜಗತ್ತು ಇದು ?
ಕೊಲುವ ಬೆಸ್ತ, ಸಾವ ಮೀನನ್ನು ಬಯಸುವುದೇ
ಪುಳಕ, ಹರಿದಾಟದ ಆ ಮೀನ
ಕಣ್ಣಲ್ಲಿರಿಸುವುದುಂಟೇ ?

ಬೆಸ್ತನೆಂದರೆ ಗಾಳ,
ಗಾಳವೆಂದರೆ ಬಂಧನ, ತಪ್ಪದ ಸಾವು
ಬಲೆಯೊಂದಿಗೆ ಬರುವ ಬೆಸ್ತನ
ಕನಸು ಮೀನೊಳಗೆ ಮೂಡಿ
ಮೈಯಲ್ಲೆಲ್ಲಾ ಪುಲಕ
ಬೀಸುವ ಬಲೆಯೆಂಬ ಆ ಬಲೆ
ಕಾಡುತ್ತಿದೆ, ಬಲೆಯ ಸಂಗ ಪ್ರಿಯವಾಗುತ್ತಿದೆ.

ಬಲೆಯಿಂದ ಬಲೆಗೆ, ಇನ್ನೊಂದಕ್ಕೆ
ಇನ್ನೊಂದರಿಂದ ಮತ್ತೊಂದಕ್ಕೆ ಹೀಗೇ
ಯಾವುದೋ ಅರಿಯದ ತವಕ
ಬಂದನಕ್ಕೆ ಕಾಯುತ್ತಾ ಆ ಪುಟ್ಟ ಮೀನು
ಹಾತೊರೆದು ಹರಿಯುತ್ತಿದೆ
ಮನಬಂದಂತೆ ಮೇಲೆ ಕೆಳಗೆ.
ದಡದಲ್ಲಿನ ಬೆಸ್ತ, ನೀರೊಳಗಿನ ಮೀನು
ಯಾರ ಕಣ್ಣಲ್ಲಿ ಯಾರ ಬೇಟೆ ?
ಲೆಕ್ಕವಿಲ್ಲದಷ್ಟು ಹೊಳೆವ, ನಾನಾ ವರ್ಣದ
ಮೀನನ್ನು ಹಿಡಿದ ಬಲೆಗೆ
ಸಿಗದ ಈ ಹಿಡಿ ಮೀನಿನದೇ ಧ್ಯಾನ.

ಸಿಗದ ಈ ಮೀನು ಸವಾಲಾಗಿದೆ
ಕುಲಕಸುಬನ್ನೇ ಅಣಕಿಸುತ್ತಿದೆ
ಹಿಡಿಗಾತ್ರದ ಆ ಮೀನಿನ ಎದೆಯಲ್ಲಿ
ಆಸೆ, ಭಯ ಚೆಲ್ಲಾಟವಾಡುತ್ತಿವೆ
ಕೊಂಡೊಯ್ದರೇನಂತೆ ಆ ಬಲೆಯಲ್ಲಿ ತನ್ನನ್ನು
ಲೋಕದ ರೀತಿ ನೀತಿ ತಾ ಮೀರಬಹುದೇ ?

ಮೀನಿನ ಸುತ್ತ ಬೆಸ್ತ,
ಬೆಸ್ತನ ಸುತ್ತ ಮೀನು
ಯಾರನ್ನು ಯಾರು ಬೇಟೆಯಾಡುತ್ತಾರೋ ?
ಆಟವಂತೂ ಸಾಗುತ್ತಲೇ ಇದೆ
ಬೆಸ್ತ ಮೀನನ್ನು ಬಯಸಿ
ಮೀನು ಬೆಸ್ತನನ್ನು ಬಯಸಿ

ಎಚ್.ಎಲ್. ಪುಷ್ಪ

ತಿದ್ದು ಪಡಿ

'ಮಾನಸ' ಪತ್ರಿಕೆ ಜೂನ್ 2004ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಕಾಫಿ ಮಾರುವ ಹುಡುಗಿ' ಕವನ ಬರೆದವರು ಶ್ರೀ ಮಂಜುನಾಥಅದ್ದೆ. ಹಾಗೂ ಇದೇ ಸಂಚಿಕೆಯ ಮುಖ ಪುಟದ ಕಲೆ ಮತ್ತು ವಿನ್ಯಾಸಕಾರರು ಶ್ರೀ ಸುರೇಶ ಹಾಗೂ ಶ್ರೀಮತಿ ಸುನೀತಾ. ಹೆಸರುಗಳ ಪ್ರಕಟನೆ ತಪ್ಪಿ ಹೋಗಿರುವುದನ್ನು 'ಮಾನಸ' ಪತ್ರಿಕೆಯು ಸಂಪಾದಕೀಯ ಮಂಡಳಿ ವಿಷಾದಿಸುತ್ತದೆ.

ಕೃತಿ ಪರಿಚಯ

ಯಶೋಧರಾ - ಮೈಥಿಲೀ ಶರಣಗೌಡ ಗುಪ್ತ, ಅನುವಾದ : ಶಶಿಕಲಾ ಸುಬ್ಬಣ್ಣ

ಮೈಥಿಲಿಶರಣಗುಪ್ತರು ಹತ್ತೊಂಬತ್ತನೇ ಶತಮಾನದ ಹಿಂದಿ ಸಾಹಿತ್ಯದಲ್ಲಿ ಶ್ರೇಷ್ಠ ಕವಿ ಎಂದು ಹೆಸರಾದವರು. 'ಸಾಕೇತ್' ಮತ್ತು 'ಯಶೋಧರಾ' ಎಂಬ ಹಿಂದಿ ಕೃತಿಗಳು ಪ್ರಮುಖವಾದದ್ದು. ಈ ಎರಡು ಕೃತಿಗಳಲ್ಲಿ ಸಾಹಿತ್ಯದಲ್ಲಿ 'ಮೌನಪಾತ್ರ' ಗಳೆಂದು ಹೆಸರಾದ ಲಕ್ಷ್ಮಣನ ಪತ್ನಿ ಊರ್ಮಿಳೆ ಹಾಗೂ ಸಿದ್ಧಾರ್ಥನ ಪತ್ನಿ ಯಶೋಧರೆಯನ್ನು ಕುರಿತ ವಸ್ತುವನ್ನೊಳಗೊಂಡಿದೆ.

ರಾಷ್ಟ್ರಕವಿ ರವೀಂದ್ರನಾಥ ಠಾಕೂರರ 'ಮಹಾಕಾವ್ಯಗಳಲ್ಲಿ ಸ್ತ್ರೀ ಪಾತ್ರಗಳ ಅನಾದರ' ಎಂಬ ಲೇಖನ ಪ್ರಕಟಗೊಂಡನಂತರ ಭಾರತೀಯ ಸಾಹಿತ್ಯವನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆ ಕಂಡು ಬಂದಿತು. ಭಾರತೀಯ ಸಾಹಿತ್ಯದಲ್ಲಿ ಕತ್ತಲೆಗೆ ನೂಕಲ್ಪಟ್ಟ ಹಲವಾರು ಪಾತ್ರಗಳು ಬೆಳಕು ಕಂಡವು. ಕನ್ನಡ ಸಾಹಿತ್ಯದಲ್ಲಿಯೂ ಇಂತಹ ಬದಲಾವಣೆಗಳನ್ನು ಕಾಣಬಹುದು.

ನವೋದಯ ಕಾಲದ ಕವಿಗಳಲ್ಲಿ ಈ ಮನೋಧರ್ಮವನ್ನು ಗುರುತಿಸಬಹುದು. ಕುವೆಂಪು, ಮಾಸ್ತಿ, ಪು.ತಿ.ನ. ಮುಂತಾದವರ ಕೃತಿಗಳಲ್ಲಿ ಹಲವಾರು ಅನಾದರಗೊಂಡ ಪಾತ್ರಗಳಿಗೆ ಮತ್ತೆ 'ಜೀವ' ತುಂಬಿರವುದನ್ನು ಕಾಣಬಹುದು. ಊರ್ಮಿಳೆ, ಮಂಥರೆ, ಕೈಕೇಯಿ, ಯಶೋಧರಾ ಮುಂತಾದ ಸ್ತ್ರೀ ಪಾತ್ರಗಳನ್ನು ವಿಶೇಷವಾಗಿ ಗುರುತಿಸಬಹುದು.

ಮಾಸ್ತಿಯವರು 'ಯಶೋಧರಾ' ಎಂಬ ಹೆಸರಿನಲ್ಲೇ ನಾಟಕವನ್ನು ರಚಿಸಿದ್ದಾರೆ. ಸಿದ್ಧಾರ್ಥ ಜೀವನದ ಶೋಧನೆಗೆ ಸಂಸಾರ ಬಿಟ್ಟು, ಹೊರಟು ಹೋದಾಗ ಯಶೋಧರೆಯ ಅಂತರಂಗದ ಒಳತೋಟಿಯನ್ನು ಮನೋಜ್ಞವಾಗಿ ಅಭಿವ್ಯಕ್ತಿ ಪಡಿಸಿದ್ದಾರೆ.

ಇದೇ ವಸ್ತುವನ್ನೊಳಗೊಂಡ ಹಿಂದಿಸಾಹಿತ್ಯದ ಶ್ರೇಷ್ಠಕವಿ ಮೈಥಿಲಿಶರಣಗುಪ್ತರ 'ಯಶೋಧರಾ' ಎಂಬ ಕೃತಿಯನ್ನು ಶಶಿಕಲಾ ಸುಬ್ಬಣ್ಣ ಅವರು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಗದ್ಯ-ಪದ್ಯ ಮಿಶ್ರಿತವಾದ 'ಗೀತ ನಾಟಕ' ವೆನಿಸಿದೆ. ಪಾತ್ರಗಳ ಹೆಸರಿನಲ್ಲಿ ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ ಸಿದ್ಧಾರ್ಥ, ಯಶೋಧರಾ, ಶುದ್ಧೋಧನ, ಛಂದಕ, ರಾಹುಲ ಜನನಿ-ಹೀಗೆ ಶೀರ್ಷಿಕೆಗಳಿವೆ. ಪಾತ್ರಗಳು ಘಟನೆಗಳನ್ನು ಬೆಳೆಸುತ್ತಾ ಹೋಗುತ್ತವೆ. ನಾಟಕೀಯಾಂಶ, ಕಾವ್ಯಾಂಶಗಳೂ ಸೇರಿ ಕೃತಿಯ ವಿಶೇಷತೆಯನ್ನು ಹೆಚ್ಚಿಸಿದೆ. ಜೀವನದ ತಾತ್ವಿಕಸಿದ್ಧಿಯನ್ನು ಹೊಂದುವುದರಲ್ಲಿ ಬುದ್ಧನಂತೆ; ಯಶೋಧರೆಯೂ ಸಫಲಳಾಗುವುದನ್ನು ನಾಟಕ ದೃಶ್ಯೀಕರಿಸುತ್ತದೆ.

ಹಿಂದಿ ಸಾಹಿತ್ಯದ 'ರಸ ಕಾವ್ಯ' ಗಳಲ್ಲಿ ಈ ಕೃತಿ ಮಹತ್ವದ ಕೃತಿಯೆನಿಸಿದ್ದು ಲೇಖಕಿ ಕನ್ನಡಕ್ಕೆ ಅನುವಾದಿಸುವುದರ ಮೂಲಕ ಆ ಸಾಹಿತ್ಯದ ಗೊತ್ತು-ಗುರಿಯನ್ನು ತಿಳಿಯಲು ಸಾಹಿತ್ಯ, ಸಂಸ್ಕೃತಿಯ ವಿನಿಮಯ ಮಾಡಿಕೊಳ್ಳಲು ಸಹಾಯಕರಾಗಿದ್ದಾರೆ ರವೀಂದ್ರರ 'ಗೀತಾಂಜಲಿ', ಹರಿವಂಶರಾಯ್‌ಬಚ್ಚನ್‌ರ ಸಾಹಿತ್ಯ ಹೀಗೆ ಹಲವಾರು ಹಿಂದಿ ಸಾಹಿತ್ಯದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯದಲ್ಲಿ ತೊಡಗಿರುವ ಶಶಿಕಲಾ ಅವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಬಲ್ಲರು.

ಸಿದ್ಧಾರ್ಥ 'ಬುದ್ಧ'ನಾಗಲು ಹೊರಟುಹೋದಾಗ ಅರಮನೆಯಲ್ಲಾದ ಆತಂಕ, ವಿಶೇಷವಾಗಿ ಪತ್ನಿಯಾದ ಯಶೋಧರೆಗಾದ ತಲ್ಲಣಗಳಿಗೆ ಒತ್ತು ನೀಡಲಾಗಿದೆ. ಸಿದ್ಧಾರ್ಥ ಸಿದ್ಧಿ ಪಡೆದ ಬಗೆಯನ್ನು ಈ ಕೃತಿ ವಿವರವಾಗಿ ಹೇಳದಿದ್ದರೂ ಯಶೋಧರೆ ಭೋಗ ಭಾಗ್ಯಗಳನ್ನು ತ್ಯಜಿಸಿ, ಅರಮನೆಯಲ್ಲಿಯೇ ಸನ್ಯಾಸಿನಿಯ ಬದುಕನ್ನು ಮಾಡುವ ಚಿತ್ರಣವನ್ನು ನೀಡಿದ್ದಾರೆ. ವಿರಹಿಣಿಯಾದ ಅವಳ ಮನಸ್ಸಿನ ತಲ್ಲಣದ ಸೂಕ್ಷ್ಮತೆಗಳನ್ನು ಕನ್ನಡ ಭಾಷೆಯಲ್ಲಿ ಹಿಡಿದಿದ್ದಾರೆ. ಅಂತಹ ಸಂದರ್ಭಗಳು ಭಾವಗೀತಾತ್ಮಕ ಲಕ್ಷಣಗಳನ್ನು ಒಳಗೊಂಡಿವೆ. ಮೂಲ ಕೃತಿಯ ಸ್ವಾರಸ್ಯವನ್ನು ಲೇಖಕಿ ಗುರುತಿಸಿದ್ದಾರೆ. ಓದುತ್ತಾ ಹೋದಂತೆಲ್ಲ 'ಅನುವಾದ ಕೃತಿ' ಎನ್ನಿಸದೆ 'ಸ್ವತಂತ್ರ ಕೃತಿ' ಯೇನೋ ಎಂಬ ಭಾವ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ.

ರಾಹುಲ, ಯಶೋಧರೆಯ ನಡುವಣ ಸಂವಾದ ಈ ಕೃತಿಯ ವಿಶೇಷತೆಯಾಗಿದೆ. ರಾಹುಲನ ಬುದ್ಧಿ-ಭಾವಗಳು ಬೆಳೆದಂತೆ ತಾಯಿಯನ್ನು ತಂದೆಯ ಬಗ್ಗೆ ಪ್ರಶ್ನಿಸುವ, ತಾಯಿಯ ಬಗ್ಗೆ ಅನುಕಂಪ ತೋರಿಸುವ ರೀತಿಯಲ್ಲಿ ಪಕ್ವಗೊಳ್ಳುವ ಕ್ರಿಯೆ ಕಾಣಬಹುದು. ಯಶೋಧರೆಯ ದುಃಖದ ತೀವ್ರತೆಯನ್ನು ಕಂಡಾಗ ತನ್ನ ಬಾಲಸಹಜ ಮಾತಿನಿಂದಲೇ ಯಶೋಧರೆಯ ದುಃಖವನ್ನು ಮರೆಯುವಂತೆ ಮಾಡುವ ಸನ್ನಿವೇಶಗಳು ನಾಟಕದಲ್ಲಿ ರೂಪುಪಡೆದಿವೆ, 'ಕರುಣರಸ' ಹಾಸು ಹೊಕ್ಕಾಗಿದೆ. ರಾಹುಲನ ಚುರುಕು ಮಾತುಗಳು ಸನ್ನಿವೇಶದ ಬಿಗುವನ್ನು

ಸಡಿಲಿಸಿ ಲವಲವಿಕೆಯನ್ನು ತರುತ್ತದೆ. ತನ್ನ ಒಡಲಲ್ಲಿ ಪತಿಯ ಅಗಲಿಕೆಯ ದುಃಖವನ್ನೂ ಹೊಂದಿದ್ದು ತಾಯಿಯಾಗಿ ರಾಹುಲನಲ್ಲಿ ತಂದೆಯ ಬಗ್ಗೆ, ಜೀವನದ ಬಗ್ಗೆ ಅರಿವನ್ನು ಮೂಡಿಸುವ ಯಶೋಧರೆಯು ಮಗನನ್ನು ಬೆಳೆಸುತ್ತಲೇ ತಾನೂ ಬೆಳೆಯುತ್ತಾ ಹೋಗುತ್ತಾಳೆ. ಯಶೋಧರೆಗೆ ಮನೋವೇದನೆಯಾಗಿ ಕಾಡಿದ್ದು. ತನಗೆ ತಿಳಿಸದಯೇ ಸಿದ್ಧಾರ್ಥ ಮೋಕ್ಷ ಮಾರ್ಗ ಅರಸಲು ಹೊರಟಿದ್ದು, ತಾನು ಪತಿಯ ಮಾರ್ಗಕ್ಕೆ ಅಡ್ಡ ಬರುತ್ತಿರಲಿಲ್ಲ ಬದಲು ಸಮಾಧಾನದಿಂದಲೇ ಕಳಿಸುತ್ತಿದ್ದೆ ಎಂಬ ಕಳವಳ ಅವಳದ್ದಾಗಿತ್ತು.

ಸಿದ್ಧಾರ್ಥ 'ಸಿದ್ಧಿ' ಗಾಗಿ ತಪಸ್ಸು ಮಾಡಿದಂತೆ, ಯಶೋಧರೆ ಸ್ತ್ರೀತನ ಕೋಮಲತೆಯಲ್ಲೇ ವೈರಾಗ್ಯಪರವಾಗಿ ತನ್ನ ಮಗನಿಗೆ ತನ್ನ ದುಃಖದ ಬೇಗೆ ತಟ್ಟದಂತೆ ನೋಡಿಕೊಂಡಳು. ಬುದ್ಧನಾಗಿ ಸಿದ್ಧಾರ್ಥ ಮರಳಿ ಬಂದಾಗ ಎಲ್ಲರೂ ನೋಡುವ ಕಾತುರದಲ್ಲಿದ್ದಾಗ, ಯಶೋಧರೆ ಸಂಯಮದಿಂದ ವರ್ತಿಸುವಳು, ಬುದ್ಧನೇ ಅವಳ ಬಳಿ ಆಗಮಿಸಿ ನಿನ್ನಿಂದಲೇ ನನ್ನ ತಪಸ್ಸು ನಿರ್ವಿಘ್ನವಾಗಿ ಸಿಗಲು ಕಾರಣವಾಯಿತು. ನೀನು 'ವಧೂಧರ್ಮ'ವನ್ನು ಸರಿಯಾಗಿ ಪಾಲಿಸಿದೆ, ಎಂಬಂತಹ ಸಾಂತ್ವನದ ನುಡಿಗಳನ್ನು ಹೇಳಿದಾಗ ಯಶೋಧರೆಯ ಚಿಂತೆ ದೂರವಾಯಿತು. ರಾಹುಲನನ್ನು ತಂದೆಗೆ ಒಪ್ಪಿಸುವ ಕ್ರಿಯೆಯಲ್ಲಿ ಯಶೋಧರೆ ಹಿಂದೆ ಬೀಳಲಿಲ್ಲ. 'ನನ್ನ ದುಃಖದಿಂದ ತುಂಬಿ ಕೊಂಡಿದೆ ವಿಶ್ವಸುಖ ಮತ್ತೇಕೆ ನಾ ಸಮ್ಮತಿಸದಿರಲಿ ? ಎಂದು ದೃಢಚಿತ್ತಳಗುವ ಯಶೋಧರೆಯ ವ್ಯಕ್ತಿತ್ವ ಈ ಕೃತಿಯಲ್ಲಿ ಸಮರ್ಥವಾಗಿ ಒಡಮೂಡಿದೆ.

ಶಶಿಕಲಾ, ಹಿಂದಿ ಹಾಗೂ ಕನ್ನಡ ಭಾಷೆಯ 'ಸೂಕ್ಷ್ಮತೆ' ಯನ್ನು ಚೆನ್ನಾಗಿ ಗ್ರಹಿಸಿದ್ದಾರೆ. ಆದ್ದರಿಂದಲೇ ಯಶೋಧರೆ ವ್ಯಕ್ತಿತ್ವಕ್ಕೆ 'ಜೀವಂತಿಕೆ' ಸ್ಪರ್ಶವಿದೆ, ವ್ಯಕ್ತಿತ್ವದ ಗಟ್ಟಿತನದ ಅಂಶವನ್ನು ನಾಟಕ ತೆರೆದಿಡುತ್ತದೆ.

ಪಿ.ಜಿ.ಉಷಾ

ಜಮೀಲಾ ನಿಶಾತ್

ಜಮೀಲಾ ನಿಶಾತ್ ಒಬ್ಬ ಕವಯಿತ್ರಿ, ಹೈದರಾಬಾದಿನವರು ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ.

ಮುಸ್ಲಿಂ ಕುಟುಂಬದ ಕಟ್ಟು ಪಾಡುಗಳಲ್ಲಿ ಬೆಳೆದರೂ ತಮ್ಮ ಪ್ರಗತಿಪರವಾದ ಆಲೋಚನೆಗಳಿಂದ, ಮುಕ್ತ ಮಾತುಗಳಿಂದ ತಮ್ಮ ಜನಾಂಗದವರೊಂದಿಗೆ ಗೆಳೆತನ, ದೇವಾಸ್ಥಾನಕ್ಕೆ ಹೋಗುವ, ದರ್ಗಾದ ಹಬ್ಬಗಳಲ್ಲಿ ನಲಿಯುವಂತಹ ಪರಿಸರದಲ್ಲಿ ಬೆಳೆದ ಜಮೀಲಾರಿಗೆ ಹೈದರಾಬಾದ್‌ನ ಹಿಂದೂ ಮುಸ್ಲಿಂ ನಡುವೆ ಈಗಿರುವ ದ್ವೇಷ ಮತ್ತು ಶತ್ರುತ್ವವನ್ನು ಅರಗಿಸಿಕೊಳ್ಳುವುದು ಕಷ್ಟವಾಗುತ್ತಿದೆ.

ಒಬ್ಬ ಕಲಾವಿದೆಯಾಗಿ ಕೋಮುಗಲಭೆಗಳ ವಾತಾವರಣವನ್ನು ತಿಳಿಗೊಳಿಸುವುದು, ಮುಸ್ಲಿಂ ಹುಡುಗಿಯರಲ್ಲಿ ಅರಿವು ಮೂಡಿಸುವ, ಆತ್ಮವಿಶ್ವಾಸ ಹುಟ್ಟಿಸುವಂತಹ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಮುಸ್ಲಿಂ ಮಹಿಳೆಯರು ತಮ್ಮ ಸಮಸ್ಯೆಗಳ ಬಗ್ಗೆ ಮಾತಾನಾಡುವಂತೆ, ಅವರ ನೋವುಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ನಿರ್ಮಿಸುವಂತಹ ಕಾರ್ಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಜಮೀಲಾ ವಿಶಾತ್ ಉದುರವಿನಲ್ಲಿ ಕವಿತೆ, ಗಜಲ್‌ಗಳನ್ನು ರಚಿಸಿದ್ದಾರೆ. ಅವರ ಕವಿತೆಗಳಲ್ಲಿ ನೋವಿನ ಸ್ಪರ್ಶವಿರುವುದನ್ನು ಕಾಣಬಹುದು. ಹೈದರಾಬಾದಿನ ಆಡು ಭಾಷೆಯಾದ ದಕ್ಕನಿಯಲ್ಲಿ ಹಲವಾರು ನಾಟಕಗಳನ್ನು ಬರೆದು, ನಿರ್ದೇಶಿಸಿದ್ದಾರೆ. ಅಪರಿಚಿತ ಕನಸುಗಳ ಈ ಕನಸುಗಾರ್ತಿಯ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳೋಣ.

ಜಮೀಲಾ ನಿಶಾತ್‌ರ ತಂದೆ ವರ್ಣ ಚಿತ್ರಕಾರರಾಗಿದ್ದರು. ಮುಸ್ಲಿಂರಲ್ಲಿ ಚಿತ್ರಕಲೆಗೆ ಅನುಮತಿ ಇರಲಿಲ್ಲ. ಮನೆಗಳಲ್ಲಿ ವರ್ಣ ಚಿತ್ರ ಇಡುವುದು ಪಾಪವಾಗಿತ್ತು. ಇಂಥ ಪರಿಸರದಲ್ಲಿ ಬೆಳೆದ ಅವರ ತಂದೆ ತಮ್ಮ ಬಾಲ್ಯದಲ್ಲಿ ಶೌಚಾಲಯದ ಗೋಡೆಗಳ ಮೇಲೆ ಚಿತ್ರ ಬಿಡಿಸುತ್ತಿದ್ದರು. ದೊಡ್ಡವರಾದಂತೆ ಅವರು ದಾರಿಯಲ್ಲಿನ ಕಾಗದಗಳನ್ನು ಹೆಕ್ಕಿ ಅದರಲ್ಲಿ ಚಿತ್ರ ಬಿಡಿಸುತ್ತಿದ್ದರು. ತೀರ ಬಡತನದಲ್ಲಿ ಬೆಳೆದ ಈ ಪ್ರತಿಭಾನ್ವಿತ ಹುಡುಗನನ್ನು ಕಂಡ ನವಾಬರೊಬ್ಬರು ಬೆಂಬಲ ನೀಡಿ ವಿದ್ಯಾಭ್ಯಾಸ ಕೊಡಿಸದರು. ಕಲಾ ಶಾಲೆಯ ಕಾಲೇಜಿಗೆ ಸೇರಿ ಐದು ವರ್ಷದ ಡಿಪ್ಲೊಮವನ್ನು ಮಾಡಿದರಲ್ಲದೇ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ದುಡಿದರು.

ಜಮೀಲಾ ತಾಯಿ ಮಧ್ಯಮ ವರ್ಗದಿಂದ ಬಂದಂತಹ ಗೃಹಿಣಿ. ಅವರ ತಾತ ಅಂದಿನ ದಿನಗಳಲ್ಲಿ ಅರೇಬಿಕ್ ಪ್ರಾಧ್ಯಾಪಕರಾಗಿದ್ದವರು. ಹೀಗೆ ಜಮೀಲಾ ಎರಡು ಭಿನ್ನ ವಾತಾವರಣದಲ್ಲಿ ಬೆಳೆದವರು. ತಂದೆ ತಮ್ಮ ಭಾವನೆ ಮತ್ತು ಚಿತ್ರಗಳೊಂದಿಗೆ ಬದುಕುತ್ತಿದ್ದಾತ. ಜಮೀಲಾ ಮೂವರು

ಸೋದರಿಯರ ಹಾಗೂ ಸೋದರರ ಮಧ್ಯೆ ತುಂಬು ಕುಟುಂಬದಲ್ಲಿ ಬೆಳೆದಂತಹವರು.

ಬಾಲ್ಯದಿಂದಲೇ ನೃತ್ಯಗಾರ್ತಿಯಾಗಬೇಕೆಂದು ಜಮಿಲಾ ಕನಸು ಕಂಡವರು. ಮುಸ್ಲಿಂ ಮನೆಗಳಲ್ಲಿ ಹೆಂಗಸರು ನರ್ತಿಸುವಂತಿರಲಿಲ್ಲ. ತಂದೆಯಿಂದ ಏಳನೇ ವರ್ಷದಲ್ಲೇ ನರ್ತಿಸಬಾರದು ಎಂಬ ನಿರ್ಬಂಧದಿಂದ ಚಿತ್ರಕಲೆಗೆ ಹೆಚ್ಚು ಆಕರ್ಷಿತರಾದರು. ಆದರೆ ಚಿತ್ರಿಸಲು ಅವರಲ್ಲಿ ಅನುಮತಿ ಇರಲಿಲ್ಲ. ತಾವು ಚಿತ್ರಿಸಿದ ಚಿತ್ರಗಳಿಗೆ ತನ್ನ ತಮ್ಮನ ಹೆಸರು ಹಾಕಿ, ಆ ಚಿತ್ರಗಳಿಗೆ ಹೊಗಳಿಕೆ ಬಂದಾಗ ಒಳಗೊಳಗೇ - ಸಂತಸ ಪಡುತ್ತಿದ್ದಾಕೆ ತಂದೆಯಿಂದ ಚಿತ್ರ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯದ ಕಾರಣ ತಮ್ಮ ಕನಸು, ಭಾವನೆಗಳನ್ನು ಕವಿತೆಗಳ ಮೂಲಕ ಹೊರಹೊಮ್ಮಿದರು. ಈ ದುಃಖಗಳ ಎಳೆಯನ್ನು ನಿಶಾತ್‌ರ ಕವಿತೆಗಳಲ್ಲಿ ಕಾಣಬಹುದು. ಓದಿನಲ್ಲಿ ಮುಂದಿದ್ದ ಜಮಿಲಾಗೆ ತಾಯಿಯ ಪ್ರೋತ್ಸಾಹವಿತ್ತು. ತಮ್ಮ ಹದಿಮೂರನೇ ವಯಸ್ಸಿನಲ್ಲೇ ಪದ್ಯ ಬರೆಯಲು ಪ್ರಾರಂಭಿಸಿದ ಜಮಿಲಾ ಆಗಲೂ ದುಃಖಿತ ಪದ್ಯ ರಚಿಸಿದ್ದರು. ಅವು ಗಜಲ್‌ಗಳು. ಜಮಿಲಾರ ಬಾಲ್ಯ ಅಪೂರ್ವ ಕಲಾವಿದರ ಒಡನಾಟದಲ್ಲಿ ಕಳೆಯಿತು. ಖ್ಯಾತ ಚಿತ್ರಕಲಾವಿದ ಎಮ್.ಎಫ್.ಹುಸೇನ್, ಕೈಫಿ ಆಜ್ಮಿ, ಮಕ್‌ದೂಮ್ ಮೊಹಿನುದ್ದೀನ್ ರಜಾಕರ ವಿರುದ್ಧ ಹೋರಾಡಿಡ ಸಿ.ಪಿ.ಐ ನಾಯಕ ಹಾಗೂ ಕವಿ ಸುಲೈಮಾನ್ ಅರೀಬ್, ಆಲಂ ಖುಮ್ಮೇರಿ, ಅಖ್ತರ್ ಹುಸೈನ್, ಕವಿಗಳಾದ ಜೀನತ್ ಸಾಜೀದಾ, ಜೀಲಾನಿಬಾನು, ಅಜೀಜ್ ಕ್ಯಾಸಿ ಇವರ ಒಡನಾಟಗಳಿಂದ ಹರೆಯದಲ್ಲೇ ಸಾಹಿತ್ಯಿಕ ಸಂವೇದನೆ ಬೆಳೆಯಿತು. ಜಮಿಲಾರ ಬರವಣಿಗೆ ಛಂದಸ್ಸುಗಳಿಂದ ಕೂಡಿರುತ್ತಿತ್ತು. ಹೆಚ್ಚಿನ ಕವನಗಳಲ್ಲಿ ಒಂದು ಲಯವಿದ್ದರೂ ಅವೆಲ್ಲಾ ಗದ್ಯ ಪದ್ಯಗಳು. ತಮ್ಮ ಹದಿನೈದನೇ ವಯಸ್ಸಿನಲ್ಲೇ ಮುಷೈರಾಗಳಲ್ಲಿ ಭಾಗವಹಿಸುತ್ತಿದ್ದರು. ಹೈದರಾಬಾದಿನಲ್ಲಿ ಮುಷೈರಾಗಳಿಗೆ ಲಕ್ಷಗಟ್ಟಲೇ ಜನರು ಬರುತ್ತಿದ್ದರು. ರೇಡಿಯೋದಲ್ಲಿ ಸುಮಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಜಮಿಲಾರ ಮದುವೆ ಸಯೀದ್ ಆರ್.ರೆಹಮಾನ್‌ರೊಡನೆ ಆಯಿತು. ಆತ ಸಾಧರಣ ವ್ಯಕ್ತಿಯಾದರೂ ಕಲಾಸೋಪಕರಾಗಿದ್ದರು. ಹಾಗಾಗಿ ಜಮಿಲಾರಬರವಣಿಗೆಗೆ ಎಂದೂ ಅಡ್ಡಿ ಬಂದವರಲ್ಲ. ಅವೆರಡು ಅನ್ಯೋನ್ಯ ಸಂಸಾರವಾಗಿತ್ತು. ಇಬ್ಬರು ಗಂಡು ಮಕ್ಕಳು. ಮದುವೆಯ ನಂತರ ಬಿ.ಎಡ್.ಮಾಡಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದರು. ನಂತರವೂ ಹಲವಾರು ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು. ಮುಸ್ಲಿಂ ಸಂಪ್ರದಾಯ ಕುಟುಂಬದಲ್ಲಿ ಬೆಳೆದರೂ ಪ್ರಗತಿಪರವಾಗಿ ಅವರ ಆಲೋಚನೆಗಳಿತ್ತು. ಬಾಲ್ಯದಿಂದಲೂ ಕಲಾವಿದರ, ಸಾಹಿತಿಗಳ ಒಡನಾಟವು ಇದಕ್ಕೆ ಕಾರಣವೆನ್ನಬಹುದು. 1989 ರಲ್ಲಿ ಹೈದರಾಬಾದಿನಲ್ಲಿ ಭಯಂಕರ ಗಲಭೆಯಾಯಿತು. ಎಲ್ಲಾ ಕಡೆ ಸಾವು ನೋವು, ಇವು ಅವರ ಎಷ್ಟೋ ಕವನಗಳಿಗೆ ಅದು ಮೂಲಧಾತುವಾಯಿತು.

ಜಮಿಲಾ ಸುಮಾರು ನಾಟಕಗಳನ್ನು ಬರೆದು, ನಿರ್ದೇಶಿಸಿದ್ದಾರೆ. ಅದು ಸಹ ಹೈದರಾಬಾದಿನ ಆಡು ಭಾಷೆ ದಕ್ಕನಿಯಲ್ಲಿ. ಐರಿಷ್ ನಾಟಕಗಳನ್ನು ಭಾಷಾಂತರ ಮಾಡಿ ನಾಟಕ ಮಾಡಿಸಿದ್ದಾರೆ. ದೇಶದ ಹಲವಾರು ನಾಟಕೋತ್ಸವಗಳಲ್ಲಿ ಪಾಲ್ಗೊಂಡ ಅವರು ಬಾದಲ್‌ದಾ ತೆಂಡೂಲ್ಕರ್, ಇಸ್ಮತ್ ಚುಗ್ತಾಯಿ ಅವರಿಂದ ಪ್ರಭಾವಿತರಾಗಿ ವಿವಿಧ ಪ್ರಕಾರಗಳಲ್ಲಿ ವಸ್ತುನಿಷ್ಠ ನಾಟಕಗಳನ್ನು ರಚಿಸಿದ್ದಾರೆ.

ರಾಷ್ಟ್ರೀಯತೆ ಎಂಬ ಹೆಸರಿನ ಮರೆಯಲ್ಲಿ ಪ್ರತ್ಯೇಕತೆಯ ಭಾವನೆ ಕಾಳ್ಗಿಚ್ಚಿನಂತೆ ಲೋಕದಲ್ಲೆಲ್ಲಾ ಹರಡಿದೆ. ಸಾಮ್ರಾಜ್ಯ ಬೇಕಾದವರು, ಅಧಿಕಾರ ಬೇಕಾದವರು, ಬಂಡವಾಳಗಾರರು, ದೊಡ್ಡ ರಾಷ್ಟ್ರಭಕ್ತರೆಂಬ ಸೋಗು ಹಾಕಿ ಸ್ವಪ್ರಯೋಜನಾರ್ಥವಾಗಿ ಇತರರಿಗೂ ರಾಷ್ಟ್ರಾಂಧತೆಯನ್ನು ಕಲಿಸುತ್ತಾರೆ. ಸಾಮಾನ್ಯ ಜನರಿಗಾದರೂ ಬೇರೇನು ತಾನೇ ಬೇಕಾಗಿದೆ ? ಅದೇ ಭೂಮಿ, ಅದೇ ಅಧಿಕಾರ, ಅದೇ ಶ್ರೀಮಂತಿಕೆ. ಪರರಾಷ್ಟ್ರವನ್ನು ಜಯಿಸಿದರೆ ನಾವು ತಯಾರಿಸುವ ಸರಕುಗಳಿಗೂ ಅಂತೆಯೆ ನಮ್ಮ ವಿಶಿಷ್ಟ ರಾಜಕೀಯ ಮತ್ತು ಧಾರ್ಮಿಕ ವಾದಗಳಿಗೂ ಪ್ರಸಾರ ಕ್ಷೇತ್ರ ದೊರೆತಂತಾಗುವುದರಿಂದ ಎಲ್ಲರೂ ಎಲ್ಲರನ್ನೂ ಗೆಲ್ಲಲು ಹವಣಿಸುತ್ತಾರೆ.

ಹಿಂಸಾಚಾರ ಮತ್ತು ಘರ್ಷಣೆಯು ತಾಳುವ ನಾನಾ ರೂಪಗಳನ್ನು ಪೂರ್ವಭಾವನೆಯಿಲ್ಲದೆ ನಿರ್ವಿಕಾರ ಬುದ್ಧಿಯಿಂದ ನೋಡುವುದನ್ನು ಕಲಿತರೆ ರಾಷ್ಟ್ರಾಂಧತೆಯು ನಮ್ಮ ಕಣ್ಣನ್ನು ಕೆಡಿಸುವುದಿಲ್ಲ. ಸರಕಾರ ಮತ್ತು ತಜ್ಞರು, ಸ್ವಾರ್ಥಪೂರಿತ ಪ್ರಚಾರದಿಂದ ಪ್ರಭಾವಿತರಾಗದಿರುವ ಜನರನ್ನು ಯಾವ ಪೂರ್ವಭಾವನೆಯಿಂದಲೂ ಪೀಡಿಸಲು ಸಾಧ್ಯವಿಲ್ಲ.

'ಶಿಕ್ಷಣ ಮತ್ತು ಜೀವನದ ಅರ್ಥ'

ಜೆ.ಕೃಷ್ಣಮೂರ್ತಿ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER



Manjula C.G., No. 4, Vaishaka,
2nd cross, Marakam road,
Ashok nagar, Bangalore-25.

ವಿಳಾಸ :

ಮಾನಸ

ಪಂಚಾಯಿತಿ ರಸ್ತೆ, ಕಾಡುಗೋಡಿ

ಬೆಂಗಳೂರು - 560 067